ಕರ್ನಾಟಕ ಸರ್ಕಾರ



ಬೆಳ್ಳಿಮುಷ್ಟಿ

ಕಟ್ರತನ ಕೆ. ಬೆಳ್ಯಪ್ಪ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡಮಿ

ಬೆಳ್ಳಿಮುಷ್ಟಿ

ಕಟ್ರತನ ಕೆ. ಬೆಳ್ಯಪ್ಪ

ಬೆಳ್ಳಿಮುಷ್ಟಿ

'BELLIMUSHTI' an Autobiography of Katrathana K. Belliappa written by , Katrathana K. Belliappa, Retired Teacher, Balamuri Village, Madikeri Taluk, Kodagu District, translated to Arebhase language by Bariyanda R. Joyappa, Published by 'Karnataka Arebhase Samskrithi Mathu Sahitya Academy'

ಬೆಲೆ : Price Rs. :

ಪ್ರಕಟಣೆ : 2015

ಸಲಹ ಸಮಿತಿ :

ಶ್ರೀ ಕೊಲ್ಯದ ಗಿರೀಶ್

ಡಾ. ಪೂವಪ್ಪ ಕಣಿಯೂರು

ಡಾ. ಕೋರನ ಸರಸ್ವತಿ ಪ್ರಕಾಶ್

ಶ್ರೀ ಮೋಹನ ಸೋನ

ಶ್ರೀಮತಿ ಸಂಗೀತ ರವಿರಾಜ್

ಪ್ರಕಟಣೆ : **ರಿಜಿಸ್ಟ್ರಾರ್**

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಕಾಫಿ ಕೃಪ ಬಿಲ್ಡಿಂಗ್,

ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.

ದೂ. : 08272-223075

ಮುದ್ರಣ :

ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್, ಮಡಿಕೇರಿ.

Ph : 08272-224919, 9448135592

ಸುರೂನ ಮಾತ್

ನನ್ನ ಪ್ರೀತಿನ ಕುಟುಂಬದವೇ, ಬಂಧುಗ ಮತ್ತೆ ಸಿನೇತರೆ, ಅಲ್ಲದೆ ನನ್ನ ವಿದ್ಯಾರ್ಥಿಗಳೇ, "ಜೀವಿಗಳ್ಲಿ ಮನ್ಸನೇ ದುರ್ಬಲ"ತ್ತೇಳ್ವಂಗೆ ಜೀವಿಗಳ್ಲಿ ಮನ್ಸಜಲ್ಮನೂ ಒಂದ್ ಜಲ್ಮ. ಮಾನವ ಜಲ್ಮ ಸಿಕ್ಕಿದ್ ತುಂಬಾ ಕಷ್ಟನೂ ಮತ್ತೆ ಅತಿ ಕಮ್ಮಿನೂ ಆಗುಟ್ಟು. ಜೀವಿಗಳ್ಲಿ ಮಾನವ ಜಲ್ಮ ತುಂಬ ಶ್ರೇಷ್ಠದ್. ಮನ್ಸ ಬುದ್ಧಿಜೀವಿ. ಭಗವಂತ ಕೊಟ್ಟ ಈ ನನ್ನ ಜಲ್ಮಲಿ, ಬದ್ಕ್‌ಲಿ ಎಷ್ಟೋ ಏರ್‌ತಗ್ಗ್‌ಗಳ್ನ ಕಂಡೊಳೊ. ಆದರೂ ಧೈರ್ಯ ಕೆಡದೆ ಸಮಸ್ಯೆಗಳ್ನೂ ಕಷ್ಟಗಳ್ನೂ ಸುಕದುಕ್ಕಗಳ್ನೂ ಸವಾಲಾಗಿ ಸ್ವೀಕರಿಸಿಯೊಳೆ, ಗೆದ್ದೊಳೆ. ಇಂದ್ ಮಕ್ಕ, ಪಿಳ್ಳಿಕ, ಮರಿಪಿಳ್ಳಿಗಳೊಟ್ಟಿಗೆ ಸಂತೃಪ್ತ ಜೀವನ ಮಾಡ್ತಾ ಒಳೆತ್ತೇಳ್ದು ನಂಗೆ ಕುಸಿನ ವಿಷಯ ಆಗುಟು.

ಈ ಸಂದರ್ಭಲಿ ನನ್ನ ಜೀವನ ಚರಿತ್ರೆನ ದಾಖಲು ಮಾಡೊಕುತ್ತೇಳುವ ಆಸೆ ನಂಗಾತ್. ಗ್ಯಾನ ಶಕ್ತಿ, ಕೈಬರಹ ಮತ್ತೆ ದೃಷ್ಟಿ ತಕ್ಕ ಮಟ್ಟಿಗೆ ಸರಿಯಾಗುಟ್ಟುತ್ತೇಳ್ವ ನಂಬಿಕೆ ನಂದ್. ಈ ಗ್ಯಾನದ ಆಧಾರಲಿ ನನ್ನ "ಜೀವನ ಕಥನ"ನ ಅತೀ ಕಮ್ಮಿಲಿ ನಿರೂಪಣೆ ಮಾಡೊಳೆ. ನನ್ನ ಬದ್ಕ್‌ನ ಸೊಂತ, ಸಾಮಾಜಿಕ, ಶೈಕ್ಷಣಿಕ ಮತ್ತೆ ವ್ಯವಹಾರಿಕ ಜೀವನದ ಕೆಲಮುಖ್ಯ ಘಟನೆಗ ನನ್ನ ಜೀವನದ ಯಾವ ಕಾಲಕ್ಕೂ ದಾಖಲೆಯಾಗಿ ಇರ್ಲಿತ್ತೇಳ್ವ ಆಸೆಂದ ಬರ್ದೊಳೆ. ಈ ಲೇಖನಕ್ಕೆ "ಬೆಳ್ಳಿಮುಷ್ಟಿ"ತ ಹೆಸ್ರಿಸಿಯೊಳೆ. ಯಾಕೆತ್ತೇಳಿಕೆ ಹಿಂದೆ ಭಾರತದ ರಾಷ್ಟ್ರಪತಿಯಾಗಿದ್ದ ಶ್ರೀ ವಿ.ವಿ. ಗಿರಿಯವು ಹೆಮ್ಮೆಂದ ತಮ್ಮ 80ನೇ ವಯಸ್ಸ್‌ಲಿ ತನ್ನ "ಗಿರಿಮುಷ್ಠಿ"ನ ತೋರಿಸಿನೆತ ಹೇಳ್ದ ಗ್ಯಾನಂದ ಈ ನನ್ನ 90ನೇ ವಯಸ್ಸ್‌ಲಿ ಈ ಲೇಖನ ಬರೆಕುತ್ತೇಳುವ ಹುಮ್ಮಸ್ಸಂದ "ಬೆಳ್ಳಿಮುಷ್ಟಿ"ತ ಹೆಸ್ರ್ ಇಸಿಕೆ ಕಾರಣಾತ್. ತಪ್ಪುಗ ಇದ್ದರೆ ನನ್ನ ಪಾಲಿಗೆ ಬುಡಿ. ಒಪ್ಪುಗಳ್ನ ಸ್ವೀಕರಿಸಿಕಣೆ.

ವಂದನೆಗ

ಕಟ್ರತನ ಕೆ. ಬೆಳ್ಯಪ್ಪ

ನಿವೃತ್ತ ಅಧ್ಯಾಪಕ

ಬಲಮುರಿ ಗ್ರಾಮ ಮತ್ತೆ ಅಂಚೆ

ಮಡಿಕೇರಿ ತಾಲೂಕು, ಕೊಡಗು

ದೂರವಾಣಿ . 08274–268290

ಮೊಬೈಲ್ : 8197063328

ಅಧ್ಯಕ್ಷರ ಮಾತ್

ಅರೆಬಾಸೆಲಿ ಕಥೆ, ಕವನ, ನಾಟಕ ಬರೆಯುವ ಲೇಖಕರ್ನ ಕಂಡ್ರೆ ಖುಷಿ ಆದೆ. ಸರಕಾರ ರಚನೆ ಮಾಡ್ದ ಅರೆಭಾಷೆ ಅಕಾಡೆಮಿಗೆ ಕೂಡ ಸಾರ್ಥಕತೆ ಇದ್ದದೆ. ಶುರುಗೆ 4 ಪುಸ್ತಕನ ಪ್ರಕಟನೆ ಮಾಡ್ದ ಗೌರವ ಅಕಾಡೆಮಿಗೆ ಸಲ್ಲಿದೆ, ಮತ್ತೆ 6 ಪುಸ್ತಕನ ಪ್ರಕಟಣೆ ಮಾಡ್ತಾವೊಳೊ.

ಪುಸ್ತಕ ಬರ್ದ ಎಲ್ಲಾ ಲೇಖಕರಿಗೂ ನನ್ನ ಹೃತ್ಪೂರ್ವಕ ಅಭಿನಂದನೆನ ತಿಳಿಸ್ತಾವೊಳೆ. ಬರ್ದ ಎಲ್ಲಾ ಪುಸ್ತಕ ಶ್ರೇಷ್ಠ ಅಂತ ನಾನ್ ಹೇಳ್ದುಲೆ. ಲೇಖಕರ್ ಅವರ ಸೃಜನ ಶೀಲತೆನ ಈ ಲೇಖನಲಿ ತೋರ್‍ಸೊಳೊ. ಹಂಗೆ ಎಲ್ಲಾ ಪ್ರಕಾರಗಳ್ಲಿ ಅವರ ಸಾಮರ್ಥ್ಯನ ಓರೆಗೆ ಹಚ್ಚಿಯೊಳೊ.

ಈ ನಿಟ್ಟ್‌ಲಿ ಹಿರಿಯವು ಆದ ಶ್ರೀ ಕಟ್ರತನ ಬೆಳ್ಳಿಯಪ್ಪನವು ತಮ್ಮ ಇಳಿವಯಸ್‌ಲಿ ಬೆಳ್ಳಿಮುಷ್ಠಿ ಲೇಖನ ಬರ್‍ದೊಳೊ, ಅವು ತಮ್ಮ ಜೀವನಲಿ ಶಿಕ್ಷಕರಾಗಿದ್ದ್ ಸಾಕಷ್ಟ್ ವಿದ್ಯಾರ್ಥಿಗಳಿಗೆ ವಿಧ್ಯಾದಾನ ಮಾಡಿಯೊಳೊ ಅಲ್ಲದೆ ಕೆಲ್ಸ ಮಾಡ್ದ ಶಾಲೆಲಿ ಉದ್ಯಾನವನ ನಿರ್ಮಿಸಿ ಮಾದರಿ ಶಿಕ್ಷಕರಾಗಿ ನಿವೃತ್ತಿ ಹೊಂದಿಯೊಳೊ, ಶಿಸ್ತ್‌ನ ಪಾಲಿಸಿಕೊಂಡ ಅವು ತಮ್ಮ ಜೀವನದ ಆಗುಹೋಗುಗಳ ಮತ್ತೆ ಸುತ್ತಮುತ್ತ ಪರಿಸರ ಬದಲಾವಣೆಗಳ ಬಗ್ಗೆ ಮಾರ್ಮಿಕವಾಗಿ ನೈಜ ವಿಚಾರನ ಈ ಕೃತಿಲಿ ಮೂಡ್ಸಿಯೊಳೊ.

ತಮ್ಮ ಜೀವನ ಚರಿತ್ರೆನ ಬರ್ದ್ ಕೃತಿನ ಪ್ರಕಟಣೆಗೆ ಕೊಟ್ಟ ಶ್ರೀ ಕಟ್ರತನ ಬೆಳ್ಳಿಯಪ್ಪನವ್ಕೆ ಹಂಗೆ ಅರೆಭಾಷೆಗೆ ಅನುವಾದ ಮಾಡಿಕೆ ಸಹಕರಿಸಿದ ಶ್ರೀ ಬಾರಿಯಂಡ ಜೋಯಪ್ಪನವ್ಕ, ಪುಸ್ತಕ ಸಮಿತಿಯವ್ಕ ಅಕಾಡೆಮಿ ಸದಸ್ಯರಿಗೂ ನನ್ನ ಪ್ರೀತಿಯ ಕೃತಜ್ಞತೆನ ಸಲ್ಲಿಸ್ತಾವೊಳೆ.

ಕೊಲ್ಯದ ಗಿರೀಶ್
ಅಧ್ಯಕ್ಷರ್

1. ನಮ್ಮೂರು ಬಲಮುರಿ
2. ಬೆಳ್ಳಿ ಮುಷ್ಟಿ
3. ಹೆಣ್ಣ್, ಹೊನ್ನ್, ಮಣ್ಣ್
4. ಕೊಡಗ್ ಅಂದ್ ಇಂದ್

೧. ನಮ್ಮೂರು ಬಲಮುರಿ

ಪ್ರಿಯ ಓದುಗರೇ, ನಾ ನನ್ನ ಬೆಳ್ಳಿಮುಷ್ಟಿ ಲೇಖನಲಿ ನನ್ನ ಆತ್ಮ ಚರಿತ್ರೆಗೆ ತಕ್ಕಂಗೆ ಸಾಹಿತಿ ಡಾ.ಕೆ. ಕುಶಾಲಪ್ಪಗೌಡರ್, ಸುಳ್ಯ ತಾಲೋಕ್ ಇವರ ಮಾರ್ಗದರ್ಶನದಂಗೆ ನಾ ಸುರೂಗೆ ನನ್ನ ಹುಟ್ಟೂರು ಬಲಮುರಿ ಗ್ರಾಮದ ಬಗ್ಗೆ ವಿಶ್ಲೇಷಣೆ ಮಾಡಿಕಂಡ್ ಈ ನನ್ನ ಲೇಖನನ ಮುಂದೊರ್ಸಿನೆ.

ಕೊಡಗ್‌ಲಿ ಹಿಂದೆ ನಾಡ್‌ಗಳಾಗಿದ್ದ ಸಂದರ್ಭಲಿ ಕಡಿಯತ್ತು ನಾಡಿಗೆ ಸೇರ್ದ ಪಾರಾಣೆ ಊರ್‌ಂದ ಸುಮಾರ್ 6ಕಿ.ಮೀ ದೂರಲಿರುವ ಮೂರ್ನಾಡು ಊರ್‌ನ ಮಧ್ಯ ಭಾಗಲಿ ಪಾರಾಣೆಂದ 3ಕಿ.ಮೀ ದೂರದ ಕಾವೇರಿ ಹೊಳೆಯ ಬಲಭಾಗಲಿ ಇರುವ ಒಂದು ಸಣ್ಣ ಗ್ರಾಮ. ನಾಪೋಕ್ಲು ಹೋಬಳಿಗೆ ಸೇರ್ದ ಊರು. ಹಂಗೆ ಕೊಡಗ್‌ನ ಮಡಿಕೇರಿ ತಾಲೂಕಿಗೆ ಸೇರ್ದ ಗ್ರಾಮ. ಈ ಗ್ರಾಮದ ಮೂಡಕ್ಕೆ ಕಾವೇರಿ ಹೊಳೆನೂ, ಪಡುದಿಕ್ಕಿಗೆ ಕಕ್ಕಬ್ಬೆ ಹೊಳೆನೂ ಈ ಗ್ರಾಮದ ಸುತ್ತಿಕಂಡಿರುದರ್‌ಂದ ಇದ್ ಒಂದ್ ಪರ್ಯಾಯ ದ್ವೀಪದಂಗುಟ್ಟು.

ಗ್ರಾಮ ಸಣ್ಣದಾದರೂ ಕೀರ್ತಿ ದೊಡ್ಡದ್ ತೇಳ್ವಂಗೆ ಬಲಮುರಿ ಗ್ರಾಮಕ್ಕೆ ಒಂದ್ ಇತಿಹಾಸವೇ ಉಟ್ಟು.

ಇತಿಹಾಸ : ಬಲಮುರಿತೇಳ್ರೆ ಬಲಕ್ಕೆ ತಿರ್‌ಗ್‌ತ ಅರ್ಥ. ಕವೇರ ಮುನಿನ ಮಗಳಾದ ಕಾವೇರಿ ಅಗಸ್ತ್ಯನ ಕುಸಿಪಟ್ಟ್ ಮೊದುವೆ ಆಗಿ ಅವಳ ಒಪ್ಪಂದದಂಗೆ ಕಾವೇರಿನ ಒಂಟಿಯಾಗಿ ಬುಟ್ಟ್ ಇರ್‍ಕಾಗದ್‌ತ್ತೇಳ್ವ ಒಪ್ಪಂದ ಮುರ್‍ದೋದ್ದರ್‌ಂದ, ಅಗಸ್ತ್ಯನಲ್ಲಿ ಸಿಟ್ಟಾಗಿ ಕಾವೇರಿ ಬ್ರಹ್ಮಗಿರಿ ಬುಡಂದ ಧುಮುಕಿ, ಗುಪ್ತಗಾಮಿನಿಯಾಗಿ ಜಲಧಾರೆಯ ರೂಪಲಿ ಹರ್‍ದ್‌ಬಂದ್ ಭಾಗಮಂಡಲದ ಹತ್ರದ ಹರಿಶ್ಚಂದ್ರತೇಳ್ವಲ್ಲಿಗಾಗಿ ದಾಟಿಕಂಡ್ ಬಾಕನ ಬಲಮುರಿನ ಜನಸಮುದಾಯದವು ನೀರಿಗೆ ಇಳ್ದ್ ಕಾವೇರಿನ ಮುಂದೆ ಹೋದು ಬೇಡತ ತಡೆಕನ ಕಾವೇರಿ ತನ್ನ ಬಲಕ್ಕೆ ತಿರ್‌ಗಿ ತಾನ್ ಬಂದ ದಾರಿನ ನೋಡಿ ನನ್ನನ್ನ ಯಾರೂ ತಡೆಕ್ಕಾಗದ್, ನಾ ಲೋಕಕಲ್ಯಾಣಕ್ಕಾಗಿ ಹೊರ್‍ಟೋಳೆತ ಹೇಳಿ ಬಲಮುರಿಯ ಜನಕೆ ಕುಸಿಕೊಟ್ಟ್ ಮುಂದೆ ಹೋತು. ಹೆಣ್ಮಕ್ಕ ನೀರ್‌ಗೆ ಇಳ್ದ್ ಕಾವೇರಿನ ತಡ್ದದ್‌ಕ್ಕೇ ನೀರ್‌ನ ಸೆಳ್ತಕ್ಕೆ ಹೆಣ್ಮಕ್ಕಳ ಸೀರೆ ನೆರಿಗೆ ಮುಂದೆ ಇದ್ದದ್ದ್ ಹಿಂದಕ್ಕೆ ತಿರ್‌ಗಿ ಹೋತ್. ಹಂಗಾಗಿ ಸೀರೆ ನೆರಿಗೆ ಹಿಂದೆ ಉಟ್ಟವೆತ ಪುರಾಣ ಹೇಳ್ದೆ. ಕಾವೇರಿ ತನ್ನ ಬಲಭಾಗಕ್ಕಾಗಿ ಒಂದ್ ಸುತ್ತು ತಿರ್‌ಗಿದ್ದರ್‌ಂದ ಅ ಜಾಗಕ್ಕೆ ಬಲಮುರಿತ ಹೆಸ್ರಾತ್. ಬಲಮುರಿಲಿ ಕಾವೇರಿ ಹೊಳೆ ಇಂದೂಸನ ಸುಳಿ ಉಟ್ಟು. ಕಾವೇರಿನ ಕಣ್ವ ಋಷಿ ಹುಡ್ಕಿಕಂಡ್ ಬಂದ್ ಬಲಮುರಿಯ ಎಡಭಾಗಲಿ ನೆಲೆಯಾದ್ದರ್‌ಂದ ಬಲಮುರಿಯ 1/3 ಭಾಗಕ್ಕೆ ಕಣ್ಣ ಬಲಮುರಿತ ಹೆಸ್‌ರಾತ್. ಬಲಮುರಿಲಿ ಕಾವೇರಿ ಹೊಳೆಯ ಬಲಭಾಗಕ್ಕೆ ಈಶ್ವರ ದೇವಸ್ಥಾನ, ಎಡಭಾಗಲಿ ಕಣ್ವ ಋಷಿಯ ದೇವಸ್ಥಾನ ಉಟ್ಟು. ದೇವ್ರ್‌ಗೆ ಯಾಗೋಳು ಪೂಜೆ ಮಾಡಿವೆ. ವರ್ಷೋಳು ಅಕ್ಟೋಬರ್ 17ರ ತುಲಾ ಸಂಕ್ರಮಣದಂದ್ ತಲಕಾವೇರಿಲಿ ತೀರ್ಥೋದ್ಭವ ಅಲ್ಲದೆ ಭಾಗಮಂಡ್ಲಲಿ ಜಾತ್ರೆ ನಡ್ದರೆ, ಮಾರಣೆ ದಿನ 18ರಂದ್ ಬಲಮುರಿಲಿ

ಜಾತ್ರೆ ನಡ್ದದೆ. ಬಲಮುರಿಯ ಈಶ್ವರ ದೇವಸ್ಥಾನದ ಹತ್ರಲೇ ಪ್ರತ್ಯೇಕಾಗಿ ಗಣಪತಿ ಗುಡಿಯುಟ್ಟು. ಹಂಞ ಆಚೆಗೆ ವಿಷ್ಣುಮೂರ್ತಿ ದೇವರ ಸ್ಥಾನನೂ ಉಟ್ಟು.

ಸಂಪರ್ಕ : ಕಾವೇರಿ ಹೊಳೆಗೆ ಬಲುಮುರಿಲಿ ಅಡ್ಡಕ್ಕೆ 1953ರ್‌ಲಿ ಕೆಳಹಂತ ಸೇತುವೆನ ಕಟ್ಟಿದೊ. ಅದ್ ಇಂದೂ ಉಟ್ಟು. ಅದರ ಸುರೂನ ಸಮಲಿ ಸರಕಾರಂದ ದೋಣಿದ್ ವ್ಯವಸ್ಥೆ ಇತ್ತ್. ಈ ಕೆಳಹಂತದ ಸೇತುವೆಯಾದ್ದರ್‌ಂದ ನೆರೆ ಬಾಕನ ಸಂಪರ್ಕಇರ್ತಿತ್ಲೆ. ಹಂಗಾಗಿ ದೋಣಿ ಸಹಾಯಂದನೇ ಹೊಳೆನ ದಾಟಿ ಹೋಕಾಗಿತ್ತ್. ಸೂಮಾರ್ 1993–94ರ್‌ಲಿ ಕರ್ನಾಟಕಲಿ ಕಾಂಗ್ರೆಸ್ ಸರ್ಕಾರ ಇರಕನ ಮುಖ್ಯಮಂತ್ರಿ ಶ್ರೀ ಎಸ್. ಬಂಗಾರಪ್ಪನವು, ಕೊಡಗ್‌ನವೇ ಆದ ಶ್ರೀ ಎಂ.ಸಿ. ನಾಣಯ್ಯ, ಶಾಸಕರಾದ ಶ್ರೀ ಡಿ.ಎ. ಚಿಣ್ಣಪ್ಪ ಮತ್ತೆ ಎ.ಯಂ. ಬೆಳ್ಯಪ್ಪನವರ ಮಾರ್ಗದರ್ಶನಲಿ ಮಾನ್ಯ ಮುಖ್ಯಮಂತ್ರಿ ಬಂಗಾರಪ್ಪನವರ ಅಮೃತಹಸ್ತಂದ ಬಲಮುರಿಲಿ ಕಾವೇರಿ ಹೊಳೆಗೆ ಒಂದ್ ದೊಡ್ಡ ಮಾದರಿ ಸೇತುವೆಗೆ ಶಂಕುಸ್ಥಾಪನೆ ಮಾಡ್ದರ್‌ಂದ ಸುಮಾರ್ 2–3 ವರ್ಷಗಳ ಸಮೆಲಿ ಸುಮಾರ್ 3 ಕೋಟಿ ರೂ. ವೆಚ್ಚಲಿ ತಮಿಳ್‌ನಾಡ್‌ನ ಕಂಟ್ರಾಕ್ಟ್ ದಾರನ ಮೂಲಕ ಕೆಲ್ಸ ಸುರುಮಾಡಿ ಎತ್ತರದ ಸೇತುವೆ ಆತ್. ಹಂಗಾಗಿ ಯಾವ ನೆರೆಗೂ ಹೆದರದೆ ಸಂಪರ್ಕಕೆ ತೊಂದರೆ ಆಗದೆ ಎಲ್ಲಾ ಮಾದರಿಯ ವಾಹನಗ ಮತ್ತೆ ಜನಗ ದಾಟಿಯಾಡಿವೆ. ಮಳೆಗಾಲಲಿ ಕಾವೇರಿ ಹೊಳೆ ತುಂಬ್‌ಕನ ಹೊಲಗದ್ದೆಗೆಲ್ಲಾ ಮುಳುಂಗಿದೆ. ಪ್ರವಾಸಿಗರ್ ಆಗ ಸೇತುವೆ ಮೇಲೆಂದ ನಿತ್ತ್ ಕಂಡ್ ಮೈದುಂಬಿದ ಕಾವೇರಿ ಹೊಳೆಯ ದೃಶ್ಯ ನೋಡಿ ಕುಸಿಪಟ್ಟವೆ. ಬಲಮುರಿಯ ಈ ಎತ್ತರದ ಸೇತುವೆ ಕರ್ನಾಟಕವೇ ಅತೀ ಎತ್ತರದ ಎರಡನೇ ದೊಡ್ಡದ್‌ತ್ತೇಳುವ ವದಂತಿ ಉಟ್ಟು..

ಸಮಾಜ : ಸಮಾಜತ್ತೇಳ್ರೆ ಎಲ್ಲಾ ವರ್ಗದ ಜನ ಒಂದಾಗಿ ಕಷ್ಟ ಸುಖಗಳ್ನ ಹಂಚಿಕಂಡ್ ಬಾಳಿ ಬದುಕುದುತ ಅರ್ಥ. ಬಲಮುರಿ

ಗ್ರಾಮಲಿ ಎಲ್ಲಾ ವರ್ಗದ ಜನ ವಾಸಿಸುವೆ. ಕೊಡವರ್, ಗೌಡುಗ, ಐರಿಗ, ಮಡಿವಾಳರ್, ಬಿಲ್ಲವ್, ಬಂಟರ್, ಹರಿಜನ, ಗಿರಿಜನ, ಹೆಗ್ಗಡೆಗ ಮತ್ತೆ ಅಲ್ಪಸಂಖ್ಯಾತರಾದ ಮುಸಲ್ಮಾನರ್ ಇವೆಲ್ಲವೂ ಹಬ್ಬ ಹರಿದಿನಗಳ್‌ಲಿ ಮದುವೆ ಮುಂಜಿಗಳ್‌ಲಿ, ಸಾವು ನೋವುಗಳ್‌ಲಿ ಎಲ್ಲಾ ವರ್ಗದವು ಜೊತೆಗೂಡಿವೆ. ಪ್ರತಿ ವರ್ಗದವುಕೆ ತಮ್ಮದೇ ಆದ ಸಮಾಜಗ ಒಳೊ. ಅವುಗಳೆಲ್ಲಾ ಸ್ವಜಾತಿ ಸಮಾಜ ಆದರೆ ಎಲ್ಲಾ ವರ್ಗದವು ಸಭೆ ಸಮಾರಂಭಗಳ್‌ಲಿ ಭಾಗವಹಿಸುದೇ ಒಂದ್ ಸರಿಯಾದ ಸಮಾಜ. ಇದರ್ನ ಜಾತ್ಯಾತೀತ ಸಮಾಜತ್ತೇಳಕ್. ಇದ್ ನಮ್ಮ ಅಖಂಡ ಭಾರತಕ್ಕೆ ಗೌರವನ ತಂದ್‌ಕೊಟ್ಟದೆ. ಬಲಮುರಿಲಿ ಸುಮಾರ್ ಸರಿಸಮಾನ ಕೊಡವ ಮತ್ತೆ ಗೌಡ ಕುಟುಂಬಗ ಒಳೊ. ಕೊಡವರ್‌ಲಿ ಕೋಟೆರ, ಚಂಗಂಡ, ನಾಡಂಡ, ಪೊಡೆಯಂಡ, ತೊತ್ತಿಯಂಡ, ಪೇರಿಯಂಡ, ಬೊಳ್ಳಚೆಟ್ಟಿರ, ಬೊಳ್ತಂಡ, ಐಚೋಡಿಯಂಡ, ಪಾಲಂದಿರ, ಪೆಬ್ಬಾಟಂಡ, ಬಿದ್ದಂಡ ಕುಟುಂಬಗಳೊ. ಗೌಡ್ರುಗಳ್‌ಲಿ ಕಟ್ರತನ, ಕೊಟ್ಟಕೇರಿಯನ, ಮೇಡತನ, ಕುಂದನ, ಗುಡ್ಡೇರ, ಅಚ್ಚಾಂಡಿರ, ಬಾಕಿಲನ, ಚೀಯಪ್ಪನ, ಪೊನ್ನಚ್ಚನ ಹಿಂಗೆ ಬೇರೆ ಬೇರೆ ಕುಟುಂಬಗ ಒಳೊ. ಜನಸಂಖ್ಯೆಯು ಸುಮಾರಾಗಿ ಸಮಸಮ ಉಟ್ಟು. ಬಲಮುರಿ ಗ್ರಾಮ ಕಂದಾಯ ಇಲಾಖೆಗೆ ಮಡಿಕೇರಿ ತಾಲೂಕಿಗೂ ಚುನಾವಣೆ ನೀತಿ ಸಂಹಿತೆಗೆ ವೀರಾಜಪೇಟೆ ತಾಲೂಕಿಗೂ ಸೇರಿಟ್ಟು. ಗ್ರಾಮಲಿ ಸುಮಾರ್ 780 ರಷ್ಟ್ ಮತದಾರರ್ ಒಳೊ. ಅಲ್ಲದೆ ಬೇರೆಯವೆಲ್ಲಾ ಆಗಿ ಸುಮಾರ್ 1500 ರಷ್ಟ್ ಜನಸಂಖ್ಯೆಂದ ಕೂಡಿಟ್ಟು.

ಬಲಮುರಿ ಗ್ರಾಮ ಮೂರ್ ಕೇರಿಗಳ್‌ಂದ (Hamlet) ಕೂಡಿಟ್ಟು. ಪಾಲೆಂಗಟ್ಟು, ಪೆರ್ಯಾಂಗಟ್ಟು ಮತ್ತೆ ನೆಬ್ಬೂರು ಕೇರಿಲಿ ಸುಮಾರ್ 50–60 ಏಕ್ರೆಯಷ್ಟ್ ದೇವ್ರ ಕಾಡುಟ್ಟು. ಈ ಕಾಡ್‌ನ ಕೇರಿಯ ಜನರೇ ರಕ್ಷಿಸ್‌ತ್ತೊಳೊ. ಈ ದೇವ್ರ ಕಾಡ್‌ನ ಒಂದ್ ಕರೆಲಿ

ಮಾಂಗೋಲು ಶಾಸ್ತಾವು ದೇವರ ಸ್ಥಾನ ಉಟ್ಟು. ಪ್ರತಿ ವರ್ಷ ಏಪ್ರಿಲ್ ತಿಂಗದ ಒಬರಂದ್ ದೇವರ ವಾರ್ಷಿಕ ಹಬ್ಬ ನಡ್ದದೆ. ಆ ಸಂದರ್ಭಲಿ ಎತ್ ಪೋರಾಟ, ಹರಿಕೆ ಕಾಣಿಕೆ ಹಾಕುದು, ಹಗ್ಲ್ ಹೊತ್ತು ಬೊಳ್ಳಾಕುಟುತ್ತೇಳ್ವ ದೈವದ ಕೊಣ್ತ, ಇರ್ಳ್ ಹೊತ್ತ್‌ಲಿ ತೆರೆ ಕೊಣ್ತ ಅದ್ರೊಟ್ಟಿಗೆ ನರಿಪೂದತ್ತೆಲ್ಲಾ ಇದ್ದದೆ. ತೆರೆನ ಮುಂದೆ ಬೀಟಿಮರದ ಹೊತ್ತೆ ಬೆಳ್ಕ್ (ಪಟ್ಟಣಿ ತಿರಿ) ಮುಂದೊರ್ದದೆ ಇದರ್ನೆಲ್ಲಾ ದೇವರ ಬನಲಿ ಅರ್ಪಿಸುವೆ. ಹಬ್ಬದ ದಿನ ಕೇರಿಯವೆಲ್ಲವೂ ಪಟ್ಟಣಿ (ಒಂದೇ ರೀತಿಯ ಆಹಾರ) ಮಾಡೊಕು. ಹಬ್ಬ ತೀರುವ ಮುಟ್ಟ್ ತೇಳ್ರೆ 15 ದಿನ ಕೇರಿಲಿ ಹಬ್ಬದ ಕಟ್ಟು (ಪ್ರಾಣಿ ಹಿಂಸೆ ಬತ್ತ್) ಪಾಲ್ಲೊಕು. ನಾ ಇದೇ ನೆಬ್ಬೂರು ಕೇರಿ ನಿವಾಸಿ. ಪ್ರತಿ ಕುಟುಂಬದ ಹಬ್ಬದ ತೆರಿಗೆ ಪಾವತಿ ಮಾಡೊಕು. ಪಾಲೆಂಗಟ್ಟು ಕೇರಿಲಿಯೂ ವರ್ಷಕ್ಕೆ ಒಮ್ಮ ಭದ್ರಕಾಳಿ ದೇವರ ಹಬ್ಬ ಏಪ್ರಿಲ್ ತಿಂಗಲಿ ನಡ್ದದೆ. **ಸೇವಾ ವಿಭಾಗ :** ಗ್ರಾಮಲಿ ಹಿರಿಯ ಪ್ರಾಥಮಿಕ ಶಾಲೆ ಉಟ್ಟು. ಎರಡ್ ಮೂರು ಅಂಗನವಾಡಿ ಕೇಂದ್ರಗಳ ಒಳೊ. ಬಲಮುರಿಯ ದವಸ (ಭತ್ತದ) ಭಂಡಾರ ಉಟ್ಟು. ದವಸ ಭಂಡಾರದ ವತಿಂದ ಒಂದ್ ಪಡಿತರ ಚೀಟಿ ಅಂಗಡಿ ಕಾರ್ಯನಿರ್ವಹಿಸಿದೆ. ಅಲ್ಲೇ ಹತ್ರಲಿ ಹಳೆಯ ಕಾಲದ ಯೂನಿಯನ್ ಕಟ್ಟಡಲೇ ಅಂಚೆಕಚೇರಿ ಉಟ್ಟು. ಅದರ ಹತ್ರಲೇ ಸರಕಾರದವು ಕಟ್ಟಿಕೊಟ್ಟ ಸಮುದಾಯ ಭವನ ಉಟ್ಟು. ಯೂನಿಯನ್ (Society) ಆಡಳಿತ ಮಂಡಲಿಯವೇ ಮಹಾದೇವರ ಉತ್ಸವದ ಸಮಿತಿ ಸದಸ್ಯರಾಗಿಯೊಳೊ. ವರ್ಷಂಪ್ರತಿ ಮಾರ್ಚ್ ತಿಂಗ 10ರಂದ್ ಮಹಾದೇವರ ಉತ್ಸವ ನಡ್ದದೆ. ಬಲಮುರಿಲಿ ಸ್ತ್ರೀ–ಸ್ವಸಹಾಯ ಸಂಘಗ ಒಳೊ. ಈ ಗುಂಪುಗ ಇರ್ದರ್‌ಂದ ಇವರ ಉಳಿತಾಯ ಖಾತೆಗಳ್‌ಲಿ ಹಣ ಸಂಗ್ರಹ ಆಗಿ ಊರ್‌ನ ಹೆಣ್ಮಕ್ಕಳ, ಅದರ್‌ಲೂ ಕೂಲಿ ಕಾರ್ಮಿಕರ ಬದ್ಕ್ ಬಹಳಷ್ಟ್ ಸುಧಾರ್ಸಿಟ್ಟು. ಈ ಗ್ರಾಮಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

ಅಡಿಲಿ ಗಂಡ್ ಜನರ ಮತ್ತೆ ಹೆಣ್ಮಕ್ಕಳ ಸ್ವಸಹಾಯ ಸಂಘ ಒಳೊ. ಈ ಗುಂಪುಗ ವಾರಕ್ಕೊಮ್ಮೆ ಸಭೆ ಸೇರಿ ತಮ್ಮ ಉಳ್ತಾಯ ಖಾತೆಗಳ್‌ಲಿ ಹಣ ಕೂಡ್ಸಿ ಇಸುದರ ಒಟ್ಟಿಗೆ ಸಾಲನ ಹಿಂದಕ್ಕೆ ಕಟ್ಟಿವೆ. ಇಂತಹ ಸ್ವಸಹಾಯ ಸಂಘಗ ಊರ್‌ಲಿ ಸುರಾಗಿರುರ್‌ಂದ ಗಾಂಧೀಜಿಯವರ ಗ್ರಾಮಾಭಿವೃದ್ಧಿನ ಕನ್ಸ್ ನನ್ಸಾಗಿರ್‌ದುತ್ತೇಳುದರ್‌ಲಿ ಸಂಶಯ ಇಲ್ಲೆ.

ಬಲಮುರಿ ಗ್ರಾಮ "ಪಂಚ ಪಂಚಾಂಗದ ಪಂಚಾಯಿತಿ" ತ್ತೇಳ್ವಂಗೆ ಐದ್ ಗ್ರಾಮಗಳ ಪಂಚಾಯಿತಿ ಕೇಂದ್ರ ಆಗಿರ್‌ವ ಪಾರಾಣೆ ಪಂಚಾಯಿತಿಗೆ ಒಳಪಟ್ಟದೆ. ಗ್ರಾಮಂದ ಚುನಾಯಿತರಾದ ಪಂಚಾಯಿತಿ ಸದಸ್ಯರ್‌ಗ ಗ್ರಾಮದ ಅಭಿವೃದ್ಧಿಗೆ ಏನೂ ಕೊರತೆಯಿಲ್ಲೆ. ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯ್ತಿ ಮತ್ತೆ ಶಾಸಕರ ನಿಧಿಗಳ್‌ಂದ ಹಲವಾರ್ ಕಾಮಗಾರಿ ಕೆಲ್ಸಗ ಗ್ರಾಮಕ್ಕೆ ಆಗುಟ್ಟು. ರಸ್ತೆಗಳಿಗೆ ಕಲ್ಲ್ ಹಾಸುದು, ಡಾಮರೀಕರಣ, ದೇವಸ್ಥಾನಗಳ ಜೀರ್ಣೋದ್ಧಾರ, ಕುಡಿವ ನೀರ್‌ನ ಸೌಕರ್ಯ ಹಿಂಗೆ ಹತ್ತ್ ಹಲವು ಅಭಿವೃದ್ಧಿ ಕೆಲ್ಸಗ ಬಲಮುರಿಲಿ ಆಗುಟ್ಟು. ಬಲಮುರಿಲಿ ಕೂಲಿಕಾರ್ಮಿಕರ ವಸತಿ ಕಾಲೋನಿಗ 2–3 ಕಡೆ ಪೈಸಾರಿ ಸಾಗಲಿ ಒಳೊ. ಗ್ರಾಮದ ಎಲ್ಲಾ ಕುಟುಂಬಕ್ಕೂ ಐನ್‌ಮನೆ ಉಟ್ಟು. ಐನ್‌ಮನೆ ದುರಸ್ತಿ ಕೆಲ್ಸಗಳ್ನ ಕುಟುಂಬದ ಎಲ್ಲಾ ಸದಸ್ಯರ್ ಒಟ್ಟಾಗಿ ಮಾಡಿವೆ. ಐನ್‌ಮನೆಲಿ ಶುಭ ಅಶುಭ ಕಾರ್ಯ ನೇರವೇರ್ದೆ. ಐನ್‌ಮನೆಲಿ ಗುರುಕಾರೋಣಂಗೆ ಎಡೆ ಇಕ್ಕಿ, ದೈವಾಧೀನರಾದವುಕೆ ಶ್ರದ್ಧಾಂಜಲಿ ಸಲ್ಲ್‌ಸ್‌ವೆ. ಗೌಡ ಕುಟುಂಬದವು ಮೂರ್ ವರ್ಷ ಇಲ್ಲರೆ ಐದ್ ವರ್ಷಗಳಿಗೊಮ್ಮೆ ತಮ್ಮ ಐನ್‌ಮನೆಗಳ್‌ಲಿ ಶ್ರೀ ವೆಂಕಟರಮಣ ದೇವರ ಹರಿಸೇವೆನ ಏರ್ಪಡಿಸಿದೆ. ಆ ಹರಿಸೇವೆನ ಉತ್ಸವಲಿ ಪ್ರಸಾದ ಸ್ವೀಕರ್ಸುದು ಹೊರಬಾಳಿಕೆ ಹೋದ ಹೆಣ್ಮಕ್ಕ ದೇವರ ಶ್ರೀ ಚಿಣ್ಣಪ್ಪ ದಂಪತಿಗ ಕೊಡಗ್‌ನ ಎಲ್ಲಾ ಐನ್‌ಮನೆಗಳಿಗೆ ಹೋಗಿ ಚಿತ್ರೀಕರಣ ಮಾಡಕನ ನಮ್ಮ ಬಲಮುರಿಯು ಕೊಡವ, ಗೌಡ್ರುಗಳ ಕುಟುಂಬಗಳ

ಐನ್‌ಮನೆಗಳಿಗೆ ಭೇಟಿ ಕೊಟ್ಟ ಬಗ್ಗೆ ನಾ ಗ್ಯಾನ ಮಾಡಿಕಣೆ. ಪದ್ಧತಿ ಪರಂಪರೆಗೆ ಐನ್‌ಮನೆಯೇ ಸಾಕ್ಷಿ.

ಗ್ರಾಮದ ಜನರ ವೃತ್ತಿ ಮತ್ತೆ ಸಾಧನೆ : ಬಲಮುರಿ ಗ್ರಾಮದವು ವೃತ್ತಿಲಿ ಕೃಷಿಕರ್. ಬತ್ತ, ಕಾಫಿ, ಒಳ್ಳಮೆಣ್ಸ್, ಬಾಳೆ, ಅಡಿಕೆ, ಕಿತ್ತುಳಿ, ಶುಂಠಿ, ಯಾಲಕ್ಕಿ ಮತ್ತೆ ಬೇರೆ ಬೇರೆ ಮಿಶ್ರ ಬೆಳೆಗಳ ಬೆಳ್ದವೆ. ಎಲ್ಲವೂ ಸಣ್ಣ ಹಿಡ್‌ವಳಿಯವೇ ಜೊತೆಗೆ ಅಲ್ಪಸಲ್ಪ ಪಶುಸಂಗೋಪನೆ ಮಾಡಿವೆ. "ಕಾಯಕವೇ ಕೈಲಾಸ"ತ ಹೇಳ್ವಂಗೆ ಬಸವಣ್ಣನ ತತ್ವನ ಪಾಲ್ಸದರ್ಂದ ಕೆಲ್ಸಲಿ ಜಯಿಸೊಳೊ. ಬಲಮುರಿನ ಜನ ಕೃಷಿಲಿ ಮಾತ್ರ ಅಲ್ಲದೆ, ಉದ್ಯೋಗಿಗಳೂ ಹೌದು. ಸರಕಾರದ ಎಲ್ಲಾ ಇಲಾಖೆಗಳ್‌ಲಿ ಸೇವೆ ಮಾಡ್ತಿರ್‌ವ ಯುವಕರ್ ಒಳೊ. ನೌಕರಿಂದ ನಿವೃತ್ತಿಯಾದ ಹಿರಿಯ ನಾಗರಿಕರ್ ಹೆಚ್ಚ್‌ನ ಸಂಖ್ಯೆಲಿ ಒಳೊ. ಬಲಮುರಿ ಗ್ರಾಮದ ಕಟ್ರತನ ಕುಟುಂಬಲಿ ಜಾಸ್ತಿ ಸಂಖ್ಯೆಲಿ ಸರಕಾರಿ ಸೇವೆ ಮಾಡ್‌ವ ಮತ್ತೆ ನಿವೃತ್ತಿಯಾದವೂ ಅವರ್‌ದೇ ಆದ ಒಂದ್ ಉದ್ಯೋಗಸ್ಥರ ಸಂಘ ಉಟ್ಟು. ಅವರ ಸಂಘದ ನಿಧಿಂದ 1999ರ ಕಾರ್ಗಿಲ್ ಕದನಲಿ ಪ್ರಾಣಕೊಟ್ಟ ಹುತಾತ್ಮರ ಸಂತ್ರಸ್ಥರ ನಿಧಿಗೆ ರೂ. 5000–00 ಧನ ಸಹಾಯ ಮಾಡಿಯೊಳೊ. "ಜನ ಸೇವೆಯೇ ಜನಾರ್ಧನ ಸೇವೆ"ತ್ತೇಳ್ವಂಗೆ ದೇಶದ ಸೇವೆಗಾಗಿ ದುಡ್ಡ್ ಪ್ರಾಣಕೊಟ್ಟ ವೀರಯೋಧರ್‌ಗೆ ಬಲಮುರಿಲಿ ಕಮ್ಮಿಯೇನೂ ಇಲ್ಲೆ. 1945ರ್‌ಲಿ ಪ್ರಪಂಚದ ಎರಡನೇ ಮಹಾಯುದ್ಧಲಿ ಭಾಗವಹಿಸಿ ಬಲಮುರಿಯ ಶ್ರೀ ಕೋಟೆರ ಐಯ್ಯಪ್ಪನವರ ಕಿರಿಯ ಮಂಜ ಲೆಫ್ಟಿನೆಂಟ್ ಕರ್ನಲ್ ಅಪ್ಪಣ್ಣನವು ಜಾವಲಿ ತೀರ್‌ಕಂಡೊ. ಇವುಕೆ ಬೆಂಗಳೂರ್‌ಲಿ ಜಾಲಹಳ್ಳಿ ಹತ್ರ ಅಂದಾಜಿ 2.50 ಎಕರೆ ಜಾಗನ ಅಂದ್‌ನ ಸರಕಾರ ಮಂಜೂರು ಮಾಡಿಟ್ಟು. ಗ್ರಾಮದ ಹೆಚ್ಚಿನ ಯುವಕರ್ ಇಂದೂ ಸನ ಸೈನ್ಯಲಿ ಸೇವೆ ಮಾಡ್ತಾಒಳೊ, ನಿವೃತ್ತಿ ಆದವೂ ಒಳೊ. ಬಲಮುರಿ ಗ್ರಾಮದ ದಿ.ಬೊಳ್ಳಚೆಟ್ಟೀರ ಚಂಗಪ್ಪನವರ

ಮಂಜ ಸೋಮಣ್ಣನವು ಕಾಶ್ಮೀರಲಿ ಬ್ರಿಗೇಡಿಯಾರ್ ಆಗಿ ಸೇವೆ ಮಾಡ್ತಾ ಒಳೊ. ಬಲಮುರಿನ ಕಟ್ರತನ ಕುಟುಂಬದ ದಿ.ಪೊನ್ನಪ್ಪನವರ ಮೂರ್‌ಮಂದಿ ಮಕ್ಕಳೂ ಸೈನ್ಯಲಿ ಸೇವೆಮಾಡಿ ನಿವೃತ್ತಿಯಾಗೊಳೊ. ಸರಕಾರಿ ಬಸ್ಸ್‌ನ ಚಾಲಕ ಮಾದಪ್ಪನವುಕೆ ಅಪಘಾತ ರಹಿತ ಪ್ರಶಸ್ತಿ ಸಿಕ್ಕುಟು. ಬಲಮುರಿನ ಪ್ರಾಧ್ಯಾಪಕ ಮತ್ತೆ ಸಾಹಿತಿ ದಿ. ಶ್ರೀ ಕೋಟೆರ ಮುತ್ತಣ್ಣನವರ ಮಂಜ ಮೇದಪ್ಪನವು ಬೆಂಗಳೂರ್‌ನ ಗಂಗಾರಾಮ್ ಕಟ್ಟಡ ಕುಸಿಯಕನ ಅಪಘಾತಕ್ಕೆ ಒಳಗಾಗಿ ದುರ್ಮರಣ ಹೊಂದಿದ್ ದುಃಖದ ಸಂಗತಿ ಬಲಮುರಿ ಗ್ರಾಮದ ಬಿದ್ದಂಡ ದಿ. ಕಾರ್ಯಪ್ಪನವು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡ್ದ ಕೊಡಗ್‌ನವರ್‌ಲಿ ಒಬ್ಬ. ಶ್ರೀಯುತರ್‌ಗೆ ಬಲಮುರಿ ಗ್ರಾಮದ ಕೋರಂಬಾಣೆ ಪೈಸಾರಿ ಜಾಗಲಿ ಅಂದ್‌ನ ಕೊಡಗ್ ಸರಕಾರ 6 ಎಕರೆ ಬಾಣೆ ಜಾಗನ ಅವರ ಹೋರಾಟದ ಕಾರಣಂದ ಮಂಜೂರ್ ಮಾಡ್ತ್. ಬಲಮುರಿ ಗ್ರಾಮದ ಗುಡ್ಡೆಮನೆ ಅಪ್ಪಯ್ಯ ಗೌಡರ್‌ನ ಬ್ರಿಟೀಷ್‌ನವು ಮಡಿಕೇರಿ ಕೋಟೆ ಆವರಣಲಿ ನೇಣುಗಂಬಕ್ಕೆ ಏರ್ಸಿದೊ. ಅದರ್ನ ಇಲ್ಲಿ ಸ್ಮರಣೆ ಮಾಡಿಕಂಬದು ಅಗತ್ಯ. ಪ್ರಸ್ತುತ ಅಪ್ಪಯ್ಯ ಗೌಡರ ಸ್ಮಾರಕನ ಮಡಿಕೇರಿಲಿ ನಿರ್ಮಿಸಿರುದು ಅವುಕೆ ಸಿಕ್ಕಿದ ಗೌರವ.

1934–35ರ್‌ಲಿ ಕೊಡಗ್‌ನ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ ನಿಡ್ಯಮಲೆ ಮುದ್ದಪ್ಪನವರ ಮುಂದಾಳ್ತನಲಿ ಕೊಡಗ್‌ನ ಗೌಡರ ಮೊದುವೆ ಸಮಾರಂಭಗಳ್‌ಲಿ ಉಡುವ ಸಮವಸ್ತ್ರದ ಕುರ್ತ್ ಬಲಮುರಿಯ ಬಾಲಿಕನ ಬೊಳಿಲಿ ಸಭೆ ಸೇರಿ ತೀರ್ಮಾನ ತಕ್ಕಂಡದ್ ಒಂದ್ ಹೆಮ್ಮೆಯ ವಿಷಯ. ಇಂದ್ ಕೊಡಗ್‌ನ ಬಲಮುರಿ ಗ್ರಾಮದ ಗುಡ್ಡೆಮನೆ ಅಳಿಯ ಮಾಜಿ ಮುಖ್ಯಮಂತ್ರಿ ಸದಾನಂದ ಗೌಡರ್, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸಂಪುಟ ದರ್ಜೆಯ 6ನೇ ಸ್ಥಾನಲಿ ಬಡ್ತಿ ಪಡೆದ ಭಾಗ್ಯ ಬಲಮುರಿಯ ಹೆಣ್ಣ್ ಮಣ್ಣ್‌ನ ಭಾಗ್ಯ. ಸುಮಾರ್ 1958–59ರ್‌ಲಿ ಭಾರತದ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್

ಮತ್ತೆ ಪ್ರಧಾನಮಂತ್ರಿ ಪಂಡಿತ ಜವಾಹರ್‌ಲಾಲ್ ನೆಹರು ಅವರ ಶಾಲಲಿ ಕೊಡಗ್‌ನ ಜಿಲ್ಲಾಧಿಕಾರಿ ಅಲ್ಲದೆ ಸಾಹಿತಿ ಶ್ರೀ ಸಿದ್ಧಯ್ಯಪುರಾಣಿಕರ ಮಾರ್ಗದರ್ಶನಲಿ ಈ ಗ್ರಾಮದ ಕೊಂಗೀರಂಡ ಉತ್ತಪ್ಪನವರ ನೇತೃತ್ವಲಿ ಕೊಡವರ ಮುಖ್ಯ ಕೊಣ್ತ ಬೊಳ್ಕಾಟ್‌ನ ದೆಹಲಿಯ ರಾಜಭವನಲಿ ಪ್ರದರ್ಶನ ಕೊಟ್ಟ್ ಬಹುಮಾನ ಪಡ್ಕಂಡದ್ ಈ ಗ್ರಾಮಕ್ಕೆ ತಂದ ಶೋಭೆ ಎರಡನೇ ಸತಿನೂ ಈ ಗ್ರಾಮಂದ ಪಾಲಂದಿರ ಶ್ರೀ ದೇವಯ್ಯನವರ ಮುಂದಾಳ್‌ತನಲಿ ಶ್ರೀ ಆರ್. ವೆಂಕಟರಾಮನ್ ಅವು ರಾಷ್ಟ್ರಪತಿ ಆಗಿರಕನ ಕೊಡಗ್‌ನ ಕೊಣ್ತ್‌ನ ದೆಹಲಿ ದೇಹದಾರ್ಢ್ಯ ಸ್ಪರ್ಧೆಲಿ ಭಾಗವಹಿಸಿ ಸೂರೂನ ಸ್ಥಾನ ತಡ್ಕಂಡೊ. 2010ರ ಮೇ ತಿಂಗ ನಡ್ದ ಗ್ರಾಮ ಪಂಚಾಯಿತಿ ಚುನಾವಣೆಲಿ ಈ ಗ್ರಾಮಂದ ಸ್ಪರ್ಧಿಸಿದ್ದ ಶ್ರೀಮತಿ ಬಿದ್ದಂಡ ಉಷಾ ದೇವಮ್ಮ ಮತ್ತೆ ಕುಂದನ ಪ್ರಭಾನಂದನವು ಗೆದ್ದೊ. ಶ್ರೀಮತಿ ಬಿದ್ದಂಡ ಉಷಾದೇವಮ್ಮನವು ಪಾರಾಣೆ ಪಂಚಾಯ್ತಿ ಅಧ್ಯಕ್ಷರಾದೊ ಮತ್ತೆ ಇವು ಜಿಲ್ಲಾ ಪಂಚಾಯಿತಿ ಸದಸ್ಯರಾದೊ. ಅದ್ ಆದ ಮೇಲೆ ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷರಾದೊ.

ಬಲಮುರಿ ಗ್ರಾಮದ ಬೊಳ್ಳಚೆಟ್ಟಿರ ಸುರೇಶನವು ಮಡಿಕೇರಿ ತಾಲೂಕು ಪಂಚಾಯಿತಿ ಸದಸ್ಯರಾಗಿಯೂ ಬೊಳ್ಳಚೆಟ್ಟಿರ ಪ್ರಕಾಶ್ ಕಾಳಪ್ಪ ಮಡಿಕೇರಿ ತಾಲೂಕ್‌ನ ಮಾರ್ಕೇಟಿಂಗ್ (ಆರ್.ಎಂ.ಸಿ.) ಸೊಸೈಟಿನ ಸದಸ್ಯರಾಗಿ ಇಂದೂ ಒಳೊ. ಇತ್ತೀಚಿನ ದಿನಗಳ್‌ಲಿ ಸುಮಾರ್ ಒಂದ್ ತಿಂಗಳ ಕಾಲ ಬಲಮುರಿಲಿ ಚಿತ್ರನಟ ರವಿಚಂದ್ರನ್‌ರವರ ನಾಯಕತ್ವಲಿ "ದೃಶ್ಯಂ"ತ್ತೇಳುವ ಮಲೆಯಳಿ ಚಿತ್ರನ ಕನ್ನಡಕ್ಕೆ ಚಿತ್ರೀಕರಣ ಮಾಡ್ತಿದ್ದ ಸಂದರ್ಭಲಿ ನೆಟ್‌ವರ್ಕ್‌ಲಿ ಕೆಲ್ಸ ಮಾಡ್ತಿದ್ದ ತೀರ್ಥಹಳ್ಳಿಯ 24 ವರ್ಷದ ಯುವಕ ಬಲಮುರಿಯು ಕಾವೇರಿ ಹೊಳೆಲಿ ಮೀಯ್ಕಂಡಿರ್‌ಕನ ಸುಳಿಗೆ ಸಿಕ್ಕಿ ಸತ್ತೋತ್. ಇದ್ ತುಂಬಾ ಬೇಜಾರ್‌ನ ವಿಷಯ. ಈ ಗ್ರಾಮಕ್ಕೆ ಈ ವರ್ಷದ ಸುರೂಲೆ ಇದೇ ಮೇ ತಿಂಗದ

10ರ ಒಳಗೆ ಸುಮಾರ್ 15 ಇಂಚ್‌ನಷ್ಟ್ ಮಳೆ ಆದ್ ಒಂದ್ ದಾಖಲೆನೇ ಹೌದು. ಹಿಂದೆಂದೂ ವರ್ಷದ ಆರಂಭಲಿ ಇಷ್ಟೊಂದ್ ಮಳೆಯಾದ್ದ್ ದಾಖಲೆಲೇ ಇಲ್ಲೆ. ಇಷ್ಟ್ ಮಳೆಯಾದರೂ ಹವಾಮಾನದ ವೈಪರೀತ್ಯಂದ ಅಂತರ್ಜಲ ಮಟ್ಟ ಕುಸ್ತೋದರ್‌ಂದ ಭೂಮಿಲಿ ಪಸೆನೇ ಕಂಡ್ ಬರ್ತಿಲ್ಲೆ.

ಕೊಡಗ್‌ನ ಇಗ್ಗುತ್ತಪ್ಪ ದೇವರ್, ಕಾವೇರಿನ ಕರುಣೆಂದ ಬಲಮುರಿ ಗ್ರಾಮದ ಜನ ಪ್ರೀತಿ ವಿಶ್ವಾಸಂದ ಸೌಹಾರ್ದ ಸಹಕಾರ ಮನೋಭಾವಂದ ವಿದ್ಯೆ ಬುದ್ಧಿನ ಬೆಳ್ಸಿ, ಉಳ್ಸಿ, ಬಾಳಿಬದ್ಕಿಕೆ ದೇವರ ಅನುಗ್ರಹ ಮತ್ತೆ ಪ್ರಕೃತಿ ಮಾತೆನ ಆಶೀರ್ವಾದ ಇರ್‌ಲ್ನಿತ ದೇವರ್‌ನ ಬೇಡಿಕಂಡ್ ಈ ನನ್ನ ಊರ್‌ನ ಪರಿಚಯನ ಮಾಡಿನೆ.

* * * * *

೨. ಬೆಳ್ಳಿ ಮುಷ್ಟಿ

ನಾ ಕೊಡಗ್‌ನ ಹಿಂದೆನ ಕಡಿಯತ್ತುನಾಡು ಬಲಮುರಿ ಗ್ರಾಮದ ಕಟ್ರತನ ಕುಟುಂಬದ ದಿ. ಕುಶಾಲಪ್ಪ ಸೋಮವ್ವ ದಂಪತಿಯ ಅಂದ್‌ನ ಕೂಡು ಕುಟುಂಬಲಿ (ಅವಿಭಾಜ್ಯ) 28–07–1924ರ್‌ಲಿ ಹುಟ್ಟಿದೆ. ಈ ಇಸವಿ ದಾಖಲೆಯ ಮಳೆ ಸೊರ್ದ ವರ್ಷ. ನಾನೇ ಹಿರಿಯಂದ ನಾ ಹುಟ್ಟಿದ ಆರ್ ವರ್ಷಕಳ್ದ್ ನನ್ನ ತಂಗೆ ಪಾರ್ವತಿ ಹುಟ್ಟಿತ್. 1933ರ್‌ಲಿ ನನ್ನ ತಮ್ಮ ಉಲ್ಲಾಸ ಹುಟ್ಟಿತು. ಮತ್ತೆ ಇಬ್ಬರ್ ತಂಗೆಕ ಹುಟ್ಟಿದೊ. ಸರಸ್ವತಿ ಮತ್ತೆ ಗಂಗಮ್ಮತ ಅದ್ರ ಹೆಸ್ರ್. ಪ್ರಾಯಕ್ಕೆ ಬಂದಿದ್ದ ಸರಸ್ವತಿ ಅಕಾಲ ಮರಣಕ್ಕೆ ಒಳಗಾತ್. ಈ ಅವಿಭಕ್ತ ಕುಟುಂಬಲಿ ನನ್ನ ಅಜ್ಜಿ ಪೊನ್ನವ್ವ, ನನ್ನ ಅವ್ವ ಅಪ್ಪ, ನನ್ನ ಅಪ್ಪನ ಸಹೋದರ ಬೋಜ–ಇವೆಲ್ಲಾ ಆಗಿ ಸುಮಾರ್ 17–18 ಜನರ್‌ಂದ ಕೂಡ್ದ ಕೂಡುಕುಟುಂಬ ಆಗಿತ್ತ್. ಈ ಕೂಡುಕುಟುಂಬ ಪ್ರೀತಿ ವಿಶ್ವಾಸಂದ ಹೊಂದಿಕಂಡ್, ಎಲ್ಲವ್ ಒಂದೇ ಮನೆಲಿ, ಒಂದೇ ಅಡುಗೆಲಿ ಒಬ್ಬಾಗಿ ಉಂಡ್‌ಕಂಡ್ ದುಡ್ಡ್ ಜೀವನ ಮಾಡ್ತಿದ್ದೊ. ನನ್ನ ಅಜ್ಜಿ ಪೊನ್ನವ್ವನವೇ ಕುಟುಂಬಲಿ ಹಿರಿಯವಾಗಿದ್ದೊ. ನನ್ನ

ಅಜ್ಜ ಬೆಳ್ಯಪ್ಪನವು ನಾ ಹುಟ್ಟಕೆ ಮುಂದೆನೆ ತೀರ್ಕಂಡಿದ್ದೊ. ನನ್ನ ಜಾತಕಫಲದ ಪ್ರಕಾರ ನನ್ನ ಹೆಸ್ರ್ ಪೊನ್ನಪ್ಪತ? ಇದ್ದರೂ ಸನ ನನ್ನ ಇಬ್ಬರು ಅವ್ವತ ಹೇಳಿರೆ ತಪ್ಪಾಕಿಲೆ. ಒಬ್ಬು ಹೆತ್ತವ್ವ ಹೆರಿಗೆಯಾದ ಆರ್ ತಿಂಗಳ ಮೇಲೆ ಸುಮಾರ್ 5–6 ತಿಂಗಳ ಅವರ ಶರೀರಲಿ ನಿಮೋನಿಯ ಆಗಿ ತುಂಬ ಕಷ್ಟಪಟ್ಟೊಗಡ. ಆಗ ನನ್ನನ್ನ ಸಾಕಿ ಸಲಹಿದವು ನನ್ನ ಅಜ್ಜಿನೇ. ನಾ ಬರೀ ಆರ್ ತಿಂಗ ಮಾತ್ರ ಅವ್ವನ ಎದೆ ಹಾಲ್ ಕುಡ್ದೊಳದ್. ಹಸ್‌ನ ಹಾಲ್‌ಂದೇ ನನ್ನ ಪೋಷಣೆ. ನನ್ನ ಅವ್ವನ ನಿಮೋನಿಯ ಕಾಯಿಲೆನ ನಮ್ಮ ಹಿರಿಯವು ಅವರ ನಾಟಿ ಮದ್ದ್‌ಂದೇ ಗುಣ ಮಾಡ್ದೊ. ನಾಟಿ ಮದ್ದ್‌ಲಿ ನಮ್ಮ ಹಿರಿಯವು ಊರಿಗೇ ಹೆಸ್ರ್‌ವಾಸಿ.

ಕುಟುಂಬ ಜೀವನ : ಈ ಕೂಡುಕುಟುಂಬದ ಮುಖ್ಯ ಕಸುಬು ಕೃಷಿ ಮತ್ತೆ ಹೈನುಗಾರಿಕೆ ಈ ಕುಟುಂಬಕ್ಕೆ ಮೂರು ಎಕರೆ ಬತ್ತದ ಗದ್ದೆ ಇದ್ದರೂ ಸನ, ತಮ್ಮ ಕೃಷಿಯೊಟ್ಟಿಗೆ ಬೇರೆಯವರ ಸುಮಾರ್ 3 ಎಕರೆಯಷ್ಟ್ ಬತ್ತದ ಕೃಷಿ ವಾರಕ್ಕೆ (ಗುತ್ತಿಗೆಗೆ)ಮಾಡ್ತಿದ್ದೊ. ಹಿಂಗೆ ಎಲ್ಲವೂ ಒಟ್ಟುಗೂಡಿ ದುಡ್ಡ್ ಒಟ್ಟಿಗೆ ಕುದ್ದ್ ಊಟ ಮಾಡಿ, ಒಂದೇ ಮನೆಲಿ ಒಟ್ಟಿಗೆ ವಾಸಮಾಡಿಕಂಡ್ ಪ್ರೀತಿ ವಿಶ್ವಾಸಂದ ಸಹಬಾಳ್ವೆ ಮಾಡ್‌ತ್ತಿದ್ದೊ. "ಓಂ ಸಹನಾವವತ್ತು, ಸಹಸೌಭುವಸ್ತು, ಸಹದೀರ್ಯಕರದಾವಹಿಯೇ, ತೇಜಶ್ವಿನಾವಧೀತ ಮಸ್ತು, ಓಂ ಶಾಂತಿ, ಶಾಂತಿ, ಶಾಂತಿತ್ತೇಳ್ವ ಶಾಂತಿ ಮಂತ್ರ ಈ ಕುಟುಂಬಕ್ಕೆ ಸಲ್ಲುವಂತಾದ್ದಾಗುಟ್ಟು. ಹಿಂಗೆತ್ತೇಳ್ರೆ ಒಟ್ಟಿಗೆ ದುಡಿಯನೊ, ಒಟ್ಟಿಗೆ ಉಂಬೊನೊ, ಒಟ್ಟಿಗೆ ಜೀವನ ಮಾಡನೊ ಒಟ್ಟಿಗೆ ಕಲಿಯನೊ'ತ ಅರ್ಥ.

ಪಶುಪಾಲನೆಂದ ಬೇಕಷ್ಟ್ ಹಾಲ್, ಮೊಸ್ರ್ ಮನೆಗೆ ಸಿಕ್ಕ್‌ತಿತ್ತ್. ಉಂಬಕೆ ಹಾಲ್ ಮೊಸ್ರ್ ಇಲ್ಲದ ದಿನ ಇತ್ಲೆ. ತಮ್ಮ ಮನೆಕರೇಲೇ ತರಕಾರಿ ಬೆಳ್ಕಂಬತಿದ್ದೊ. ಪೇಟೆಂದ ತರಕಾರಿ ತರುವ ಕ್ರಮ ಇತ್ಲೆ.

ನಾವ್ ಬೆಳ್ದ ಬತ್ತನ ತಮ್ಮ ಮನೆಗಳ್‌ಲೆ ರಾಟೆ ಮತ್ತೆ ಒನಕೆಂದ ಕುಟ್ಟಿ ಅಕ್ಕಿ ಮಾಡ್ತಿದ್ದೊ. ಕುಸ್ಲಕ್ಕಿನ ತಮ್ಮ ಮನೆಗಳ್‌ಲೇ ಮಾಡಿಕಂಬತಿದ್ದೊ. ಅಂದ್‌ನ ಕಾಲಲಿ ಇಂದ್‌ನಂಗೆ ಯಂತ್ರಗ ಇತ್ಲೆ. ಅಂದ್ ರೂಪಾಯಿಗೆ 18–19ಸೇರ್ ಅಕ್ಕಿ ಮಾರಾಟ ಆಗ್ತಿತ್ತ್. ಒಂದ್ ಗಾಡಿ ಬತ್ತದ ಬೆಲೆ ರೂ. 15–20 ಮಾತ್ರ. ಒಂದ್ ಗಾಡಿತ್ತೇಳ್ರೆ 15 ಬಟ್ಟಿ ಬತ್ತ. ಒಂದ್ ಬಟ್ಟಿಗೆ 80ಸೇರ್. ಇವ್ ಅಂದ್‌ನ ಅಳ್ತೆ ಮಾಪನಗ. ಒಂದ್ ತೆಂಗ್‌ನ ಕಾಯಿಗೆ 3 ಪೈಸ. ಒಂದ್ ಪಂಚೇರ್ ನೀರುಳ್ಳಿಗೆ ಒಂದ್ ದುಡ್ಡು (4ಪೈಸ). ಒಂದ್ ಎತ್ತ್‌ನ ಬೆಲೆ 8–10 ರೂಪಾಯಿ. ಅಂದ್‌ನ ಕಾಲಲಿ ಕಾಫಿ ಕೃಷಿ ಬಾರಿ ಕಮ್ಮಿ. ಬತ್ತ, ಬಾಳೆ, ಕಿತ್ತುಳಿ, ಯಾಲ ಹಿಂಗೆ ಬೇರೆ ಬೇರೆ ಬೆಳೆಗಳ ಬೆಳೆತಿದ್ದೊ. ತಮ್ಮ ಹೊಲಗದ್ದೆಗಳಿಗೆ ಕೊಟ್ಟಿಗೆ ಗೊಬ್ಬರನೇ ಮುಖ್ಯ. ದನದ ಸಗಣಿ ಒಟ್ಟಿಗೆ ಹಸ್ರೆಲೆ, ಕೊಕ್ಕಲೆ, ಕಾಡ್‌ಮಣ್ಣ್ ಮಿಶ್ರಿತ ಸಾವಯವ ಗೊಬ್ಬರನ ಹಾಕ್‌ತ್ತಿದ್ದೊ. ನನ್ನ ಅಜ್ಜಿ ಪೊನ್ನವ್ವನವುಕೆ ತುಂಬಾ ವಯಸ್ಸಾದ್ದರ್‌ಂದ ಕುಟುಂಬದ ಜವಾಬ್ದಾರಿಕೆನ ನನ್ನ ಅಪ್ಪನವೇ ನೋಡಿಕಂಬತ್ತಿದ್ದೊ. ಇಂದೂ ನಾವು ವಾಸಿರ್‌ವ ಮನೆನ ನಮ್ಮ ಅಜ್ಜಿನೇ ಕಟ್ಟಿಸಿದ್ದ್. ಅಜ್ಜಿದ್ ತವುರು ಭಾಗಮಂಡಲದ ಕೋರಂಗಾಲ ಗ್ರಾಮದ ನಂಗಾರ್ ಮನೆ. ನಮ್ಮ ಹಿರಿಯವು ನಾಡ್‌ಮದ್ದ್ ತಯಾರಿಕೆಲಿ ಹೆಸ್ರ್ ಮಾಡಿದ್ದೊ. ಶೀತಜರ, ಗಾಳಿಸೋಂಕು, ಕೆಮ್ಮುಲು, ಗಂಟ್‌ಬೇನೆ, ಒತ್ತಲೆ ಬೇನೆ, ಜರ, ನಿಮೋನಿಯ, ವಿಷದ ಹುಳುಕಡ್ಡಿ ಹಿಂಗೆ ಬೇರೆ ಬೇರೆ ಕಾಯ್ಲುಗಳಿಗೆ ಮದ್ದ್‌ಕೊಡ್ತಿದ್ದೊ. ಬೆಳಗಾತಿದ್ದಂಗೆ ಊರವ್ ಮದ್ದ್‌ಗೆ ಬಂದ್‌ಬುಡ್ತಿದ್ದೊ. ಮದ್ದ್‌ಗೆ ಎಂತನೂ ತಕಂಬತಿತ್ತ್‌ಲೆ. ಹೆರಿಗೆಲ್ಲಾ ಮನೆಲೇ ಆತಿತ್. ನನ್ನ ಅಪ್ಪ ಕುಶಾಲಪ್ಪನವು ಊರ್‍ನ ಹಿರಿಯ ಮತ್ತೆ ಸಿನೇತ ಆಗಿದ್ದ ಶ್ರೀ ಕೋಟೇರ ಅಯ್ಯಪ್ಪ (ಪಟೇಲ), ಬೊಳ್ಳಚೆಟ್ಟಿರ ಶ್ರೀ ಮಂದಣ್ಣ, ಬೊಳ್ಳಚೆಟ್ಟಿರ ಶ್ರೀ ಅಚ್ಚಯ್ಯ ಇಂತಹವರೆಲ್ಲರೊಟ್ಟಿಗೆ ಕೂಡಿಕಂಡ್ ಊರ್‍ನ ಪಂಚಾಯಿತಿ ತೀರ್ಮಾನಗಳ್‌ಲಿ ಸೇರ್‌ತಿದ್ದೊ.

ಅಪ್ಪ ಯಾವುದೇ ಸಭೆ ಸಮಾರಂಭಗಳ್‌ಲಿ ಕೂಡಿ ಕಳ್ಳ್ ಕುಡ್ದರೆ ಅವರ ಅವ್ವನಕ್ಕಲೆ (ನನ್ನ ಅಜ್ಜಿ) ಮಾಪಿ ಕೇಳ್‌ತಿದ್ದೊ. ಹಿಂದೆ ನಮ್ಮ ಮನೆಗೆ ಹುಲ್ಲು ಹೋಸ್ತಿದ್ದೊ. ದಿನಕಳ್ದಂಗೆ ಮಂಗ್ಳೂರ್‌ನ ಬಾಸ್ಸೆಲ್ ಮಿಷನ್ ಹಂಚಿ ಹಾಕಿದೊ. ಅಪ್ಪ ಕುಶಾಲ್ಪನವು ತಮ್ಮ ಸಿನೇತ ಶ್ರೀ ಬೊಳ್ಳಚೆಟ್ಟಿರ ಮಂದಣ್ಣನವರ ಸಾಯಂದ ಕಾವೇರಿ ಹೊಳೆನ ಆಚೆ ಹೊದ್ದೂರು ಕಣ್ಣಿ ಬಲಮುರಿ ಗ್ರಾಮದ ತೆಲುಗು ಬಣಜಿಗರ ಸಾಗು ಆಸ್ತಿ ಸುಮಾರ್ ಆರ್ ಎಕರೆ ಬತ್ತದ ಗದ್ದೆ ಮತ್ತೆ ಆರ್ ಎಕರೆ ಬಾಣೆ ಜಾಗನ ಕ್ರಯಕ್ಕೆ ತಕ್ಕಂಡೊ. ಆಸ್ತಿ ತಕಂಬಕೆ ಸಾಯ ಮಾಡ್ದ ತಮ್ಮ ಸಿನೇತ ಶ್ರೀ ಮಂದಣ್ಣನವುಕೆ ಬಹುಮಾನಾಗಿ ಒಂದ್ ಒಂಟಿ ನಳಿಗೆಯ ಬಿರ್ಪಲೋಡ್ ಕೋವಿ (ತೋಟಕೋವಿ)ನ ಕೊಟ್ಟೊಳೊ. ಬಲಮುರಿ ಗ್ರಾಮದ ತಮ್ಮ ಮನೆಂದನೇ ವ್ಯವಸಾಯದ ಸಮೆಲಿ ಮಳೆಗಾಲಲಿ ಕಾವೇರಿ ಹೊಳೆನ ದೋಣೀಲಿ ದಾಟಿ ತಮ್ಮ ಜಾಗಕ್ಕೆ ಹೋಗಿ ವ್ಯವಸಾಯ ಮಾಡ್ತಿದ್ದೊ. ವರ್ಷಲಿ ಸುಮಾರ್ 4–5 ಗಾಡಿಯಷ್ಟ್ ಬತ್ತ ಮಾರಾಟ ಮಾಡ್ತಿದ್ದೊ. 1941–42ನೇ ಇಸ್ವಿಲಿ ಅವು ಕ್ರಯಕ್ಕೆ ತಕ್ಕಂಡ ಆಸ್ತೀಲಿ ಒಂದ್ ವಾಸದ ಮನೆನಕಟ್ಟಿದೊ. ಅದೇ ಮನೆಲಿ ವಾಸ ಮಾಡಿಕಂಡ್ ಆಸ್ತಿನ ತಾನೇ ನೋಡಿಕಂಬೊದುತ ತೀರ್ಮಾನಕ್ಕೆ ಬಂದೊ. ಆದರೆ ದುರ್ದೈವಕ್ಕೆ 1942ನೇ ಇಸ್ವಿ ಸೆಪ್ಟೆಂಬರ ತಿಂಗಲಿ ಕಾಯ್ಲುಕ್ಕೆ ಒಳಗಾಗಿ ತಮ್ಮ 48ನೇ ವರ್ಷದ ಪ್ರಾಯಲೇ ಅವರ ಪ್ರಾಣ ಪಕ್ಷಿ ಹಾರಿಹೋತು. ಅವರ ಉಸ್ರ್‌ನ ಕಡೇಗಳಿಗೆಲಿ ನನ್ನನ ಹತ್ರಕೆ ಕರ್ದ್ ಒಂದ್ ಪೆನ್ನ್ ಮತ್ತೆ ಪೇಪರ್ ತಕಂಡ್ ಬಾತ ಕೈ ಸನ್ನೆ ಮಾಡ್ದೊ. ನಾ ಅವು ಹೇಳ್ದಂಗೆ ಹತ್ರ ಹೋದೆ. ಆಗ ಕುಟುಂಬದ ಆಸ್ತಿ ಭಾಗಲಿ ನಂಗೂ ಮತ್ತೆ ನನ್ನ ಚಿಕ್ಕಪ್ಪ ಆಗಿದ್ದ ಅಪ್ಪಚ್ಚನವುಕೂ ಸೇರಕಾದ ಆಸ್ತಿಗಳ ಕರಡ್ ನಕಲ್‌ನ ನನ್ನಂದ ಬರ್ಸಿದೊ. ಕಡೇ ಗಳಿಗೆಲಿ ಅಪ್ಪನ ತಮ್ಮನ ಹತ್ರಕರ್ದ್ "ಈ ಹೈದನ (ನನ್ನ) ಲಾಯ್ಕ ನೋಡಿಕಣಿ ಮತ್ತೆ ಒಳ್ಳ ವಿದ್ಯಾಭ್ಯಾಸ ಕೊಡ್ಸು"ತ ಹೇಳಿ ಉಸ್ರ್ ಬುಟ್ಟೊ.

ಅಪ್ಪ ತುಂಬಾ ಶಿಸ್ತ್‌ನ ವ್ಯಕ್ತಿ. ತಮ್ಮ ಮಕ್ಕ ತಪ್ಪು ಮಾಡಿರೆ ಸಹಿಸ್ತಿತ್‌ಲೆ. ಅಪ್ಪ ಊರ್‌ವರ ಪ್ರಶಂಸೆಗೆ ಪಾತ್ರರಾಗಿದ್ದೊ.

ಬಾಲ್ಯ ಮತ್ತೆ ವಿದ್ಯಾಭ್ಯಾಸ : ಅಂದ್‌ನ ಕಾಲಲಿ ಮಕ್ಕಳ್ನ ಇಸ್ಕೂಲಿಗೆ ಸೇರ್ಸಕನ 8–10 ವರ್ಷ ಪ್ರಾಯ ಆಕಾಗಿತ್ತ್. ಆ ಕಾಲಲಿ ವಿಪರೀತ ಮಳೆ ಆಗ್ತಿತ್ತ್. ಹಂಗಾಗಿ ತೋಡು, ಹೊಳೆ, ಗದ್ದೆಗೆಲ್ಲಾ ನೀರ್ ತುಂಬಿಕಂಡಿರ್‌ತಿತ್ತ್. ಹಂಗಾಗಿ ಸಣ್ಣ ಮಕ್ಕ, ಒಟ್ಟಿಗೆ ದೊಡ್ಡ ತರಗತಿಗಳ್‌ಲಿ ಓದುತ್ತಿದ್ದ ನೆರೆಮನೆ ಇಲ್ಲರೆ ಕುಟುಂಬದ ವಿದ್ಯಾರ್ಥಿಗ ಜೊತೆಗಿರ್‌ಕಾಗಿತ್ತ್. ಬಲ ಇದ್ದವು ಸಣ್ಣ ಮಕ್ಕಳ ಕೈಹಿಡ್ಕಂಡ್ ಅಪಾಯಗಳ್ನ ತಪ್ಪುಸಿಕಂಡ್ ಇಸ್ಕೂಲಿಗೆ ಕರ್‍ಕಂಡ್ ಹೋಕಾಗಿತ್ತ್. ಹಂಗಾಗಿ ನಾ ನಮ್ಮ ಕುಟುಂಬದ ದಿ.ಅಪ್ಪಯ್ಯನವರ ಮಗುಳು ಗಂಗಮ್ಮನ ಜೊತೆಲಿ ನನ್ನ ಪೋಷಕರ್ ಕೊಳಂಜಗೇರಿ ಗ್ರಾಮದ ಪಾರಾಣೆ ಹಿರಿಯ ಪ್ರಾಥಮಿಕ ಇಸ್ಕೂಲಿಗೆ ಒಂದನೇ ತರಗತಿಗೆ ಸೇರ್ಸಿದೊ. ಆಗ ನಾ ಹುಟ್ಟಿದ ದಿನ ಇಂತದ್‌ದ್‌ತ ತೋರ್ಸಿರೂ, ಅಧ್ಯಾಪಕರ್ ವಿದ್ಯಾರ್ಥಿನ ದೈಹಿಕ ಬಲ ಮತ್ತೆ ಗಿಡ್ಡ ಉದ್ದನೂ ನೋಡಿ ಒಂದೆರ್ಡ್ ವರ್ಷ ಹೆಚ್ಚ್ ಕಮ್ಮಿ ಮಾಡಿ ಹುಟ್ಟಿದ ತಾರೀಕ್‌ನ ದಾಖಲ್ ಮಾಡ್ತಿದ್ದೊ. ಹಂಗೆ ದಾಖಲೆ ಮಾಡ್ಸಿಕಂಡವರ್‌ಲಿ ನಾನೂ ಒಬ್ಬ. ನನ್ನ ಸರಿಯಾದ ಹುಟ್ಟಿದ ದಿನಾಂಕ 28–07–1924. ಆದರೆ ಅಧ್ಯಾಪಕರ್ ದಾಖಲೆ ಮಾಡಿಕಂಡದ್ 05–03–1926 "ಮನೆಯೇ ಮೊದಲ ಪಾಠಶಾಲೆ"ತ ಹೇಳ್ವಂಗೆ ನಮಿಗೆ ಮನೆಲೇ ಪೋಷಕರ್ ಪಾರ್ ಮೇಲೆ ಹೊಯಿಗೆ ಹರ್‌ಂಡಿ, ನಮ್ಮ ತೋರ್ ಬೆರಳ್‌ಂದ ಹೊಯಿಗೆಲಿ ಅಕ್ಷರ ಕಲ್‌ಸ್‌ತಿದ್ದೊ. ಸಾಯಂಕಾಲ ಆಕನ ಮನೆಲೇ ಮಗ್ಗಿ ಬಾಯಿಪಾಠ ಮಾಡ್‌ಸ್ತಿದ್ದೊ. ಭಾವಗೀತೆ, ಭಕ್ತಿಗೀತೆ, ದೇವರನಾಮ, ಜಾನಪದಗೀತೆ ಇಂತದರೆಲ್ಲ ಕಲ್‌ಸ್‌ತಿದ್ದೊ. ಇರ್ಲ್ ಹೊತ್ತ್ ದೇವರ ಭಜನೆ ಮಾಡಕನ ಕೂಡಿಕಂಬಕಾಗಿತ್ತ್, ಶಿಸ್ತ್‌ನ ಮನೆಲೇ ಕಲ್‌ಸ್‌ತ್ತಿದ್ದೊ. ಅವರವರ ಪೀಠೋಪಕರಣಗಳ್‌ನ, ಬಟ್ಟೆ

ಬರೆಗಳ್‌ನ ಎಲ್ಲೆಲ್ಲಿ ಮಡ್ಕಂಬಕುತ್ತೇಳ್ದರ ಹೇಳಿಕೊಡ್ತಿದ್ದೊ. ಶುಚಿತ್ವದ ಕುರ್ತ್ ತಿಳಿವಳಿಕೆ ಕೊಡ್ತಿದ್ದೊ. ಸುಳ್ಳು, ಮೋಸ ಇದೆಲ್ಲ ಗೊತ್ತಿತ್ತ್‌ಲೆ. ನಾನೊಂದ್ ಸಣ್ಣ ಸುಳ್ಳ್ ಹೇಳ್ದಕೆ ಒಂದ್ ಉದಾಹರಣೆ ಕೊಟ್ಟನೆ.

ಸಾಮಾನ್ಯಾಗಿ ಶಿವರಾತ್ರೆಲಿ ಮನೆ ಮತ್ತೆ ಊರ್‌ನ ಮಕ್ಕಳೊಟ್ಟಿಗೆ ಜಾಗರಣೆ ನೆಪಮಾಡ್ಕಂಡ್, ನೆರೆಕರೆ ಮನೆಗಳಿಗೆ ಹೋಗಿ ಪದಹೇಳ್ಕಂಡ್ ಕೊಣ್ಕಂಡ್ ಅವ್ರವ್ರ ಸಾಂಸ್ಕೃತಿಕ ಚಟುವಟಿಕೆಗಳ್ನ ತೋರ್‍ಸಿ ಅಕ್ಕಿ, ಬೆಲ್ಲ, ತೆಂಗ್‌ನಕಾಯಿ, ದುಡ್ಡು ಹಿಂಗೆ ಕೊಟ್ಟದರತಕಂಬತ್ತಿದ್ದೊ. ಆ ಒಂದ್ ಸಂದರ್ಭಲಿ ನಮ್ಮ ಗುಂಪುನ ಹೈದಂಗ ನಮ್ಮ ಕುಟುಂಬದ ಅಜ್ಜನ ತರಕಾರಿ ತೋಟಂದ ಒಂದ್ ಮೊಟ್ಟೆಗೋಸ್‌ನ (ಕ್ಯಾಬೇಜು) ಕದ್ದ್‌ಬುಟ್ಟೊ. ಈ ಸಂಗತಿನ ಸದ್ರಿ ಅಜ್ಜ ಶ್ರೀ ಪೂವಯ್ಯನವು ನನ್ನ ಅಪ್ಪಂಗೆ ಪುಕಾರ್ ಮಾಡ್ದೊ. ಅಪ್ಪನ ಕೆಮಿಗೆ ಬಿದ್ದ ಮೇಲೆ ಕೇಳೊಕಾ? ಅಪ್ಪ ನನ್ನ ಕದ್ದದ್ದರ ಬಗ್ಗೆ ಕೇಳ್ದೊ. "ನಾ ಇಲ್ಲೆತ ಹೇಳಿಬುಟ್ಟೆ. ಕೂಡ್ಲೆ ಬೆತ್ತಂದ ಎರಡ್ ಬೀತ್. ಆಗ ನನ್ನ ಅಜ್ಜಿ ಮಕ್ಕಳಿಗೆ ಯಂತಕೆ ಹೊಡ್ದಿಯಾ ? ಮಕ್ಕ ತಪ್ಪು ಮಾಡ್ದು ಸಹಜತ ಅಪ್ಪಂಗೆ ಹೇಳ್ತ್. ಅದೇ ನನ್ನ ಸುರೂನ ಮತ್ತೆ ಕಡೇ ಸುಳ್ಳು. ನಾ ಇಂದ್ ಸುಳ್ಳಾಡ್ದಂವ ಅಲ್ಲ. ಸುಳ್ಳು ಹೇಳ್ರೆ ನಂಗೆ ಹೆದ್ರಿಕಾದೆ. ಅಂದ್‌ನ ಕಾಲಲಿ ಇಂದ್‌ನಂಗೆ ಫ್ಯಾಷನ್ ಕೊಡೆಗ ಇತ್ಲೆ. ಇಸ್ಕೂಲ್ ಮಕ್ಕಳಿಗೆ ಅವರ ಪೋಷಕರೇ ಬಿದ್ರ್ ಇಲ್ಲರೆ ವಾಟೆಗಳ್‌ಂದ ಮಾಡ್ದ ಗೊರ್‍ಗನ ಕೊಡ್ತಿದ್ದೊ. ಇಸ್ಕೂಲಿಗೆ ರಜ ಬಾಕನ ನಮಿಗೆಲ್ಲ ದನ ಪಾರದ ಕೆಲ್ಸ. ಊರ್‌ನ ಮಕ್ಕೆಲ್ಲಾ ಅವರವರ ದನಕರ್‌ಗಳ್ನ್ ಹೊಡ್ಕಂಡ್ ಬಂದ್ ಬಾಣೆಗಳ್‌ಲಿ ಎಲ್ಲ ಮಕ್ಕ ಜೊತೆಯಾಗ್‌ತಿದ್ದೊ. ಚೆಂಡಾಟ, ಬುಗುರಿ ಆಟ, ಕೋಲಾಟ, ಕಪ್ಪೆಯಾಟ, ಓಡಿ ಹಿಡಿಯುವ ಆಟ ಹಿಂಗೆ ಬೇರೆ ಬೇರೆ ಆಟಗಳ್ನ ಆಡ್‌ತಿದ್ದೊ. ಎಲ್ಲಾ ವರ್ಗದ ಮಕ್ಕ ಒಂದ್‌ಗೂಡ್‌ದ್‌ರ್‌ಂದ ಯಾವ್ದೇ ಭಿನ್ನ ಭಾವ ಇಲ್ಲದೆ, ಪ್ರೀತಿ ವಿಶ್ವಾಸ–ಬೆಳ್ದದೆ. ಒಗ್ಗಟ್ಟ್‌ಲಿ ಬಲ ಉಟ್ಟುತ್ತೇಳುದರ ತಿಳ್ಕಂಡವೆ. ಆಯಾ ವರ್ಗದ ಭಾಷೆಗಳ್ನ ಕಲೆಕೆ

ಅನುಕೂಲ ಆದೆ. ನಾ ಅಂತಾ ಸಂದರ್ಭಲೇ ಕೊಡವ ಭಾಷೆ, ಮಲೆಯಾಳ, ತುಳು ಮುಂತಾದ ಭಾಷೆಗಳ್ನ ಕಲ್ತ್ ಕಂಡೆ. ನನ್ನ 8ನೇ ಪ್ರಾಯಕ್ಕೆ ಗದ್ದೆ ಊಡ್ಡರ ನಂಗೆ ಕಲ್ಸಿಕೊಟ್ಟೊ.

ನಾ ನಾಲ್ಕನೇ ತರಗತಿ ಮುಟ್ಟ ಹಿರಿಯ ಪ್ರಾಥಮಿಕ ಶಾಲೆ ಪಾರಾಣೆಲಿ ಓದಿದೆ. ಕಿರಿಯ ಪ್ರಾಥಮಿಕ ಶಾಲೆ ಹೊದ್ದೂರ್‌ಲಿ 5ನೇ ತರಗತಿಲಿ ತೇರ್ಗಡೆ ಆಗಿ ಮುಂದೆ ಹಿರಿಯ ಪ್ರಾಥಮಿಕ ಶಾಲೆ ಮೂರ್ನಾಡ್‌ನ 7ನೇ ತರಗತಿವರೆಗೆ ಓದಿದೆ. ಮತ್ತೆ 5ನೇ ತರಗತಿ ಆದ ಮೇಲೆ ಫಸ್ಟ್ ಫಾರಂ, ಸೆಕೆಂಡ್ ಫಾರಂ, ಥರ್ಡ್ ಫಾರಂ'ತ ಫಾರಂ ಸುರು ಆದೊ. ನಾ ಸೆಕೆಂಡ್ ಫಾರಂಲಿ ಓದಿಕಂಡಿರಕನ ಸ್ಕೌಟ್ ಅಭ್ಯರ್ಥಿಯಾಗಿ (Scout Boy) ಆಯ್ಕೆ ಆದೆ. ನಾ ಸ್ಕೌಟ್ ಅಭ್ಯರ್ಥಿಯಾದ್ದರ್‌ಂದ ಖಾಕಿ ಬಟ್ಟೆದ್ ಸಮವಸ್ತ್ರ ಮತ್ತೆ ಕ್ಯಾನ್‌ವಾಸ್ ಶೂ ಹಾಕಂಬ ಅವಕಾಶ ಆತ್. ಶ್ರೀ ಕಂಬೀರಂಡ ಬೋಪಯ್ಯ ಮಾಸ್ಟ್ರ ಸ್ಕೌಟ್ ಅಧ್ಯಾಪಕ ಆಗಿದ್ದೊ. ಅಂದ್ ನಾವ್ ಸ್ಕೌಟ್ ವಿದ್ಯಾರ್ಥಿಗ ಈ ರೀತಿ ಪ್ರಮಾಣವಚನ ಮಾಡಕಾಗಿತ್ತ್. On my honour 9 promise that 9 will do the best, to the god, king and country.

ನಾಥರ್ಡ್ ಫಾರಂಲಿ ಓದಿಕಂಡಿರ್‌ಕನ 1942ರ್‌ಲಿ "ಬ್ರಿಟೀಷರೇ ಭಾರತ ಬಿಟ್ಟು ತೊಲಗಿ" ಚಳುವಳಿಲಿ ನಾನ್ ನನ್ನ ಸಹಪಾಠಿಗಳ್ನ ಕೂಡ್ಸಿಕಂಡ್ ತರಗತಿನ ಬಹಿಷ್ಕರಿಸಿ ಜೈಘೋಷ ಹಾಕಂಡ್ ಮೂರ್ನಾಡು ಪೇಟೆ ಕಡೆಗೆ ಮೆರವಣಿಗೆ ಹೋಕ್ಕನ, ಅಧ್ಯಾಪಕರ್ ನಮ್ಮನ್ನ ಹೆದ್ರಿಸಿ ಪೊಲೀಸ್‌ಗ ಬಂದವೆ, ಶಾಲಾ ಇನ್ಸ್‌ಪೆಕ್ಟರ್ ಬಂದವೆತ ಹೆದ್ರಿಕೆ ಹುಟ್ಸ್‌ಸಿ ತರಗತಿಗೆ ಹಿಂತಿರ್‌ಗಿಸಿದೊ. ನಾವ್ ವಿದ್ಯಾರ್ಥಿಗ ಸನ ಭಾರತದ ಸ್ವಾತಂತ್ರ್ಯ ಚಳುವಳಿಲಿ ಭಾಗವಹಿಸಿದ್ದೊತ್ತೇಳ್ದ್‌ಕೆ ಇದೊಂದ್ ಉದಾಹರಣೆ. ಇಂದ್ ರಾಜಕೀಯ ಮುಖಂಡರ್‌ಲಿ ಈ ವಿಷಯನ ಹೇಳಿರೆ "ನೀನ್ ಜೈಲಿಗೆ

ಹೋಗೊಳನಾ ?"ತ ಕೇಳಿವೆ. ಜೈಲಿಗೆ ಹೋಕೆ ವಿದ್ಯಾರ್ಥಿಗ ಕಳ್ಳರಲ್ಲ, ಕೊಲೆಗಡುಕರಲ್ಲ. ನಾ 1943ರ ಮಾರ್ಚ್‌ಲಿ ಥರ್ಡ್ ಫಾರಂ (7ನೇ ತರಗತಿ) ಬೋರ್ಡು ಪರೀಕ್ಷೆಲಿ ತೇರ್ಗಡೆಯಾದೆ. ಅಲ್ಲಿಗೆ ನನ್ನ ಪ್ರಾಥಮಿಕ ವಿದ್ಯಾಭ್ಯಾಸ ಪೂರ್ತಿ ಆತ್. ನನ್ನ ಪ್ರಾಥಮಿಕ ಶಾಲೆನ ಗುರುಗ –ಹಿರಿಯ ಪ್ರಾಥಮಿಕ ಶಾಲೆ ಪಾರಾಣೆಲಿ ಶ್ರೀ ಚೆರುಮಂದಂಡ ಪೂವಯ್ಯ. ಇವು ತುಂಬಾ ಮೆದು ಸ್ವಭಾವದವು. ಶ್ರೀ ದೇವಣೀರ ಕಾಳಪ್ಪ. ಶ್ರೀ ಬಿದ್ದಂಡ ಮಾದಪ್ಪ ಇವು ಹಂಞ ಗಾಂಭೀರ್ಯದವು. ಶ್ರೀ ಬಲ್ಯಾಟಂಡ ಚಂಗಪ್ಪ ಇವು ಸನ ಅದೇ ಸ್ವಭಾವದವು. ಶ್ರೀ ಗುಡ್ಡೇರ ಪೂವಯ್ಯನವು ಒಳ್ಳ ವ್ಯಕ್ತಿತ್ವದವು. ಇಂಗ್ಲೀಷ್ ಅಧ್ಯಾಪಕ ಗ್ರಾಮರ್‌ಲಿ ಎತ್ತಿದ ಕೈ. ಬಿದ್ದಂಡ ಮುದ್ದಯ್ಯ ಹಂಞ ಉದ್ದದವು. ಕಟ್ಟ್ ನಿಟ್ಟ್‌ನ ವ್ಯಕ್ತಿ. ಶ್ರೀ ಮೇವಡ ಚಿಣ್ಣಪ್ಪ ಇವು ಹಂಞ ಕುಳ್ಳನೆಯ ವ್ಯಕ್ತಿ. ಇಂಗ್ಲೀಷ್‌ಲ್ ಪ್ರವೀಣ. ಕಿರಿಯ ಪ್ರಾಥಮಿಕ ಶಾಲೆ ಹೊದ್ದೂರ್‌ಲಿ ಶ್ರೀ ಮುಕ್ಕಾಟಿ ಗಣಪತಿ. ಇವು ಒಳ್ಳ ಶಿಸ್ತ್‌ನವು. ಕಪ್ಪು ಶರೀರ, ಎತ್ತರ ಇದ್ದೊ. ಯಾಗೊಳು ಬೆಳಿ ರಂಗ್‌ದೇ ಬಟ್ಟೆ ತೊಡ್ತಿದ್ದೊ. ಶ್ರೀ ಮಣವಟ್ಟೀರ ಐಯ್ಯಮ್ಮ ನೆಲಜಿ ಗ್ರಾಮದವು. ಆದರೆ ಹೊದ್ದೂರ್‌ನ ಅವರ ಮನೆಗೆ ದೂರಾಗಿತ್ತ್. ಹಂಗಾಗಿ ಅವು ಸಂಸಾರ ಸಮೇತ ಕಣ್ಣ ಬಲಮುರಿನ ಪಾಂಡಂಡ ಮನೆಲಿ ವಾಸ್ ಮಾಡ್ತಿದ್ದೊ. ಶ್ರೀ ಚೌರೀರ ಮಂದಪ್ಪ ಇವು ಒಬ್ಬ ಗಾಂಭೀರ್ಯದ ವ್ಯಕ್ತಿ. ಗಣಿತ ಪಾಠ ಮಾಡ್ತಿದ್ದೊ. ಇವರ ಕೈಲಿ ಯಾಗೋಳು ಬೆತ್ತ ಇರ್ತಿತ್ತ್. ಶ್ರೀ ಚೌರೀರ ಅಪ್ಪಯ್ಯ ಹಿಂಗೆ ಬೇರೆ ಬೇರೆಯವು ಇದ್ದೊ. ಹಿರಿಯ ಪ್ರಾಥಮಿಕ ಶಾಲೆ ಮೂರ್ನಾಡ್‌ಲಿ ಶ್ರೀ ಹೆಚ್.ಎಸ್. ವೆಂಕಪ್ಪಯ್ಯ, ಇಂಗ್ಲಿಷ್ ಅಧ್ಯಾಪಕರಾಗಿದ್ದೊ. ವ್ಯಾಕರಣಂದ ಪಾಠ ಸುರು ಮಾಡ್ತಿದ್ದೊ. ಇವು ಬ್ರಾಹ್ಮಣ ಹಾರ್‌ಗಚ್ಚೆ ಧರ್‌ಸ್ತಿದ್ದೊ. ಬೆತ್ತ ಒಟ್ಟಿಗಿರ್‌ತಿತ್ತ್. ಶ್ರೀ ಮುಗ್ಗೇರ ಸುಬ್ಬಯ್ಯ, ಮುಖ್ಯೋಪಾಧ್ಯಾಯರಾಗಿದ್ದೊ. ಶ್ರೀ ಬಿದ್ದಾಟಂಡ ಅಪ್ಪಣ್ಣ ಇವರ್ದ್ ಒಳ್ಳ ಗಾಂಭೀರ್ಯದ ವ್ಯಕ್ತಿತ್ವ. ಯಾಗೋಳು ಅರ್ಧಕೈ

ವೇಸ್ಟ್ ಕೋಟ್‌ನ ಮೇಲೆ ಕಪ್ಪು ಕೋಟು ಹಾಕಿ, ಟೈ ಕಟ್ಟ್‌ತಿದ್ದೊ. ಇವು ಭೂಗೋಳ ಪಾಠಕ್ಕೆ ಬಾತಿದ್ದೊ. ಪ್ರಶ್ನೆಗಳ ಸುರಿಮಳೆ ತರಗತಿಲಿ ಹೆಚ್ಚ್‌ನವರ್ನ ಪ್ರಶ್ನೆ ಕೇಳ್ದ ಮೇಲೆ ಕಡೆಗೆ ನನ್ನನ ಕೇಳ್ತಿದ್ದೊ. ನಾ ಸರಿ ಉತ್ತರ ಕೊಡ್ತಿದ್ದೆ ನಾನ್ ಭೂಗೋಳಲಿ ತರಗತಿಗೆ ಮೇಲು. ಶ್ರೀ ಅಪ್ಪಣ್ಣನವು ತಮ್ಮ ಮಂಜ ಪೊನ್ನಣ್ಣಂಗೆ ನನ್ನ ಅಂತಿಮ ಪರೀಕ್ಷೆ ಆದ ಮೇಲೆ ನನ್ನ ಪುಸ್ತಕಗಳ್ನ ಅವಂಗೆ ಕೊಡೊಕುತ ನಂಗೆ ತಾಕೀತ್ ಮಾಡ್ದೊ. ಅದರ ಅರ್ಥ ನಾ ಖಂಡಿತ ತೇರ್ಗಡೆ ಆನೆತ ಅವರ ಭಾವನೆ. ಶ್ರೀ ಪಾಲೆಕಂಡ ಐಯ್ಯಣ್ಣನವು ತೋಟಗಾರಿಕೆಗೆ ಬಾತಿದ್ದೊ. ಉದ್ದನೆಯ ವ್ಯಕ್ತಿ. ಶ್ರೀ ಕೆ.ಟಿ. ನಾರಾಯಣನವು ಕನ್ನಡ ಮಾಸ್ಟ್ರ. ಇವು ನಾವೇನಾರ್ ಹಾವ್ ಕಂಡರೆ "ಜನಮೇಜಯ ಯಜ್ಞಶಾಂತಂ, ನಾಸ್ತಿಕ್ಯ ವಚನಸ್ಮರಂ"ತ ಹೇಳೊಕುತ ಹೇಳಿ ಕೊಟ್ಟಿದ್ದೊ. ಯಾಕೆತ್ತೇಳ್ರೆ ಜನಮೇಜಯ ಯಜ್ಞ ಮಾಡಕನ ಹಾವುಗೆಲ್ಲಾ ಬಂದ್ ಯಜ್ಞ ಕುಂಡಕ್ಕೆ ಬಿದ್ದೊಗಡ. ಹಂಗೆ ನಾವ್ ಹಾವ್ ಕಾಂಬಕನ ಅವುಗಳಿಗೆ ಹೆದ್ರಿಕೆ ಬರ್ಲಿತ ಈ ಮಾತ್ ಹೇಳ್ರೆ ನಮ್ಮಂದ ದೂರ ಹೋದವೆಗಡ. ಅವರ ಈ ಮಾತ್ ಇಂದೂ ಗ್ಯಾನ ಉಟ್ಟು. ಶ್ರೀ ಕಂಬೀರಂಡ ಬೋಪಯ್ಯನವು ಸ್ಕೌಟ್ ಮಾಸ್ಟ್ರ. ಶಿಸ್ತ್‌ನ ವ್ಯಕ್ತಿ. ಒಂದ್ ಸತಿ ಜಿಲ್ಲಾ ಅಧ್ಯಾಪಕರ ಕೂಟ ಮೂರ್ನಾಡ್ ಶಾಲೆಲಿ ಏರ್ಪಾಡಾಗಿಕ್ಕನ ನಾವು ಸ್ಕೌಟ್ ಅಭ್ಯರ್ಥಿಗ ಸ್ವಯಂ ಸೇವಕರಾಗಿ ಕೆಲ್ಸ ಮಾಡ್ಯೊಳೊ.

1943ರ್‌ಲಿ ನನ್ನ ಪ್ರಾಥಮಿಕ ಶಿಕ್ಷಣ ಆದ ಮೇಲೆ ಅದೇ ವರ್ಷ ನಾಪೋಕ್ಲುಲಿ ಪ್ರೌಢಶಾಲೆ ಸುರುಆತ್. ನಾವ್ ಸನ ನಾಪೋಕ್ಲುನ ಶಾಲಾ ಕಟ್ಟಡಕ್ಕೆ ಬತ್ತದ ರೂಪಲಿ ಧನಸಹಾಯ ಮಾಡ್ಯೊಳೊ. ಆದರೆ ನಮ್ಮ ಮನೆಂದ ಸುಮಾರ್ 4 ಮೈಲಿ ದೂರ ಇದ್ದರ್‌ಂದ, ದಿನಾ ಹೋಗಿ ಬಾಕೆ ಕಷ್ಟ ಆತಿತ್. ಹಂಗಾಗಿ ನನ್ನನ ನನ್ನ ಚಿಕ್ಕಪ್ಪನವು ಮಡಿಕೇರಿ ಸೆಂಟ್ರಲ್ ಹೈಸ್ಕೂಲ್‌ಗೆ ಸೇರ್ಸಿದೊ. ಮಡಿಕೇರಿನ ಗೌಡ ಬೋರ್ಡಿಂಗ್‌ಲಿ ಉಳ್ಕಂಬಕೆ ಏರ್ಪಾಡ್ ಮಾಡ್ದೊ. ಆಗ ಶ್ರೀ

ಮೂಡೇರ ಪೊನ್ನಪ್ಪನವು ಗೌಡ ಬೋರ್ಡಿಂಗ್‌ನ ಮ್ಯಾನೇಜರ್ ಆಗಿದ್ದೊ. 1944ರ್‌ಲಿ ಶ್ರೀ ಪೊನ್ನಪ್ಪನವು ನಿವೃತ್ತಿಯಾದೊ. ಮತ್ತೆ ಕೆಲತಿಂಗಳ ಮುಟ್ಟ ಶ್ರೀ ಯಾಲದಾಳು ಟಿ. ಐಯ್ಯಪ್ಪನವು ಮ್ಯಾನೇಜರ್ ಆದೊ. ಅವು ಆದ ಮೇಲೆ ಶ್ರೀ ಉಳುವಾರನ ಸೋಮಯ್ಯನವು ಮ್ಯಾನೇಜರ್ ಆದೊ. ಶ್ರೀ ನಿಡ್ಯಮಲೆ ಮುದ್ದಪ್ಪ ಜಡ್ಜ್ ಗೌಡ ಬೋರ್ಡಿಂಗ್‌ನ ಅಧ್ಯಕ್ಷರಾಗಿದ್ದೊ. ಶ್ರೀ ಚೆರಿಯಮನೆ ಪೊನ್ನಪ್ಪನವು ಉಸ್ತುವಾರಿನ ಮಾಡ್ತಿದ್ದೊ. ನಾನ್ ಬೋರ್ಡಿಂಗ್‌ಲಿ ಇರಕನ ಸುಮಾರ್ 78–80 ವಿದ್ಯಾರ್ಥಿಗ ಇದ್ದೊ. 1944ರ ಆಚೆ ಈಚೆ ನನ್ನನ್ನ ವಿದ್ಯಾರ್ಥಿ ಸಮುದಾಯ ಬೋರ್ಡಿಂಗ್‌ನ ಸೆಕ್ರೆಟರಿತ್ತೇಳಿ ಸರ್ವಾನುಮತಂದ ಆಯ್ಕೆ ಮಾಡ್ದೊ. ಸೆಕ್ರೆಟರಿ ಆದವಂಗೆ ಜವಾಬ್ದಾರಿ ಜಾಸ್ತಿ. ಬೆಳಿಗ್ಗೆ 5.30ಕ್ಕೆ ಗಂಟೆ ಹೊಡ್ದ್ ಮಕ್ಕಳ್ನ ಏಳ್ಸೊಕು. ಬೆಳಿಗ್ಗೆ 6.30ಕ್ಕೆ "ಸ್ಟಡಿಹಾಲ್"ಲಿ ಹಾಜರಾಗಿ ಬೆಳಿಗ್ಗನ ಪ್ರಾರ್ಥನಾ ಕಾರ್ಯಕ್ಕೆ ತಯಾರ್ ಮಾಡಿ ಭಜನಾ ವ್ಯವಸ್ಥೆ, ಅಷ್ಟೇ ಅಲ್ಲ, ಎಲ್ಲವೂ ಭಜನೆ ಮಾಡಿಕೆ ಸೇರುವಂಗೆ ನಿಗವಹಿಸೊಕು. ಈ ರೀತಿ ಸಾಯಂಕಾಲ ಹೊತ್ತ್ ಇದೇ ರೀತಿ ಕಾರ್ಯಕ್ರಮಗಳ್‌ಲಿ ಸೇರುವಂಗೆ ಮಾಡೊಕು. ಎಲ್ಲವೂ ಅವರವರ ಕೋಂಬರೆನ ಬುಟ್ಟ್ ಓದುವೆನಾತ ನೋಡಿಕಂಬಕಾಗಿತ್ತ್. ಊಟದ ವ್ಯವಸ್ಥೆಲಿ ವ್ಯತ್ಯಾಸ ಆಗದಾಗೆ ಅಡುಗೆಯುವ ಕಡೆ ನಿಗವಹಿಸರಾಗಿತ್ತ್. ಹಬ್ಬ ಹರಿದಿನಗಳ್‌ಲಿ ಅವರವರ ರುಚಿಗೆ ತಕ್ಕಂಗೆ ಅಡುಗೆ ಮಾಡಿಕೊಡೊಕು. ಮ್ಯಾನೇಜರ್ ಬೇಕಾದ ತಿಂಗಳ ಕಡೆಲಿ ವಿದ್ಯಾರ್ಥಿಗಳ್‌ಂದ ಬೋರ್ಡಿಂಗ್ ಚಾರ್ಜ್ ವಸೂಲ್ ಮಾಡ್ತಿದ್ದೊ. ಇವೇ ಅವರ ಮುಖ್ಯ ಕೆಲ್ಸ. ಸೆಕ್ರೆಟರಿ ಆದವಂಗೆ ಮ್ಯಾನೇಜರ್‌ಗಿಂತ ಜಾಸ್ತಿ ಕೆಲ್ಸ ಇದ್ದದೆ. ಈ ಮಧ್ಯೆ ನಂಗೆ ಒಬ್ಬ ಅಡುಗೆಯವಂನಲ್ಲಿ ಗುಮಾನಿಕಂಡ್ ಬಾತ್. ಒಂದ್ ಇರ್‌ಳ್ ನನ್ನ ಸಿನೇತ ಕುಂಬುಗೌಡನ ಉತ್ತಯ್ಯನ ಕರ್ದ್ "ಎಲ್ಲಾ ಮಕ್ಕ ಮಲ್ಗಿದ ಮೇಲೆ ನೀನ್ ಒಬ್ಬ ಮಾತ್ರ "ಸ್ಟಡಿಹಾಲ್"ಲಿ ಓದಿಕಂಡಿರೊಕುತ ಸೂಚನೆ ಕೊಟ್ಟೆ ನಾನ್

ಅಡುಗೆ ಸಾಮಾನ್ ದಾಸ್ತಾನ್ ಕೋಣೆನ ಮುಂದೆ ಇದ್ದ ಸೌದೆ ಅಟ್ಟಣಿಕೆ ಮೇಲೆ ಹತ್ತಿ ಕುದ್ದ್ ಪಾರಕಾದೆ. ಇರ್‌ಳ್ ಸುಮಾರ್ 11–00 ಗಂಟೆ ಸಮೆಯಲಿ ಒಬ್ಬ ಅಡಿಗೆಯಂವ ಗೋಣಿ ಚೀಲಕ್ಕೆ 10–15 ಸೇರಷ್ಟ್ ಅಕ್ಕಿನ ತುಂಬಿಕಂಡ್ ದಾಸ್ತಾನ್ ಮಳಿಗೆಗೆ ಬೀಗಹಾಕಿ ಹೊರಗೆ ಬಾತ್. ಅದರ್‌ನೆಲ್ಲ ನೋಡ್ದ ನಾನ್ ಸೌದೆ ಮೇಲೆಂದ ಇಳ್ದೆ. "ಇದೇನ್ ರಾಮಯ್ಯ"ತ ಕೇಳ್ದೆ. ಆಗ ಅಂವ ದಮ್ಮಯ್ಯ ಅಣ್ಣ ಬುಟ್ಟ್‌ಬುಡಿತ ಗೋಗರ್ತ್. ನೀನ್ ನನ್ನನ ಮಾತ್ರ ಕೇಳ್ದು ಅಲ್ಲ. "ಸ್ಟಡಿ ಹಾಲ್"ಲಿ ಒಬ್ಬ ಉಟ್ಟು. ಅವಂಗೆ ಇದರ್‌ನ ತೋರ್‌ಸ್ತ ಹೇಳಿ ಕದ್ದ ರಾಮಯ್ಯನ ಸ್ಟಡಿ ರೂಂಗೆ ಕರ್‌ಕಂಡೋದೆ. ಅಲ್ಲಿ ಉತ್ತಯ್ಯ ನೊಟ್ಟಿಗೆ ಈ ಉದ್ದೇಶಂದ ನಿನ್ನ ನಾನ್ ಇಲ್ಲಿ ಕೂರ್‌ಸಿದ್. ಇಂವಂಗೆ ನಮ್ಮ ಅಕ್ಕಿ ಕದ್ದ್ ಅರಣ್ಯ ಇಲಾಖೆನವುಕೆ ಮಾರ್‌ದು ಅಭ್ಯಾಸ ಆಗುಟು. ನಂಗೆ ತುಂಬಾ ದಿನಗಳ್‌ಂದ ಇಂವನ ಮೇಲೆ ಸಂಶಯ ಬಂದಿತ್ತ್. ಇಂವನ ಸೆರೆ ಹಿಡಿಯೊಕುತ ಗ್ಯಾನ ಮಾಡ್ದೆತ್ತೇಳಿ ಕಪಾಲಿಗೆ ಬುಟ್ಟೆ. ಹಿಡ್ದ್ ಹೊರಗೆ ನೂಕಿದೆ. ವಾರ್‌ನೆ ದಿನ ಬೆಳಿಗ್ಗೆ ವಿಷಯನ ಮ್ಯಾನೇಂಜರ್‌ಗೆ ಹೇಳ್ದೆ. ಮ್ಯಾನೇಜರ್ ಶ್ರೀ ಸೋಮಯ್ಯನವು ಉಸ್ತುವಾರಿ ಹೊತ್ತಿದ್ದ ಶ್ರೀ ಸಿ.ಕೆ. ಪೊನ್ನಪ್ಪನವುಕೆ ವಿಷಯ ಮುಟ್ಟಿಸಿದೊ.

ಶ್ರೀ ಪೊನ್ನಪ್ಪನವು ಬೋರ್ಡಿಂಗ್‌ನ ಅಧ್ಯಕ್ಷರಾದ ನ್ಯಾಯಾಧೀಶ ನಿಡ್ಯಮಲೆ ಮುದ್ದಪ್ಪನವುಕೆ ವಿಷಯ ಮುಟ್ಟಿಸಿದೊ. ನ್ಯಾಯಾಧೀಶರ್ ನನ್ನನ ಅವರ ಮನೆಗೆ ಬಾಕೆ ಮಾಡ್ದೊ. ನಾನ್ ನನ್ನ ಸಿನೇತ ಉತ್ತಯ್ಯ ಮತ್ತೆ ಇನ್ನಿಬರ್‌ನ ಕರ್‌ಕಂಡ್ ನ್ಯಾಯಾಧೀಶರಲ್ಲಿಗೆ ಹೋದೆ. ಶ್ರೀಯುತರೊಟ್ಟಿಗೆ ನಡ್ದ ವಿಷಯನ ಹಿಂಗಿಂಗೆ ಹಿಂಗಿಂಗೆತ ಹೇಳ್ದೆ. ಆಗ ನ್ಯಾಯಾಧೀಶರ್ "ನೀನ್ ಒಳ್ಳೆ ಕೆಲ್ಸನೇ ಮಾಡ್ಯೊಳ. ಮೋಡರ್ನ್ ಸ್ಟೋರ್‌ನ ಶ್ರೀ ಪಾಂಡನ ಸುಬ್ಬಯ್ಯನವುಕೆ ಹೇಳಿ ಬೇರೊಬ್ಬ ಅಡುಗೆಯಂವನ ನೇಮಕ ಮಾಡ್ನೊತ ಹೇಳಿ ನಮ್ಮನ್ನ ಕಳ್ಸಿದೊ. ಹಂಗೆನೆ ಒಂದೆರ್‌ಡ್ ದಿನಗಳ್‌ಲಿ ಶ್ರೀ ಸುಬ್ಬಯ್ಯನವು

ಬೆಳ್ಯಪ್ಪತ್ತೇಳುವ ಅಡುಗೆಯಂವನ ಬೋರ್ಡಿಂಗ್‍ಗೆ ಕಳ್ಸಿ ಕೊಟ್ಟೊ. ಇದ್ ನನ್ನ ಬೋರ್ಡಿಂಗ್ ಜೀವನದ ಅನುಭವ. ನ್ಯಾಯಾಧೀಶ ಶ್ರೀ ಯನ್. ಮುದ್ದಪ್ಪನವರ ಧರ್ಮಪತ್ನಿ 1945–46ರ್‌ಲಿ ದೈವಾಧೀನರಾದೊ. ನಾನ್ ಕೆಲವು ಬೋರ್ಡಿಂಗ್ ವಿದ್ಯಾರ್ಥಿಗೆ ಅವರ ಅಂತಿಮ ದರ್ಶನ ಪಡ್ದೊ.

ವಸತಿ ನಿಲಯದ ನನ್ನ ಆಪ್ತ ಸಿನೇತರ್ . ಶ್ರೀಮಾವೋಜಿ ಆರ್. ಜನಾರ್ಧನ, ಶ್ರೀ ಮೊಟ್ಟನ ಮುತ್ತಪ್ಪ, ಶ್ರೀ ಮಾಡಾವು ಯನ್. ಮುತ್ತಪ್ಪ, ಶ್ರೀ ಕೊಂಪುಳೀರ ಆನಂದ, ಶ್ರೀ ಕುಂಬುಗೌಡನ ಉತ್ತಯ್ಯ. ಕೊಡೆಕಲ್ಲು ಪುಟ್ಟಪ್ಪ, ಶ್ರೀ ಗುಡ್ಡನ ಜಿ. ಗಣಪತಿ, ಶ್ರೀ ಕಲ್ಲು ಮುಟ್ಲು ಸುಬ್ರಾಯ, ಇವೆಲ್ಲ ಯಾಗೋಳು ನನ್ನೊಟ್ಟಿಗೆ ಇರ್ತಿದ್ದವು. ಶ್ರೀ ಯಂ.ಆರ್. ಜನಾರ್ಧನನವು ನನ್ನ ಒಬ್ಬ ಚಡ್ಡಿ ದೋಸ್ತ್‌ತ ಹೇಳಿಕೆ ತಪ್ಪಾಕಿಲೆ. ಯಾಕೆತ್ತೇಳ್ರೆ ರಜೆ ಬಾಕನ ಸೂರೂಗೆ ಅವರ ಮನೆಗೆ ಹೋಗದೆ ನಮ್ಮ ಮನೆಗೆ ಬಂದ್ 3–4 ದಿನ ನಮ್ಮಲ್ಲೆ ಇದ್ದ್, ಹೊರ್ಡಕನ "ಬೆಳ್ಯಪ್ಪಣ್ಣ ನಾವಿಬ್ಬರೂ ನಮ್ಮ ಮನೆಗೆ ಪೋಯಾ ?"ತ ಬೇಡಿಕಂಬತಿತ್ತ್. ಹಂಗೆ ನಾನ್ ಸನ ಅವರ ಪೆರಾಜೆ ಮನೆಗೆ ಹೋಗಿ 1–2 ಅವರ ಮನೆ ಉಳ್ದ್ ಬಾತಿದ್ದೆ. ಶ್ರೀಯುತ ಜನಾರ್ಧನನವು ತಮ್ಮ ಪ್ರೌಢ ವಿದ್ಯಾಭ್ಯಾಸನ ಆದ ಮೇಲೆ ಅವು ಬಿ.ಎಸ್.ಸಿ, ಎಲ್‌ಎಲ್‌ಬಿ. ಮಾಡಿ ವಕೀಲ ವೃತ್ತಿ ಮಾಡಿಕಂಡ್ ಕಡೆಗೆ ಕರ್ನಾಟಕದ ಹಿಂದೆ ತೀರ್‌ಕಂಡೊ. ಇವು ತುಂಬ ಹಠವಾದಿ. ಇವ್ ಹಠವಾದಿ ಆದ್ದಕ್ಕೇ ಉನ್ನತ ಹುದ್ದೆಗೆ ಏರಿಕೆ ಕಾರಣ ಆತ್. ನನ್ನ ಸಿನೇತ ಕೆ.ಕೆ. ಆನಂದನವ್ ಪದವಿ ಪಡ್ದ ಮೇಲೆ ಉಪಾಧ್ಯಾಯರಾಗಿ, ಪ್ರಾಧ್ಯಾಪಕರಾಗಿ, ಡಿ.ಡಿ.ಪಿ.ಐ. ಆಗಿ ನಿವೃತ್ತರಾದೊ. ಶ್ರೀ ಜೆ.ಕೆ. ಗಣಪತಿಯವು ಅರಣ್ಯ ಇಲಾಖೆಲಿ ರೇಂಜರ್ ಆಗಿ ಬಡ್ತಿ ಹೊಂದಿ, ನಿವೃತ್ತರಾಗಿ ತೀರ್‌ಕಂಡೊ. ಶ್ರೀ ಕೆ.ಕೆ. ಉತ್ತಯ್ಯನವು ಸುರೂಗೆ ಅಧ್ಯಾಪಕ ವೃತ್ತಿ ಮಾಡಿ ತರಬೇತಿ ಶಾಲೆಂದಲೇ ಸೈನ್ಯಕೆ

ಸೇರ್‍ದೊ. ನಿವೃತ್ತರಾಗಿ ಕೆಲವ್ ವರ್ಷಗಳ ಹಿಂದೆ ತೀರ್‍ಕಂಡೊ. ಶ್ರೀ ಯಂ.ಪಿ. ಮುತ್ತಪ್ಪನವು ಕಂದಾಯ ಇಲಾಖೆಲಿ ಕಂದಾಯ ಪರಿವೀಕ್ಷಕರಾಗಿ ನಿವೃತ್ತಿಯಾದ ಎರಡ್ ವರ್ಷಗಳ್ಲೇ ತೀರ್‍ಕಂಡೊ. ಶ್ರೀ ಯಂ.ಎಸ್. ಮುತ್ತಪ್ಪನವು ಮಡಿಕೇರಿ ಪುರಸಭೆಯ ಅಧಿಕಾರಿಯಾಗಿ ನಿವೃತ್ತರಾದ ಮೇಲೆ ಈಗ ಒಂದ್ ವರ್ಷದ ಹಿಂದೆ ತೀರ್‍ಕಂಡೊ.

ನಾನ್ ಮಡಿಕೇರಿನ ಸೆಂಟ್ರಲ್ ಹೈಸ್ಕೂಲ್‌ಲಿ ಓದ್‌ತ್ತಿರಕನ ಬೆರಳಚ್ಚ್‌ನ ಐಚ್ಛಿಕ ವಿಷಯ ಆಗಿ ತಕ್ಕಂಡೆ. ಒಂಬತ್ತನೇ ತರಗತಿನ ಕಡೇ ಪರೀಕ್ಷೆಲಿ ಶೇ.73 ಅಂಕ ಬಾತ್. ಅದ್ಕಾಗಿನಂಗೆ ಬಹುಮಾನನೂ ಸಿಕ್ತ್. ನಮ್ಮ ಅಂದ್‌ನ ಪ್ರೌಢ ಶಿಕ್ಷಣ ಮದ್ರಾಸ್ ವಿಶ್ವವಿದ್ಯಾನಿಲಯದ ಸಿಲೇಬಸ್ಸ್‌ಗೆ ಒಳಪಟ್ಟಿತ್ತ್. 1946ರ್‌ಲಿ ನಾ ಅಂದ್‌ನ ಮೆಟ್ರಿಕ್ಯುಲೇಷನ್‌ಲಿ ತೇರ್ಗಡೆ ಆದ ಮೇಲೆ ನನ್ನ ವಿದ್ಯಾಭ್ಯಾಸ ನಿಲ್ಸಿದೆ. ನನ್ನ ಅಂದ್‌ನ ಓಡಾಟದ ಖರ್ಚ್ ಎಲ್ಲ ಸೇರಿ ಒಟ್ಟು ನನ್ನ ಪ್ರೌಢಶಿಕ್ಷಣದ ವೆಚ್ಚ ರೂ.830 ಅಂದ್‌ನ ಹಣಕ್ಕೆ ಎಷ್ಟ್ ಬೆಲೆ ಇತ್ತ್‌ತ ನೀತೀ ಊಹಿಸ್ಕಣಿ.

ನನ್ನ ಅಂದ್‌ನ ಸೆಂಟ್ರಲ್ ಹೈಸ್ಕೂಲ್‌ನ ಗುರುಗಳ ಹೆಸ್ರ್‌ಗಃ ಶ್ರೀ ಬಿದ್ದಂಡ ಯಸ್. ಕುಶಾಲಪ್ಪನವು, ಮುಖ್ಯೋಪಾಧ್ಯಾಯರಾಗಿದ್ದೊ. ಒಳ್ಳೆ ವ್ಯಕ್ತಿತ್ವ ಮತ್ತೆ ಸಾಧು ಸ್ವಭಾವದವಾಗಿದ್ದೊ. ಇವು ನಿವೃತ್ತರಾದ ಮೇಲೆ ಕೊಡಗು ಸರಕಾರಲಿ ಸಭಾಪತಿಗಳಾಗಿ ಸೇವೆ ಮಾಡ್ಯೊಳೊ. ಶ್ರೀ ಆರ್. ಗಣೇಶ್‌ರಾವ್‌ನವು ಸಹಾಯಕ ಅಧ್ಯಾಪಕರಾಗಿಯೂ ಅಲ್ಲದೆ ಫಸ್ಟ್ ಅಸಿಸ್ಟೆಂಟ್ ಆಗಿದ್ದೊ. ಎತ್ತರದ ಮೈಕಟ್ಟ್, ಗಾಂಭೀರ್ಯ ಹಾಗೂ ಶಿಸ್ತ್‌ನ ವ್ಯಕ್ತಿ. ಶಾಲಾ ಆಡಳಿತಲಿ ಇತರ ಮಾರ್ಗದರ್ಶನ ಇತ್ತ್. ಇವು ನಿವೃತ್ತಿ ಆದ ಮೇಲೆ ಡಿ.ಡಿ.ಪಿ.ಐ.ಆಗಿ ಸೇವೆ ಸಲ್ಲಿಸಿಯೊಳೊ. ಶ್ರೀ ಕೇಶವಾಚಾರಿಯವು ಕನ್ನಡ ಪಂಡಿತರಾಗಿದ್ದೊ. ಕುಳ್ಳನೆಯ ವ್ಯಕ್ತಿ ಶ್ರೀರಾಮ್‌ಭಟ್ ಇವು ವಿದ್ಯಾರ್ಥಿಗಳೊಟ್ಟಿಗೆ ತಮಾಷೆಯಾಗಿರ್‌ತ್ತಿದ್ದೊ. ಇವು ಇಂಡಿಯನ್ ಹಿಸ್ಟರಿ ಪಾಠ ಭೋಧನೆ ಮಾಡ್ತಿದ್ದೊ. ತಮ್ಮ ಪಂಚೆದ್ ಒಂದ್ ತುದಿನ ಕೋಟ್ ಜೋಬೊಳಗೆ

ಹಾಕಂಬತ್ತಿದ್ದೊ. ಒಂದ್ ರೀತಿಯ ಆ್ಯಕ್ಷನ್‌ಂದ ವರ್ತಿಸ್‌ತಿದ್ದೊ. ಶ್ರೀ ಶ್ರೀನಿವಾಸರಾವ್ ಇವು ವಿಜ್ಞಾನ ಪ್ರಾಧ್ಯಾಪಕರ್.

ಆರ್ಕಿಮಿಡೀಸ್‌ನ ಪ್ರಯೋಗಗಳ್ನ ತೋರ್‌ಸ್‌ತಿದ್ದೊ. ಉದಾ : (Heat Expends the body, Cold Contracts them). ತಮಾಷೆಂದ ಇರ್‌ತಿದ್ದೊ. ಶ್ರೀ ಐಚೆಟ್ಟಿರ ಎಂ. ಮುತ್ತಣ್ಣ ಇವು ಕನ್ನಡ ಪಂಡಿತ. ಶಿಸ್ತ್‌ನ ವ್ಯಕ್ತಿತ್ವ ಇವು ಮುಂದೆ ಅಮೇರಿಕಾದ ನಿವಾಸಿ ಆದೊ. ಅಲ್ಲಿ ಅವು ಹಲವು ಕಾದಂಬರಿ ಮತ್ತೆ ಕವನಗಳ್‌ನ ಬರ್ದೊ. ಶ್ರೀ ಪಟ್ಟಮಾಡ ಪೂವಯ್ಯನವು ಒಳ್ಳ ಮೈಕಟ್ಟ್‌ನ ವ್ಯಕ್ತಿ. ಇಂಗ್ಲಿಷ್ ಹಿಸ್ಟರಿ ಬೋಧಿಸ್‌ತಿದ್ದೊ. ಶ್ರೀ ಪಟ್ಟಡ ಪೊನ್ನಪ್ಪ ಇವು ಮರಕೆಲ್ಸದ ಬಗ್ಗೆ ಮಾಹಿತಿ ಕೊಡ್ತಿದ್ದೊ. (Corpenting Work) ಶ್ರೀ ಭಗವಾನ್‌ದಾಸ್ ಇವು ಶಾರೀರಿಕ ಶಿಕ್ಷಣ ಕಲ್ಸ್‌ತಿದ್ದೊ. ಡ್ರಿಲ್ ಮಾಸ್ಟರ್ ಶ್ರೀ ಪಿಳ್ಳೆ ಇವು ಬೆರಳಚ್ಚ್ ಅಧ್ಯಾಪಕರ್. ಇವರ ಊರ್ ಕೇರಳ. ಕುಳ್ಳನೆಯ ವ್ಯಕ್ತಿ. ಅಡ್ಡಪಂಚೆ. ಯಾಗೋಳ್ ಕಪ್ಪು ವರ್ಣದ ಕೋಟು ಹಾಕ್‌ತಿದ್ದೊ. ಇಂದ್ ನಂಗೆ ತಿಳ್ದ ಮಟ್ಟಿಗೆ ಇವು ಯಾರೂ ಜೀವಂತ ಆಗಿಲ್ಲೆ. ನಾನ್ ಈ ಮೂಲಕ ನನ್ನ ಎದೆ ತುಂಬಿದ ಶ್ರಂದ್ಧಾಂಜಲಿನ ಎಲ್ಲವ್ ಕೂ ಅರ್ಪಿಸಿನೆ. ಗುರುಬ್ರಹ್ಮ, ಗುರುವಿಷ್ಣು, ಗುರುದೇವ ಮಹೇಶ್ವರ, ಗುರುವೇ ಸಾಕ್ಷಾತ್ ಪರಬ್ರಹ್ಮತ ಹೇಳಿಕಂಡ್ ನನ್ನ ಪ್ರಾಥಮಿಕ ಮತ್ತೆ ಪ್ರೌಢಶಾಲಾ ಅಧ್ಯಾಪಕರ್‌ಗಳಿಗೆ ನಾ ಚಿರಋಣಿ ಆಗೊಳೆ.

ಗುರುವೇ ಸಾಕ್ಷಾತ್ ಪರಬ್ರಹ್ಮತ ಹೇಳ್ದುಕೆ ನಾನ್ ಇಲ್ಲಿ ಒಂದ್ ಸಣ್ಣ ಉದಾಹರಣೆನ ಕೊಟ್ಟನೆ.

2010ರ ಫೆಬ್ರವರಿಲಿ ಜಪಾನ್‌ಲಿ ಅತೀ ದೊಡ್ಡ ಭೂಕಂಪನೂ, ಸುನಾಮಿನೂ ಆಗಿ ಕೋಟಿಗಟ್ಟಲೆ ಜನ ತಮ್ಮ ಜೀವಕಳ್ಕಂಡೊ. ಆಗ ಜಪಾನ್‌ನ ಹಿರೋಶಿಮಾ ಬೆಟ್ಟದ ಬುಡಲಿ ಒಂದ್ ವಿದ್ಯಾಕೇಂದ್ರ ಇತ್ತ್. ಅಲ್ಲಿ ವಿದ್ಯಾರ್ಥಿಗ ವಿದ್ಯಾಭ್ಯಾಸ ಮಾಡ್ತಿದ್ದೊ. ಒಂದ್ ತರಗತಿನ

ವಿದ್ಯಾರ್ಥಿಗಳಿಗೆ ಸ್ಟಡಿಲೀವ್ (ಓದಿಕೆ) ಕೊಲ್ತಿದ್ದೊ. ದಿಢೀರ್‌ತ ಸುನಾಮಿ ಬಂದ್‌ಬುಡ್ತ್. ಆಗ ಗುರುಗ ಅವರ ತರಗತಿನ ಸುಮಾರ್ 30–32 ವಿದ್ಯಾರ್ಥಿಗಳ್ನ ಕೂಡಲೆ ಹೊರಗಡೆ ಬುಟ್ಟ್ ಬೆಟ್ಟಹತ್ತಿಕೆ ಹೇಳ್ದೊ. ಮಕ್ಕಳೂ ಗುರುಗಳೂ ಬೆಟ್ಟನ ಹತ್ತಿಕಂಡ್ ಹೋತಿದ್ದಂಗೆ ಹಿಂದೆಂದ ಒಟ್ಟಿಗೆ ಸುನಾಮಿ ಬರ್ತಿತ್ತ್. ಗುರುಗ ವಿದ್ಯಾರ್ಥಿಗಳ್ನ ಇನ್ನೂ ಮೇಲಕ್ಕೆ ಹತ್ತಿಕೆ ಹೇಳ್ದೊ. ಬೆಟ್ಟದ ತುತ್ತ ತುದಿನ ಮುಟ್ಟುವಷ್ಟರ್‌ಲಿ ಸುನಾಮಿ ಇಳೆಕೆ ಸುರಾತ್. ವಿದ್ಯಾರ್ಥಿಗಳ ಜೀವ ಎಳ್ಸಿಕೆ ಪ್ರಾಧ್ಯಾಪಕರೇ ಕಾರಣ. ರಜೆಲಿದ್ದ ವಿದ್ಯಾರ್ಥಿಗಳ ಸ್ಥಿತಿ ಏನಾಗಿರ್‌ದುತ ಅವೆಲ್ಲಾ ಗ್ಯಾನ ಮಾಡ್ದೊ. ಆದ್ದರ್‌ಂದ ಗುರುವೇ ಸಾಕ್ಷಾತ್ ಪರಬ್ರಹ್ಮತ ಹೇಳ್ದುಕೆ ಇದೊಂದ್ ಉದಾಹರಣೆ ಆಗುಟ್ಟು.

ಉದ್ಯೋಗ : ನಾನ್ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್‌ಲಿ ವಿದ್ಯಾಭ್ಯಾಸ ಮಾಡ್ದರ್‌ಂದ ಮತ್ತೆ ಮಡಿಕೇರಿನ ಗೌಡ ಬೋರ್ಡಿಂಗ್‌ಲಿ ಅಲ್ಪಸ್ವಲ್ಪ ನಾಯಕತ್ವ ವಹಿಸಿಕಂಡ್ ಓದಿಕಂಡ್ ಇದ್ದರ್‌ಂದ ಕೆಲ ಪ್ರಮುಖ ವ್ಯಕ್ತಿಗಳ್‌ಲಿ ಗುರುತಿಸಿಕಂಡದ್ದರ್‌ಂದ, ಪರಿಚಯ ಇದ್ದ ಪ್ರಮುಖರ್‌ಲಿ ಒಬ್ಬರಾದ ಶ್ರೀ ಕೆ. ಮಲ್ಲಪ್ಪ ವಕೀಲ ಮತ್ತೆ ಮಡಿಕೇರಿ ಮುನ್ಸಿಪಾಲಿನ ಅಧ್ಯಕ್ಷರಾಗಿದ್ದ ಅವು 1946ರ ಆಚೆ ಈಚೆ ನನ್ನನ ಮಡಿಕೇರಿ ಮುನ್ಸಿಪಾಲಿಟಿ ಆಫೀಸ್‌ಲಿ ಗುಮಾಸ್ತ ಹುದ್ದೆ ಖಾಲಿ ಉಟ್ಟು ಬಂದಿಯಾತ ಕೇಳ್ದೊ. ಆದರೆ ಆ ಹುದ್ದೆ ಸರಕಾರಿ ಸ್ವಾಮ್ಯದ ಹುದ್ದೆ ಅಲ್ಲದ ಕಾರಣ ನಾ ಸುಮ್ಮಂಗಾದೆ. ಸ್ವಲ್ಪ ಸಮಯದ ಮೇಲೆ ಯಾರೋ ವ್ಯವಸಾಯ ಇಲಾಖೆಲಿ ಗ್ರಾಮ ಸೇವಕ ಹುದ್ದೆ ಉಟ್ಟು. ಬಂದಿಯಾತ ಕೇಳ್ದೊ. ಆ ವಿಷಯನ ಮನೆಲಿ ಪೋಷಕರ್ನ ಕೇಳ್ದೆ. ಆಗ ಅವು ಗೊಬ್ಬರಗುಂಡಿ ತಯಾರ್ಸುದರ ತೋರ್ಸಿ ಕೊಡೊಕು. ಹಂಗಾಗಿ ಆಕೆಲ್ಸ ಬೇಡತ ಹೇಳ್ದೊ. ಮತ್ತೆ ಕೆಲದಿನ ಕಳ್ದ ಮೇಲೆ ಯಾರೊ ಅರಣ್ಯ ಇಲಾಖೆನ ಕುಶಾಲನಗರ ವಲಯಲಿ ಕೆಲ್ಸ ಖಾಲಿ ಉಟ್ಟುತ ಹೇಳ್ದೊ. ಆದರೆ ಅರಣ್ಯ ಇಲಾಖೆಲಿ ಸೇವೆ ಮಾಡಿಕೆ ಮನ್ಸಿಲ್ಲದ ಕಾರಣಂದ

ಅದರ್ನ ಕೈಬುಟ್ಟೆ. 1947ರ ಏಪ್ರಿಲ್‌ಲಿ ನನ್ನ ಚಿಕ್ಕಪ್ಪ ಅಪ್ಪಚ್ಚನವು ನಮ್ಮ ನೆರೆಮನೆ ಶ್ರೀ ಬಿದ್ದಂಡ ಯಸ್. ಕುಶಾಲಪ್ಪನವರ ಮಡಿಕೇರಿ ಮನೆಗೇ ಹೋಗಿ ನಂಗೆ ಅಧ್ಯಾಪಕ ಕೆಲ್ಸನ ಕೊಡೊಕುತ ಕೇಳಿಕಂಡೊ. ಆಗ ಕುಶಾಲಪ್ಪನವು ವಿದ್ಯಾ ಇಲಾಖೆಂಯು ಜಿಲ್ಲಾ ವಿದ್ಯಾಧಿಕಾರಿಯಾಗಿದ್ದೊ. (ಡಿ.ಇ.ಒ.) ಹಂಗಾಗಿ ನಾನ್ 1947ನೇ ಮೇ ತಿಂಗ 22ರಂದ್ ಬೇಸಿಗೆ ರಜೆ ಮುಗ್ದಂಗೆ ಮರಗೋಡು ಹಿರಿಯ ಪ್ರಾಥಮಿಕ ಶಾಲೆಗೆ ಅಧ್ಯಾಪಕ ಆಗಿ ನೇಮಕ ಆದೆ. ಅಂದ್ ಕೆಲ್ಸ ತಕಂಬಕೆ ಇಂದ್‌ನಂಗೆ ಲಂಚದ ಹಾವಳಿ ಇತ್ಲೆ. ಆದರೆ ಅಂದ್ ಕುಸಿಂದ ಗುರುಭಕ್ತಂದ ತಮ್ಮಲ್ಲಿದ್ದ ಒಳ್ಳ ತರದ ಆಹಾರ ಪದಾರ್ಥಗಳ್ನ ಕೊಡ್ದು ವಾಡಿಕೆ. ಹಂಗೆ ನಾವು ನನ್ನ ಮುಖ್ಯೋಪಾಧ್ಯಾಯರಾದ ಶ್ರೀ ಬಿ.ಎಸ್. ಕುಶಾಲಪ್ಪನವುಕೆ ಒಂದ್ ಕುಪ್ಪಿ ಜೇನ್ ಕೊಟ್ಟೊ. ಅವು ಅದರ ಕುಸೀಂದ ತಕಂಡೊ. ಸ್ವಾತಂತ್ರ್ಯ ಪೂರ್ವಲಿ ಕೊಡಗ್‌ನ ಇಸ್ಕೂಲ್‌ಗಳ್‌ಲಿ ಹೆಚ್ಚ್‌ನವು ಡಿಸ್ಟ್ರಿಕ್ ಬೋರ್ಡ್‌ನ ಅಧೀನದಲ್ಲಿದ್ದೊ. ಆಗೆಲ್ಲ ಅಧ್ಯಾಪಕರ್‌ಗೆ ತಿಂಗಕ್ಕೆ ರೂ.20=00 ಮಾತ್ರ. ನಾನ್ ಸುಮಾರ್ ಒಂದ್ ವರ್ಷಮುಟ್ಟ್ ಅಧ್ಯಾಪಕ ಕೆಲ್ಸಲಿದ್ದೆ. 1948ನೇ ಇಸವಿ ಅಕ್ಟೋಬರ್ ತಿಂಗಲಿ ಒಂದ್ ದಿನ ಶಕ್ತಿದಿನ ಪತ್ರಿಕೆಲಿ ಬೆರಳಚ್ಚ್ ಕಲ್ತವು ಮಡಿಕೇರಿನ ವಾರ್ಡನ್ ಇನ್ಸೂರೆನ್ಸ್ ಕಂಪೆನಿಯ ಶಾಖೆಗೆ ಗುಮಾಸ್ತ ಕೆಲ್ಸಕ್ಕೆ ಅರ್ಜಿ ಹಾಕಕ್‌ತ ಜಾಹೀರಾತ್ ಪ್ರಕಟ ಆಗಿತ್ತ್. ಅದರ್ನ ನೋಡ್ದನಾ ಅರ್ಜಿ ಹಾಕಿದೆ. ಸ್ಪರ್ಧಾತ್ಮಕ ಪರೀಕ್ಷೆಗೆ ಮಡಿಕೇರಿಗೆ ಹೋದೆ. ಸುಮಾರ್ 15–20 ಅಭ್ಯರ್ಥಿಗ ಹಾಜರಿದ್ದೊ. ನಾ ಆ ಪರೀಕ್ಷೆಲಿ ಸೂರೂನ ಸ್ಥಾನಲಿ ತೇರ್ಗಡೆ ಆದೆ. ನನ್ನನ ಗುಮಾಸ್ತ ಕೆಲ್ಸಕ್ಕೆ ಆಯ್ಕೆ ಮಾಡ್ದೊ. ಶ್ರೀ ಕೊಡೆಂದೇರ ಯಂ. ಬೋಪಯ್ಯನವು ಮಡಿಕೇರಿ ಶಾಖೆನ ವಾರ್ಡನ್ ಇನ್ಸೂರೆನ್ಸ್ ಕಂಪೆನಿನ ಮ್ಯಾನೇಜರ್ ಆಗಿಯೂ, ನಾ ಫಸ್ಟ್ ಅಸಿಸ್ಟೆಂಟ್ ಆಗಿಯೂ ನೇಮಕ ಆದೊ. ಅಧ್ಯಾಪಕ ಕೆಲ್ಸಕೆ ನಾ ರಾಜೀನಾಮೆ ಕೊಡದೆ ಈ ಕೆಲ್ಸಕ್ಕೆ ಸೇರಿಕಂಡೆ.

ಇಂದ್‌ನ ಮಡಿಕೇರಿ ಜನತಾ ಬಜಾರ್‌ನ ಕೆಳ ಹಂತಲಿ ಆಫೀಸ್ ಮಾಡಿಕಂಡ್ ಕೆಲ್ಸ ಸುರು ಮಾಡ್ದೊ. ಸಂಬಳನೂ ಅಂದ್‌ನ ಸಮಯಕ್ಕೆ ಲಾಯ್ಕ ಇತ್ತ್. ಮುಖ್ಯ ಕಚೇರಿ ಮುಂಬೈಲಿತ್ತ್. ಎಸ್.ಹೆಚ್. ಥಖರ್ ಎಂಬವು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದೊ. ನಾ ಬೆರಳಚ್ಚ್‌ಗಾರನಾಗಿಯೂ, ಜೀವವಿಮಾ ಎಲ್ಲಾ ಪಾಲಿಸಿಗಳ್ನ ಪರಿಶೀಲಿಸಿ ದಾಖಲ್ ಮಾಡ್ದು ಮತ್ತೆ ಮುಖ್ಯ ಕಚೇರಿಗೆ ಕಳ್ಸುದು ಹಿಂಗೆ ಜವಾಬ್ದಾರಿನ ಕೆಲ್ಸ ಮಾಡ್ತಿದ್ದೆ.

ಶ್ರೀ ಕೆ.ಯಂ. ಬೋಪಯ್ಯನವು ಹೊರವಲಯಲಿ ಏಜೆಂಟರ ನೇಮಕ, ವೈದ್ಯಕೀಯ ಪರೀಕ್ಷೆ ಮತ್ತೆ ವಿಮಾ ಪಾಲಿಸಿ ಭರ್ತಿ ಮಾಡಿನಂಗೆ ತಂದ್ ಕೊಡ್ತಿದ್ದೊ. ಸಾಮಾನ್ಯಾಗಿ ಮಾರ್ಚ್ ತಿಂಗಳ 31ಕ್ಕೆ ವರ್ಷದ ಕಡೇ ಲೆಕ್ಕನ ಆಕೀರಿ ಮಾಡ್ದು ಸಾಮಾನ್ಯ. ನಮ್ಮ ಮಡಿಕೇರಿ ಶಾಖೆನ ವಿಮಾ ವ್ಯವಹಾರ ಸಾಕಷ್ಟ್ ತೃಪ್ತಿ ಇಲ್ಲದ ಕಾರಣಂದ ಈ ಶಾಖೆ ಮುಚ್ಚಿಹೋತು. ಮ್ಯಾನೇಜರ್ ಕೆ.ಎಂ. ಬೋಪಯ್ಯನವರ್ನ ಕೊಯಂಬತ್ತೂರಿಗೂ, ನನ್ನನ ಬೆಂಗಳೂರು ಶಾಖೆಗೂ ವರ್ಗ ಮಾಡ್ದೊ. ಈ ನಡುವೆ ವೀರಾಜಪೇಟೆನ ಸದ್ರಿ ವಿಮಾ ಕಂಪೆನಿಯ ಕಿರಿಯ ಆಫೀಸ್‌ನ ಸಿಬ್ಬಂದಿ ವರ್ಗಕ್ಕೆ ಒಂದೆರ್ಡ್ ತಿಂಗಳ ತರಬೇತಿ ಕೊಟ್ಟ್ ಬೆಂಗಳೂರು ಆಫೀಸಿಗೆ ಹಾಜರಾಗುವಂತೆ ನಂಗೆ ಅಪ್ಪಣೆ ಕಾಗದಕೊಟ್ಟಿದ್ದೊ. ವೀರಾಜಪೇಟರನ ಕಿರಿಯ ಆಫೀಸ್‌ಲಿ ಮ್ಯಾನೇಜರ್ ಆಗಿ ಶ್ರೀ ನೆಲ್ಲಮಕ್ಕಡ ದಂತ ವೈದ್ಯ ಉತ್ತಪ್ಪನವು ಮತ್ತೆ ಅವರ ಸಹಾಯಕರಾಗಿ ಬೋಜಿತ್ತೇಳುವ ಮಹಿಳೆ ಕೆಲ್ಸ ಮಾಡ್ತಿದ್ದೊ. ಅವುಕೆ ನಾನ್ ಸುಮಾರ್ ಎರಡ್ ತಿಂಗ ತರಬೇತಿ ಕೊಟ್ಟ್ 1949ರ ಆಗಸ್ಟ್ ತಿಂಗಲಿ ಬೆಂಗಳೂರ್ ಶಾಖೆಗೆ ಹಾಜರಾದೆ. ಈ ಶಾಖೆ ಗಾಂಧೀನಗರದ ಪ್ರೌಢಶಾಲೆ ಹತ್ರ ಖಾಸಗಿ ಮಹಡಿಲಿತ್ತ್. ಶ್ರೀ ಅಜ್ಜಿನಿಕಂಡ ಯಸ್. ಐಯ್ಯಪ್ಪನವು ಮ್ಯಾನೇಜರ್ ಆಗಿಯೂ, ಶ್ರೀ ಎಸ್. ರಾಮರಾವ್‌ನವು ಆಫೀಸ್ ಸೂಪರಿಂಟೆಂಡೆಂಟ್ ಆಗಿಯೂ, ದೊರೆಸ್ವಾಮಿತ್ತೇಳ್ವ ಒಬ್ಬ

ಗುಮಾಸ್ತನೂ ಮತ್ತೆ ನಾಗರಾಜತ್ತೇಳ್ವ ತಮಿಳ್ ಹೈದ ಅಟೆಂಡರ್ ಆಗಿ ಕೆಲ್ಸ ಮಾಡ್ತಿದ್ದೊ. ನಾ ಬೆರಳಚ್ಚ್‌ಗಾರನಾಗಿಯೂ ಅಕೌಂಟೆಂಟ್ ಆಗಿಯೂ, ವಿಮಾ ಕಡತಗಳ ಪರಿವೀಕ್ಷಕನಾಗಿಯೂ ವಿಮಾ ಪಾಲಿಸಿದಾರರ ಜಾತಕನ ಪರಿಶೀಲಿಸಿ ಸುರೂನ ಕಂತ್‌ನ ವಿಮಾ ಹಣಕ್ಕೆ ದೃಢೀಕರಣ ಪತ್ರ ಕೊಡ್ತಿದ್ದೆ. (First Premium Receipt) ಬೆಂಗಳೂರ್‌ನ ಸೆಂಟ್ರಲ್ ಕಾಲೇಜ್‌ನ ಹತ್ರ ಇರುವ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯೊಟ್ಟಿಗೆ ಹಣಕಾಸ್‌ನ ವ್ಯವಹಾರ ನಡೆತಿತ್ತ್. ನಾ ಸುರೂಗೆ ಆಫೀಸ್‌ನ ಒಂದ್ ಕೋಂಬರೆಲಿ ವಾಸ ಇದ್ದೆ. ಬಳೆಪೇಟೆನ ಉಡುಪಿ ಹೋಟ್ಲ್‌ಲಿ ಊಟದ ವ್ಯವಸ್ಥೆನ ಮಾಡ್ಕಂಡಿದ್ದೆ. ಬಳೆಪೇಟೆನ ಶ್ರೀರಾಮ ಇನ್‌ಸ್ಟ್ಯೂಟ್ ಆಫ್ ಕಾಮರ್ಸ್‌ಲಿ ಕೆಲವು ಸಮಯದ ಶೀಘ್ರಲಿಪಿ (Short hand) ತರಬೇತಿ ಪಡ್ಕಂಡೆ. ನಾ ಮೊದುವೆ ಆಕೆ ಮುಂದೆ ನಂಗೆ ಒಬ್ಬ ಗುಪ್ತದಳದ ಪೊಲೀಸ್ ಶ್ರೀ ನಾಗಪ್ಪತ್ತೇಳವು ಒಳ್ಳೆ ಸಿನೇತ ಆಗಿತ್ತ್. ಅವರೊಟ್ಟಿಗೆ ಯಾಗೋಳು ಸಾಯಂಕಾಲ ಯಾವ್ದಾರ್ ನಾಟಕ ಕಂಪೆನಿಗಳಿಗೆ ಇಲ್ಲರೆ ಸಿನೇಮಾಕ್ಕೆ ಪುಕ್ಸಟೆ ಹೋಗಿ ಬಾತಿದ್ದೆ. ಪ್ರತಿ ಶನಿವಾರ ಅಪರಾಹ್ನ ಕುದುರೆ ಓಟ (Horse Race) ನೋಡಿಕೆ ಟಿಕೆಟ್ ಇಲ್ಲದೆ ಒಳಗೆ ಹೋಕೆ ಅವಕಾಶ ಮಾಡಿಕೊಟ್ಟಿದ್ದೊ. ವಾರಲಿ ಹೆಚ್ಚ್‌ನ ದಿನ 5.30 ಗಂಟೆ ಹೊತ್ತ್‌ಗೆ ಕಬ್ಬನ್ ಪಾರ್ಕ್‌ಲಿರುವ ಪುಟ್ಟಣ್ಣ ಶೆಟ್ಟಿ ಟೌನ್‌ಹಾಲ್‌ಗೆ ಹೋಗಿ ಲೈಬ್ರರಿಲಿ ಓದಿಕಂಡ್ ಬಾತಿದ್ದೆ. ಹಂಗೆ ಅಲ್ಲಿ ನಡೆತಿದ್ದ ಮನರಂಜನಾ ಕಾರ್ಯಕ್ರಮಗಳ್ನ ನೋಡಿ ಕುಸಿಪಡ್ತಿದ್ದೆ. ಸಮಯ ಹೋದೇ ಗೊತ್ತಾತಿತ್‌ಲೆ. ಒಂದಿನ ನನ್ನ ಕೋಂಬರೆ ಹತ್ರ ಇನ್ನೊಂದ್ ಕೋಂಬರೆಲಿದ್ದ ಬ್ರಾಂಚ್ ಮ್ಯಾನೇಜರ್ ಅವರ ಹೆಣ್ಣ್ ಒಬ್ಬಳೇ ಬಚ್ಚಲ್ ಮನೆಲಿ ಮೀಯಕೆ ಹೋಗಿ ನೀರ್ ಬಿಸಿ ಮಾಡುವ ಯಂತ್ರನ (Water heater)ಕೊಂಡಿನ ಬಂದ್ ಮಾಡದೆ ಹಂಡೆಯೊಳಗೆ ಕೈಹಾಕಿ ಸೊಯ ತಪ್ಪಿ ಬಿದ್ದಂಗಾಗಿ, ಬೊಬ್ಬೆನ ಕೇಳಿ

ನಾನ್ ಓಡಿ ಹೋಗಿ ಅವರ್ನ ಏಳ್ಸಿ ಕೋಂಬರೆಗೆ ಕರ್ಕಂಡ್ ಬಂದೆ. ಆ ಸಮೆಲಿ ಅವರ ಗಂಡ ಶ್ರೀ ಐಯ್ಯಪ್ಪನವು ಇತ್ತ್‌ಲೆ. ಈ ರೀತಿ ಒಂದ್ ಅಳಿಲು ಸೇವೆ ಮಾಡ್ದರ ಗ್ಯಾನ ಮಾಡಿಕಂಡನೆ. ಅಂದ್‌ನ ಕಾಲಲಿ ಕೊಡಗ್‌ನವು ಬೆಂಗಳೂರ್‌ಲಿ ವಾಸ ಮಾಡ್ತಿದ್ದದ್ ಭಾರೀಕಮ್ಮಿ. ಆ ಸಮೆಲಿ ಬೆಂಗಳೂರ್‌ಲಿ ಶ್ರೀಪಳಂಗಂಡ ಕರುಂಬಯ್ಯನವು ಬ್ರಿಗೇಡಿಯರ್ ರೋಡ್‌ಲಿ ಟ್ರಾಫಿಕಲ್ ಇನ್ಸೂರೆನ್ಸ್ ಕಂಪೆನಿಲಿ ಮ್ಯಾನೇಜರ್ ಆಗಿದ್ದೊ. ಶ್ರೀ ಕೆದಂಬಾಡಿ ಮಾದಪ್ಪನವು ಕೆ.ಎಸ್.ಆರ್.ಟಿ.ಸಿ ಸಂಸ್ಥೆಲಿ ಚೆಕ್ಕಿಂಗ್ ಇನ್ಸ್‌ಪೆಕ್ಟರ್ ಆಗಿದ್ದೊ. ಶ್ರೀ ಕೆದಂಬಾಡಿ ಮುದ್ದಪ್ಪನವು ವಕೀಲರಾಗಿ ಬಳೆಪೇಟೆ, ಚಿಕ್ಕಪೇಟೆ ಸರ್ಕಲ್‌ಲಿ ಆಫೀಸ್ ತೆರ್ದಿದ್ದೊ. ಕುಮಾರ ಪಾರ್ಕ್‌ಲಿ ವಾಸಮಾಡ್ತಿದ್ದೊ. ಶ್ರೀ ಚೆರಿಯಮನೆ (ಬೆಟ್ಟತ್ತೂರು) ಪೊನ್ನಪ್ಪ ದಂಪತಿಗ ಯಶವಂತಪುರಲಿ ಸೌದೆ ಡಿಪೊನ ನಡ್‌ಸ್‌ತಿದ್ದೊ, ಅಷ್ಟೇ ಅಲ್ಲ ಲಾರಿ ಮಾಲೀಕರೂ ಆಗಿದ್ದೊ. ಬೆಂಗಳೂರ್‌ನ ಹೆಬ್ಬಾಳಲಿ ಶ್ರೀ ಪಡಂಬೈಲು ಮುದ್ದಪ್ಪನವು ವ್ಯವಸಾಯ ಇಲಾಖೆನ ಮುಖ್ಯಾಧಿಕಾರಿಯಾಗಿದ್ದೊ. ಶ್ರೀ ಪಡಂಬೈಲು ವೆಂಕಟರಮಣಗೌಡರ್ ಶ್ರೀ ಕೆ.ಪಿ. ಮುದ್ದಪ್ಪನವು ವಕೀಲರ ಸಹಾಯಕರಾಗಿ ಸೇವೆ ಮಾಡ್ತಿದ್ದೊ.

ಈ ನಡುವೆ ಮೊದುವೆ ವಿಚಾರ ಆಗಾಗ ಕಾಗದದ ಮೂಲಕ ಶ್ರೀ ಪರಿಚನ ಅಣ್ಣಯ್ಯ ಮತ್ತೆ ನನ್ನ ನಡುವೆ ನಡೆತಿತ್ತ್. ಹಿಂದೆ ನಾ ಮಡಿಕೇರಿ ಆಫೀಸ್‌ಲಿ ಇರಕನೇ ಮರಗೋಡು ಗ್ರಾಮದ ಶ್ರೀ ಪರಿಚನ ಪೂವಯ್ಯನವರ ಮೂರನೇ ಮಗ್ಳು ಚಿ.ಸೌ. ಪೊನ್ನಮ್ಮನವರೊಟ್ಟಿಗೆ ಮೊದುವೆ ಆಗುವಂಗೆ ಅವರ ಅಣ್ಣ ಅಣ್ಣಯ್ಯನವು ನನ್ನೊಟ್ಟಿಗೆ ವ್ಯವಹಾರ ಮಾಡ್ತಿದ್ದೊ. ಆದರೆ ನಾನ್ ಯಾವ್ದಾರ್ ಒಂದ್ ಉದ್ಯೋಗಲಿ ಖಾಯಂ ಆಕುತ್ತೇಳ್ವ ಉದ್ದೇಶಂದ ಮುಂದೂಡಿಕಂಡೇ ಬಂದೆ. ನಾ ಬೆಂಗ್ಳೂರ್‌ಲಿ ಇರಕನ ಶ್ರೀಮತಿ ಪೊನ್ನಮ್ಮನವರ್‌ಂದಲೂ ಕುಟುಂಬದವು ಕಾಗದ ಬರ್ಸಿ ವ್ಯವಹರ್ಸುವಂಗೆ ಮಾಡ್ದೊ. ಆಗ ಅದ್ಕೆ

ತಕ್ಕಂಗೆ ಉತ್ತರಕೊಟ್ಟ್ ಸಮಜಾಯಿಸ್‌ತಿದ್ದೆ. 1950ನೇ ಇಸ್ವಿ ಶ್ರೀ ಪರಿಚನ ಪೂವಯ್ಯ ದೇವಮ್ಮ ದಂಪತಿಯರ 3ನೇ ಮಗ್ಳು ಚಿ.ಸೌ. ಪೊನ್ನಮ್ಮನವರೊಟ್ಟಿಗೆ ಮೊದುವೆ ಆತ್. ನಾನ್ ಮೊದುವೆ ಕಾರಣಂದ ಎರಡ್ ವಾರದ ರಜೆಲಿ ಊರಿಗೆ ಬಂದೆ.

ಈ ಮೊದುವೆಗೆ ಒಂದ್ ದೊಡ್ಡ ಗುಪ್ತ ಕಾರಣನೂ ಇತ್ತ್. ಅದೆಂತದ್‌ತ್ತೇಳ್ರೆ ನಾನ್ ಹಿಂದೆ ಪ್ರಾಥಮಿಕ ವಿದ್ಯಾಭ್ಯಾಸ ಮಾಡಿಕಂಡಿರಕನ 7ನೇ ತರಗತಿಲಿ ಒಮ್ಮೆ ಅನುತ್ತೀರ್ಣನಾಗಿದ್ದೆ. ಆಗ ನನ್ನ ಅಪ್ಪ ನಮ್ಮ ಅವ್ವನೊಟ್ಟಿಗೆ (ನನ್ನ ಅಜ್ಜಿ) ಈ ಹೈದ ಫೈಲ್ ಆಗುಟ್ಟು. ಇವನ್ನ ಸಂಬಂಧಿಕ ಕೇಟೋಳಿರ ಶ್ರೀ ಐಯ್ಯಪ್ಪನವರ ಹತ್ರ ಕೆಲ್ಸಕ್ಕೆ ಸೇರ್‌ಸುದಾ? ಐಯ್ಯಪ್ಪನವು ಭದ್ರಾವತಿಲಿ ಕೆಲ್ಸಲಿ ಒಳೊ. ಅದಿಲ್ಲದೆ ಮರಗೋಡು ಗ್ರಾಮಲಿ ಅನುಕೂಲಸ್ಥ ಕುಟುಂಬದ ಪರಿಚನ ಪೂವಯ್ಯನವುಕೆ 4–5 ಹೆಣ್ಣ್ ಮಕ್ಕ ಒಳೊ. ಅವ್ರೊಟ್ಟಿಗೆ ಹೆಣ್ಣ್ ಕೇಳಿ ಮೊದುವೆ ಮಾಡ್ಸುದಾ ? ಆದರೆ ಅವು ತುಂಬಾ ಅನುಕೂಲಸ್ಥರ್. ನಾವು ಬಡವು ಹೆಣ್ಣ್ ಕೊಡುವೊನಾ ? ಹಿಂಗೆ ಅಜ್ಜಿಯೊಟ್ಟಿಗೆ ಅಪ್ಪ ಮಾತಾಡುದರ ನಾನ್ ಮೂಲೆಲಿ ಕುದ್ದಂವ ಕೇಳ್ಸಿಕಂಡೆ. ಆ ವಿಚಾರ ನನ್ನ ಮನ್ಸ್‌ಲಿ ಗಟ್ಟಿಯಾಗಿ ಕುದ್ದತ್. ಅಂದ್‌ನ ಕಾಲಲಿ "ಕುಲನೋಡಿ ಹೆಣ್ಣ್ ಕೊಡು"ತ್ತೇಳುವ ಪದ್ಧತಿ ರೂಢಿಲಿತ್ತ್. ನನ್ನ ಮೊದುವೆಗೆ 1950ರ್‌ಲಿ ಕಾಲ ಕೂಡಿ ಬಾಕನ ನನ್ನ ಅಜ್ಜಿ, ನನ್ನ ಅವ್ವ ಮತ್ತೆ ನನ್ನ ಉಸ್ತುವಾರಿನ ನೋಡಿಕಂಡಿದ್ದ ನನ್ನ ಚಿಕ್ಕಪ್ಪ ಆಗಿದ್ದ ಅಪ್ಪಚ್ಚನವರ್‌ಲಿ ವಿಷಯ ಹೇಳ್ದೆ. ಕುಟುಂಬದವೆಲ್ಲ ಅವರ ಒಪ್ಪಿಗೆ ಕೊಟ್ಟೊ. ಆದರೆ ನನ್ನ ಚಿಕ್ಕಪ್ಪ ಮಾತ್ರ ಖಡಾಖಂಡಿತವಾಗಿ ವಿರೋಧಿಸಿದೊ. ಯಾಕೆತ್ತೇಳ್ರೆ ಪರಿಚನ ಕುಟುಂಬದವು ತುಂಬಾ ಅನುಕಸ್ಥರ್. ಆದ್ದರ್‌ಂದ ಅವರೊಟ್ಟಿಗೆ ಬಡವರಾದ ನಾವು ವ್ಯವಹರ್ಸುದು ಕಷ್ಟ ಆದೆತ ಅಡ್ಡಿ ಬಂದೊ. ಆದರೆ ಹಿಂದೆ ನನ್ನ ಅಪ್ಪ ಹೇಳ್ದ ಮಾತ್‌ನ ನೆರವೇರ್ಸಿಯೇ ನೆರವೇರ್‍ಸೊಕು ಇಲ್ಲರೆ ಅವರ ಆತ್ಮಕ್ಕೆ ಶಾಂತಿ ಸಿಕ್ಕುದುಲೆ. ಈ ಉದ್ದೇಶಂದ ಮತ್ತೆ

ನನ್ನ ಹಠಂದ ಚಿಕ್ಕಪ್ಪನ ಒಪ್ಪುಸಿ ಮೊದುವೆ ಆದೆ.

ನನ್ನ ರಜ ತೀರ್ದಂಗೆ ನಾನ್ ನನ್ನ ಸಂಸಾರನ ಬೆಂಗಳೂರ್‌ಗೆ ಕರ್ಕೊಂಡೋದೆ. ಬೆಂಗಳೂರ್‌ನ ಪ್ಯಾಲೇಶ್‌ಗುಟ್ಟು ಹಳ್ಳಿಲಿ ಸುರೂಲೇ ಬಾಡಿಗೆ ಮನೆ ಮಾಡಿದ್ದೆ. ಮನೆ ಮಾಲೀಕ ಒಕ್ಕಲಿಗ ಗೌಡರಾದ್ದರ್‌ಂದ ಹೊಂದಿಕಂಬದು ಸುಲಭ ಆತ್. ಸುಮಾರ್ ಎರಡ್ ವರ್ಷಗಳ ಮುಟ್ಟ ಸಂಸಾರದೊಟ್ಟಿಗೆ ಬೆಂಗಳೂರ್‌ಲಿದ್ದೆ. ಹೆಣ್ಣ್‌ಗೆ ಆಗಾಗ ತಲೆಬೇನೆ ಬಾತಿತ್ತ್. ಹಂಗಾಗಿ ಬೆಂಗಳೂರ್‌ನ ಮಿಂಟೋ ಆಸ್ಪತ್ರೆಲಿ ಕಣ್ಣ್‌ನ ಪರೀಕ್ಷೆ ಮಾಡ್ಸಿ ದೃಷ್ಟಿ ದೋಷ ಇದ್ದರ್‌ಂದ ಕನ್ನಡ ಹಾಕಂಗೆ ಆತ್. ಹೆಣ್ಣ್‌ನ 1952ರ್‌ಲಿ ಹೆರಿಗೆಗೆ ಊರ್‌ಗೆ ಕಳ್ಸಿದ ಮೇಲೆ ಪುನಃ ಬಳೆಪೇಟೆಯ ಉಡುಪಿ ಹೋಟಲ್‌ಲೇ ವಾಸ ಇದ್ದ್, ದೈನಂದಿನ ಕೆಲ್ಸ ಮುಂದುವರ್ಸಿದೆ. ಒಂದ್ ಸಾಯಂಕಾಲ ನಾನ್ ಮೆಜೆಸ್ಟಿಕ್ ಹತ್ರದ ಸುಬೆದಾರ್ ಛತ್ರದ ರಸ್ತೆನ ತಿರ್ಗಾಸ್‌ಲಿರುವ ಕ್ಯಾಂಟಿನ್‌ಲಿ ತಿಂಡಿ ತಿಂದ್‌ಕಂಡಿರಕನ ಶ್ರೀ ಕುರುಂಜಿ ವೆಂಕಟರಮಣಗೌಡರ್ ಸನ ಅದೇ ಕ್ಯಾಂಟೀನ್‌ಲಿ ಉಪಹಾರ ಮಾಡ್ತಿದ್ದೊ. ನನ್ನನ ನೋಡಿ ನೀವ್ ಕೊಡಗ್‌ನವ್ ಅಲ್ಲಾಂತ ಕೇಳ್ದೊ. ಹೌದುತ ಹೇಳ್ದೆ ನೀವ್ ಬೆಂಗಳೂರ್‌ಲಿ ಎಂತ ಮಾಡ್ತಾ ಒಳರಿತ ಕೇಳ್ದೊ. ನಾನ್ ಇಲ್ಲಿನ ವಾರ್ಡ್‌ನ ಇನ್ಸೂರೆನ್ಸ ಕಂಪೆನಿನ ಗಾಂಧಿನಗರದ ಆಫೀಸ್‌ಲಿ ಕೆಲ್ಸ ಮಾಡ್ತಾಒಳೆತ ಹೇಳ್ದೆ. ನೀವ್ ಯಾರ್ ? ಬೆಂಗಳೂರ್‌ಗೆ ಯಂತಕೆ ಬಂದದ್‌ತನಾ ಕೇಳ್ದೆ. ಆಗ ಅವು ನಾನ್ ದಕ್ಷಿಣ ಕನ್ನಡದ ಸುಳ್ಯ ಕುರುಂಜಿ ವೆಂಕಟರಮಣ ಗೌಡ. ವ್ಯಾಪಾರದ ಕಾರಣಂದ ಬೆಂಗಳೂರಿಗೆ ಬಂದೊಳೆತ ಅವು ಹೇಳ್ದೊ. ಇದ್ ನಡ್ದದ್ 1952ರ ಜನವರಿ ತಿಂಗಲಿ. 1952ರ ಮಾರ್ಚ್‌ಲಿ ನನ್ನ ಹಿರಿಯ ಪುತ್ರ ರಮೇಶ ಹುಟ್ಟಿತ್. ನಾನ್ ಬೆಂಗಳೂರ್‌ಲಿ ಕೆಲ್ಸ ಮಾಡುತ್ತಿರುದು ನನ್ನ ಕುಟುಂಬಕ್ಕೂ, ಸಂಬಂಧಿಕರ್‌ಗೂ ಕುಸಿ ಇಲ್ಲದಾತ್. ನನ್ನ ಚಿಕ್ಕಪ್ಪ ಅಪ್ಪಚನವರ್‌ಂದ ಆಸ್ತಿ ವಿಭಾಗ ಮಾಡಿ ಅವರವರ ಆಸ್ತಿನ

ಜವಾಬ್ದಾರಿಕನ ಅವ್ ಅವೇ ವಹಿಸಿಕಂಬಕುತ ಆಗಾಗ ಊರ್ಂದ ಕಾಗದ ಬಾತಿತ್. ನನ್ನ ಮನ್ಸ್‌ಗೂ ಬೇಜಾರ ಆಗುವಂಗಾತ್. ಒಂದಿನ ನಾ ನಮ್ಮ ಆಫೀಸ್ ಸೂಪರಿಂಟೆಂಡೆಂಡ್ ಆಗಿದ್ದ ಶ್ರೀ ರಾಜಾರಾವ್ ಅವರೊಟ್ಟಿಗೆ ಉತ್ತರ ಕೊಡಗ್‌ಲಿ ಫೀಲ್ಡ್ ಆಫೀಸರ್ ಹುದ್ದೆ ಖಾಲಿ ಉಟ್ಟು, ಆಹುದ್ದೆನ ನಂಗೆ ಕೊಡ್ಸಿಕೆ ನಾನ್ ಮಾರಣೆ ದಿನವೇ ಮದ್ರಾಸ್ ಆಫೀಸಿಗೆ ಮುಂಬೈಂದ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಯಸ್.ಹೆಚ್. ಥಖರ್ ಅವುರ್‍ನ ಭೇಟಿ ಮಾಡುವ ಕಾರ್ಯಕ್ರಮ ಉಟ್ಟು. ಹಂಗಾಗಿ ನೀನ್ ಅಲ್ಲಿಗೆ ಹೋಗಿ ಅವರ್‍ನ ಕಂಡ್ ಮಾತಾಡಿತ ನಂಗೆ ಸೂಚಿಸಿದೊ. ಹಂಗಾಗಿ ನಾನ್ ಅದೇ ಇರ್ಲ್ಲ ರೈಲ್‌ಲಿ ಮದ್ರಾಸ್‌ಗೆ ಪ್ರಯಾಣ ಮಾಡ್ದೆ. ಬೆಳಿಗ್ಗೆ 5.30ಕ್ಕೆ ಮದ್ರಾಸ್‌ಗೆ ಎತ್ತಿದೆ. ಬೆಳಿಗ್ಗೆ ಹೊತ್ತ್ ಸಮಯ ಇದ್ದರ್ಂದ 8.30ರ ಹೊತ್ತ್‌ಗೆ ಮದ್ರಾಸ್‌ನ ಮೆರಿನಾ ಬೀಚ್‌ನ ನೋಡಿಕೆ ಹೋದೆ. ಆ ಸಮೆಲಿ ಜಲಮಂಜರಿತ್ತೇಳುವ ಹೆಸ್ರ್‌ನ ಅಮೇರಿದ ಸರಕು ಸಾಗಣೆ ಹಡಗೊಂದ್ ಬಂದ್ ದಡ ಸೇರಿತ್. ನಾ ಹಡಗ್‌ನ ಒಳಗೆ ಹೊರಗೆಲ್ಲಾ ಸುತ್ತಾಡಿ ಎಲ್ಲಾ ನೋಡಿ ಕುಸಿಪಟ್ಟೆ. ಮತ್ತೆ 9.30ರ ಹೊತ್ತ್‌ಗೆ ಮದ್ರಾಸ್ ಆಫೀಸ್‌ಗೆ ಹೋಗಿ (ತಂಬುಚೆಟ್ಟಿ ಸ್ಟ್ರೀಟ್) ಡೈರೆಕ್ಟರ್ ಅವು ಬಾದರ್‍ನ ಕೇಳಕನ ಅವು ಅಪರಾಹ್ನ ಬಂದವೆತ ತಿಳ್ಕಂಡ ನಾನ್ ಗಿಂಡಿದಾರಿಗಾಗಿ ವಿದ್ಯುತ್ ಕೈಲ್‌ಲಿ ತಾಂಬ್ರಂತ ಸ್ಯಾನಿಟೋರಿಯಂ ಒಂದರ್‌ಲಿ ಕ್ಷಯರೋಗಕ್ಕೆ ಒಳಗಾಗಿ ದಾಖಲಾಗಿದ್ದ ಶ್ರೀ ಪೈಕೇರ ಅಪ್ಪಯ್ಯ (ನನ್ನ ಸಡ್ಡುಗ) ನವರ್‍ನ ಖುದ್ದಾಗಿ ನೋಡಿ ಕ್ಷೇಮನ ವಿಚಾರ್‍ಸಿಕಂಡ್ ಬಂದೆ. ಅಪರಾಹ್ನ 2.30ರ ಹೊತ್ತ್‌ಗೆ ಜೀವವಿಮಾ ಆಫೀಸ್‌ಗೆ ಹೋಗಿ ಡೈರೆಕ್ಟರ್ ಅವರ ಕುರ್ತ್ ವಿಚಾರ್‍ಸಕನ ಈಗಷ್ಟೇ ಬೆಂಗಳೂರ್ ಆಫೀಸ್‌ಗೆ ಹೊರ್‍ಟೊಳೊತ ಹೇಳ್ದೊ. ಕೂಡ್ಲೆ ರೈಲ್ ನಿಲ್ದಾಣಕ್ಕೆ ಬಂದ್ ಬೆಂಗಳೂರ್ ಕಡೆ ಹೋಗುವ ರೈಲ್‌ನ ನೋಡುವಷ್ಟರ್‌ಲಿ ಮಾತಾಡ್ಸಿದೆ. ಬಂದ ವಿಷಯನ ಹೇಳ್ದೆ. "ಕೂಡಲೆ ರೈಲ್ ಹತ್ತಿ ಬೆಂಗಳೂರ್‌ಲಿ ಮಾತಾಡ್ನೊ"ತ ಹೇಳ್ತ್. ಹಂಗೆ ಮಾರಣೆ

ದಿನ ಬೆಳಿಗ್ಗೆ 6 ಗಂಟೆ ಹೊತ್ತ್‌ಗೆ ಬೆಂಗಳೂರ್‌ಗೆ ಎತ್ತಿದೊ. ಸೀದಾ ಆಫೀಸ್‌ಗೆ ಬಂದೊ. ನಿಮ್ಮ ಸಮಸ್ಯೆ ಎಂತದ್‌ತ ಕೇಳ್ಡೊ. ನಾನನ್ನ ಅಹವಾಲ್‌ನ ವಿವರ್ಸಿದೆ. ಆಗ ಅವು "ಬೆಳ್ಯಪ್ಪನವೇ, ಕೊಡಗ್‌ಲಿ ಎಂತ ಉಟ್ಟುತ ಕೊಡಗ್‌ಗೆ ಹೋದರೆ ? ಬೆಂಗಳೂರು ಬೇಡತಾದರೆ ಬೊಂಬಾಯಿಗೆ ಈ ದಿನವೇ ನನ್ನೊಟ್ಟಿಗೆ ಹೋದೊಂದೇ ನನ್ನ ಗುರಿಯಾದ್ದರ್‌ಂದ, ಉತ್ತರ ಕೊಡಗ್‌ಗೆ ಬೇಕಾದ ಜೀವವಿಮಾ ಫೀಲ್ಡ್ ಆಫೀಸರ್ ಹುದ್ದೆಯ ಅಪ್ಪಣೆ ಕಾಗದದ ಕೂಡ್ಲೆ ನನ್ನಿಂದಲೇ ಟೈಪು ಮಾಡ್ಸಿ, ಸೈನ್ ಮಾಡಿ ಕೊಟ್ಟೊ. ನಾನ್ ಬೆಂಗಳೂರ್‌ಲಿ ಇರಕನ ವಿಮಾ ಕಂಪೆನಿಯವರ ಮೆಚ್ಚುಗೆ ಪಡ್ದಿದ್ದೆ. ಹಂಗಾಗಿ ನನ್ನನ ಬೊಂಬಾಯಿಗೆ ಕರೆಕೆ ಕಾರಣ ಆತ್. ಬೆಂಗಳೂರು ವಾಸ ಮನ್ಸ್‌ಗೆ ಬಹಳಷ್ಟ್ ಕುಸಿ ಕೊಟ್ಟಿತ್ತ್.

ನಾನ್ ಸುಮಾರ್ 1952ರ ಮೇ ಜೂನ್ ಆದ ಮೇಲೆ ಉತ್ತರ ಕೊಡಗ್‌ನ ವಾರ್ಡನ್ ಇನ್ಸೂರೆನ್ಸ್ ಕಂಪೆನಿನ ವಲಯಾಧಿಕಾರಿ ಆಗಿ ನೇಮಕ ಆದ ಮೇಲೆ ಶೈಕ್ಷಣಿಕ ವರ್ಷಲಿ ಸುಮಾರ್ 25–30 ಸಾವಿರ ದಷ್ಟ್ ವಿಮಾ ಪಾಲಿಸಿಗಳ ಪೂರ್ತಿ ಮಾಡ್ದೆ. ಅಂದ್‌ನ ಕಾಲಲಿ ಈ ಮೊತ್ತ ಗರಿಷ್ಟ ಮಟ್ಟದ್‌ತ ಹೇಳಿರೂ ತಪ್ಪಾಕಿಲೆ. ನನ್ನೊಟ್ಟಿಗೆ ಡಾ. ಅಜ್ಜಮಾಡ ಡಬ್ಲ್ಯು. ಕಾಳಯ್ಯನವು ಸರಿಯಾದ ಸಮಯಕ್ಕೆ ವಿಮೆದಾರರ ವೈದ್ಯಕೀಯ ಪರೀಕ್ಷೆಗಳ್ನ ಮಾಡಿಕೆ ಒಟ್ಟಿಗೆ ಇರ್ತಿದ್ದೊ. ಡಾ. ಕಾಳಯ್ಯನವೇ ನನ್ನನ ಈ ದಿನ ಯಾವ ಕಡೆ ಪೋಯಿತ ವಿಚಾರ್‌ಸ್‌ತಿದ್ದೊ. ಕೂಡ್ಲೆ ಅವು ಅವರ ಹಳೇ ಮೋಡಲ್‌ನ ಫೋರ್ಡ್ ಜೀಪ್‌ನ ಹತ್ತಿ ಇಬ್ಬರೂ ಪ್ರಯಾಣಿಸ್ತಿದ್ದೊ. ನನ್ನ ವಿಮಾ ಪ್ರಗತಿನ ಮಂಗಳೂರ್‌ನ ಜಯಭಾರತ ಇನ್ಸೂರೆನ್ಸ್ ಕಂಪೆನಿನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ಶ್ರೀ ಸುಂದರರಾವ್ ಶೆಟ್ಟಿಯವು ನೋಡಿ ನನ್ನನ ಮಡಿಕೇರಿನ ನಾರ್ತ್ ಕೂರ್ಗ್ ಕ್ಲಬ್‌ಲಿ ಭೇಟಿಯಾಕೆ ಕಾಗದದ ಮೂಲಕ ತಿಳ್ಸಿದ ಪ್ರಕಾರ, ಗೊತ್ತ್ ಮಾಡ್ದ ದಿನ ಸಾಯಂಕಾಲ

ಹೊತ್ತ್‌ಲಿ ಶ್ರೀಯುತರ್ನ ಭೇಟಿಯಾದೆ. ಆಗ ಅವು ತಮ್ಮ ಕಂಪೆನಿಗೆ ಸೇರಿಕಂಬಕೆ ಒತ್ತಾಯ ಮಾಡ್ದೊ. ನಾನ್ ಕಡೆಗೆ ಅವರ ಒತ್ತಾಯಕೆ ಇದ್ದಕಿದ್ದಂಗೆ ಅವರ ಕಂಪೆನಿಗೆ ಸೇರ್ದೆ. 1953ರ್‌ಲಿ ಕೊಡಗ್‌ಲಿ ಕ್ಷಾಮ ಆದ್ದರ್‌ಂದ ವಿಮಾ ಪಾಲಿಸಿ ತಕಂಬಕೆ ಜನ ಹಿಂಜರಿತಿದ್ದೊ. ನಾ ಊರೂರ್‌ಸುತ್ತಿ ಬಾತಿದ್ದೆ. ನಂಗೂ ಬೇಜಾರಾತಿತ್ತ್.

ಈ ನಡುವೆ ನಾನ್ ನನ್ನ ದೈನಂದಿನ ಚಟುವಟಿಕೆ ಪ್ರಕಾರ ಮಡಿಕೇರಿಗೆ ಹೋಗ್ತಿದ್ದೆ. ಆಗ ಒಂದಿನ ಮಡಿಕೇರಿ ಚೌಕಿಲಿ ಶ್ರೀ ಕುರುಂಜಿ ವೆಂಕಟರಮಣ ಗೌಡರ್ ಮಾತಾಡಿಕಂಡೊ. ಕ್ಷೇಮಲಾಭನೆಲ್ಲಾ ಮಾತಾಡ್ದ ಮೇಲೆ ನಾನ್ ಅವರ್ನ ನಮ್ಮನೆಗೆ ಬನ್ನಿತ ಕರ್ದೆ. ಆಗ ಅವರ ಆರೋಗ್ಯ ಅಷ್ಟೇನೂ ಲಾಯ್ಕ ಇಲ್ಲದ ಕಾರಣಂದ ಊಟಲಿ ವ್ಯತ್ಯಾಸ ಆದೆ, ಹಂಗಾಗಿ ಇಂದ್ ನಿಮ್ಮಲ್ಲಿಗೆ ಬಾದುಲೆತ ಹೇಳ್ದೊ. ಆಗ ನಾನ್ ನೀವಿಗೆ ಪಥ್ಯದ ಊಟನೇ ಮಾಡುವಂಗೆ ವ್ಯವಸ್ಥೆ ಮಾಡಿನೆತ ಹೇಳ್ದೆ. ಆಗ ಅವು ಆತ್ ಬನ್ನಿತ ನನ್ನೊಟ್ಟಿಗೆ ಬಂದೊ. ಪಥ್ಯದ ಊಟವೇ ಅವುಕೆ ವ್ಯವಸ್ಥೆ ಮಾಡ್ದೆ. ಮಾರ್ನೆ ಬೆಳಿಗ್ಗೆ 8.30ರ ಹೊತ್ತ್‌ಲಿ ಅವು ಸುಳ್ಯಕ್ಕೆ ಹೊರ್‍ಟೊ. ಆಗ ನಾನ್ ಅವುಕೆ ಹೇಳ್ದೆ, ನೀವ್ ತಿಳ್ಕಂಡಂಗೆ ನಿಮಿಗೆ ಅಂತಾ ದೊಡ್ಡ ಅನಾರೋಗ್ಯ ಏನೂ ಅಲ್ಲ. ನೀವ್ ಒಂದ್ ರೀತಿಲಿ ಹೆದ್ರಿಕಂಡೊಳರಿತ ನಾನ್ ಭಾವಿಸಿಯೊಳೆ. ನೀವು ಯಾರೊಡನೆ ಸಂಬಂಧ ಬೆಳ್ಸುದುತ ಪ್ರಶ್ನೆ ಹಾಕಿದೊ. ಆಗ ನಾನ್ ನನ್ನ ಹೆಣ್ಣ್‌ನ ತಂಗೆ ಜಾನಕಿತ ಉಟ್ಟುತ ಹೇಳ್ದೆ. ಈಗ ಅವ್ಳು ಎಂತ ಮಾಡ್ತಾ ಉಟ್ಟುತ ಕೇಳ್ದೊ. ಅವ್ಳು ಮಡಿಕೇರಿ ಸೆಂಟ್ರಲ್ ಹೈಸ್ಕೂಲ್‌ಲಿ ಎಸ್.ಎಸ್.ಎಲ್.ಸಿಓದುತ್ತಾ ಉಟ್ಟುತ ಹೇಳ್ದೆ. ನಾನ್ ಯಾಗಾರ್ ಮೊದುವೆ ಆದುತಾದರೆ ನಿಮಿಗೆ ಹೇಳಿಯೇ ಮೊದುವೆ ಆನೆ, ಈಗ ನನ್ನ ಆರೋಗ್ಯ ಅಷ್ಟಾಗಿ ಸೆರಿ ಇಲ್ಲದ್ದರ್‌ಂದ ಒಂದೆರ್ಡ್ ವರ್ಷ ಮೊದುವೆ ಆದುಲೆತ ಹೇಳ್ದೊ. ಇಷ್ಟೆಲ್ಲ ಆದ ಮೇಲೆ 1954ರ ಹೊತ್ತ್‌ಲಿ ಸುಳ್ಯ ಮತ್ತೆ ಅಡೂರ್‌ಂದ

ಕೊಡಗಿಗೆ ಬಾತಿದ್ದ ಕೆಲ್ಸದವರ ಮೂಲಕ ಕಾಗದ ಕೊಟ್ಟ್ ನೀವು ಹಿಂದೆ ಹೇಳ್ದ ಆ ಗೂಡೆನ ಮೊದುವೆ ಆನೆತ ನಂಗೆ ತಿಳ್ಸಿದೊ. ಅದೇ ಆರ್ಥಿಕ ವರ್ಷ ಮೇ ತಿಂಗದ 22–23ರಂದ್ ಕೊಡಗ್‌ನ ಮರಗೋಡು ಗ್ರಾಮದ ಪರಿಚನ ಪೂವಯ್ಯ ದೇವಮ್ಮ ದಂಪತಿಯ ನಾಕನೇ ಮಗ್ಳು ಚಿ.ಸೌ. ಜಾನಕಿಯವರ್ನ ಮೊದುವೆ ಆದೊ. ಅದೇ ದಿನ ಕೊಡಗ್‌ಲಿ ಮಳೆ ಸುರಾಗಿತ್ತ್. ಮಳೆ ನಡುವೆನೆ ಶುಭಕಾರ್ಯ ನಡ್ತ್. ಮಳೆ ದಂಪತಿಗಳಿಗೆ ಆಶೀರ್ವಾದ ಮಾಡ್ತ್. ಇದ್ ನನ್ನ ಉದ್ಯೋಗದ ನಡುನ ಕಾಲಲಿ ನಡ್ದ ಶುಭ ಮೂಹೂರ್ತಕ್ಕೆ ಶುಭ.

ನನ್ನ ವಿಮಾ ಚಟುವಟಿಕೆಗೆ ಕಮ್ಮಿ ಆಗ್ತಾ ಇದ್ದ ಸಮಯಲಿ 1953ರ ಮೇ ತಿಂಗಲಿ ಸ್ಟಾಫ್ ಸೆಲೆಕ್ಷನ್ ಬೋರ್ಡ್ ಪ್ರಪ್ರಥಮ ಆಗಿ ಸುರುಆತ್. ನಾನ್ ನೆಟ್ಟಂಗೆ ಉದ್ಯೋಗ ವಿನಿಮಯ ಕೇಂದ್ರ ಮಡಿಕೇರಿ ಶಾಖೆಲಿ ಹೆಸ್ರ್ ನೋಂದಾಯಿಸಿ ಸೆಲೆಕ್ಷನ್ ಬೋರ್ಡ್‌ಗೆ ಅಧ್ಯಾಪಕರ ಆಯ್ಕೆಯ ಸಂದರ್ಶನಕ್ಕೆ ಹಾಜರಾದೆ. ಸಂದರ್ಶನದ ಮುಖ್ಯ ಸಚೇತಕರಾದ ಶ್ರೀ ಆರ್.ಗಣೇಶರಾವ್, ಜಿಲ್ಲಾ ವಿದ್ಯಾಧಿಕಾರಿಯವ್ ನನ್ನನ ನೋಡ್ದ ಕೂಡ್ಲೆ ನೀವ್ ಹಿಂದೆ ಇದ್ದ ಕೆಲ್ಸನ ಎಂತಕೆ ಬುಟ್ಟದ್‌ತ ಕೇಳ್ದೊ. ನಾನ್ ಹಿಂಗಿಂಗೆತ ಹೇಳ್ದೆ. ಆಗ ಅವ್ ಈಗ ನಿಮ್ಮ ವಯಸ್ಸ್ ಎಷ್ಟ್‌ತ ಕೇಳ್ದೊ. ಆಗ ನಂಗೆ 27–28 ವರ್ಷ ವಯಸ್ಸಾಗಿತ್ತ್. ಆಗ ಅವ್ ನಿಮಿಗೆ ಪ್ರಾಯ ಹೆಚ್ಚಾತ್ 25 ವರ್ಷದ ಮೇಲ್ಪಟ್ಟವು ಸರಕಾರಿ ಕೆಲ್ಸಕೆ ಅನರ್ಹ. ಆದ್ದರ್‌ಂದ ಕೂಡಲೆ ಸರಕಾರದ ಮುಖ್ಯ ಕಾರ್ಯದರ್ಶಿಯವುಕೆ ಅರ್ಜಿ ಕೊಡಿ. ಪ್ರಾಯ ಕಮ್ಮಿ (Exempt) ಮಾಡ್ಸಿಕಣಿತ ಸಲಹೆ ಕೊಟ್ಟೊ. ಹಂಗೆ ನಾನ್ ಕೂಡಲೆ ಅಂದ್‌ನ ಕೊಡಗ್ ಸರಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದ ಶ್ರೀ ಐಚೆಟ್ಟಿರ ಸಿ. ಸುಬ್ಬಯ್ಯನವುಕೆ ನನ್ನ ಪ್ರಾಯಕಮ್ಮಿ ಮಾಡುವ ಮನವಿ ಕಾಗದ ಕೊಟ್ಟೆ. ಬರೀ ಎರಡ್ ವಾರಗಳ ಒಳಗೆ ಪ್ರಾಯ ಕಮ್ಮಿ ಮಾಡ್ದ ಹುಕುಂ ಕಾಗದ ಸರಕಾರಂದ ಡಿ.ಇ.ಓ. ಆಫೀಸ್‌ಗೆ ಬಾತ್. ಒಂದಿನ

ನಾನ್ ಜಿಲ್ಲಾ ವಿದ್ಯಾಸಂಸ್ಥೆಯು ಆಫೀಸ್ ಮುಂದೆ ದಾಟಿ ಹೋಕಂಡಿರಕನ ವಿದ್ಯಾಧಿಕಾರಿಯವೇ ನನ್ನ ನೋಡಿ ನಿಮ್ಮ ಪ್ರಾಯ ಕಮ್ಮಿ ಆದ ಹುಕುಂ ಆಫೀಸ್‌ಗೆ ಬಂದುಟ್ಟು. ದಕ್ಷಿಣ ಕೊಡಗ್‌ನ ಕುಟ್ಟ ಹಿರಿಯ ಪ್ರಾಥಮಿಕ ಇಸ್ಕೂಲ್‌ಲಿ ಒಂದು ಹುದ್ದೆ ಖಾಲಿ ಉಟ್ಟು. ನೀ ಅಲ್ಲಿಗೆ ಹೋದಿಯಾತ ನನ್ನನ ಕೇಳ್ದೊ. ನಾನ್ ಹೋನೆತ ಹೇಳ್ದೆ. ಅದೇ ದಿನ ಅಧ್ಯಾಪಕ ಕೆಲ್ಸದ ಆದೇಶದ ಕಾಗದಕ್ಕೆ ಸೈನ್ ಮಾಡಿ ಕೈಗೆ ಕೊಟ್ಟೊ. ನಾನ್ 19–8–1954ನೇ ಆಯ್ತವಾರ ಅಪರಾಹ್ನ ಕುಟ್ಟಕ್ಕೆ ಹೋದೆ. ಜಗದೀಶ್ವರ ಬಸ್ಸ್ ಸಿಬ್ಬಂದಿಗಳೊಟ್ಟಿಗೆ ಕುಟ್ಟದ ಹೊಟೇಲ್‌ಲಿ ಉಳ್ದೆ. 20–8–1954ನೇ ಸೋಮವಾರ 9.30ಕ್ಕೆ ಇಸ್ಕೂಲ್‌ಗೆ ಹಾಜರಾಗಿ ಮುಖ್ಯೋಪಾಧ್ಯಾಯರಾದ ಶ್ರೀ ಪಾಲೆಕಂಡ ಐಯ್ಯಣ್ಣನವುಕೆ ನನ್ನ ನೇಮಕಾತಿ ಆದೇಶ ಕಾಗದನ ಕೊಟ್ಟ್ ಕರ್ತವ್ಯಕ್ಕೆ ಹಾಜರಾದೆ. ವಿದ್ಯಾರ್ಥಿಗಳ ಹಾಜರಾತಿ ತೆಗ್ದ ಮೇಲೆ ಒಂದ್ ಪೀರಿಯಡ್ ಆದ ಮೇಲೆ ಅಧ್ಯಾಪಕ ವೃಂದ ಮತ್ತೆ ಮಕ್ಕಳೊಟ್ಟಿಗೆ 19–8–54ರ ಆಯ್ತವಾರ ಶಾಲಾಭಿವೃದ್ಧಿ ಸಮಿತಿನ ಅಧ್ಯಕ್ಷರಾದ ಶ್ರೀ ಚೆಕ್ಕೇರ ಬಿ. ಮುತ್ತಣ್ಣನವರ ಧರ್ಮಪತ್ನಿ ಮುತ್ತಮ್ಮನವು ಅಕಾಲ ಮರಣ ಹೊಂದಿದೊ. ಸದ್ರಿ ಅಧ್ಯಕ್ಷರ ಮನೆಗೆ ಹೋಗಿ ಸಾಂತ್ವನ ಹೇಳ್ದೊ. ಆಗ ಶ್ರೀಯುತರ್ ಈಗ ಹೊಸದಾಗಿ ಬಂದಿರುವ ಅಧ್ಯಾಪಕ ಈ ದಿನವೇ ನನ್ನ ಮನೆಗೆ ಉಳ್ಕಂಬಕೆ ಬರೊಕುತ ಕೇಳಿಕಂಡೊ. ನಾನ್ ನನ್ನ ಕರ್ತವ್ಯ ಆದ ಮೇಲೆ ಅವರ ಸೇವಕನೊಟ್ಟಿಗೆ ಅಲ್ಲಿಗೆ ಹೋದೆ. ನನ್ನನ ಅವು ಖಾಯಂ ಆಗಿ ಅವರ ಮನೆಲೇ ಉಳ್ಳಂಬಕೆ ವಿನಂತಿ ಮಾಡಿಕಂಡೊ. ಶ್ರೀಯುತ ಮುತ್ತಣ್ಣನವುಕೆ 7–8 ವರ್ಷದ ಸೀತಮ್ಮತ್ತೇಳುವ ಮಗ್ಳು, ಸುಮಾರ್ 6 ವರ್ಷದ ದೇವಯ್ಯ (ಧರ್ಮಜ)ತ್ತೇಳುವ ಮಂಜ, 4 ವರ್ಷದ ಬೋಸ್ ತ್ತೇಳುವ ಇನ್ನೊಬ್ಬ ಮಂಜ, ಚಂದ್ರಮತಿತ್ತೇಳುವ ಇನ್ನೊಂದ್ ಹೆಣ್ಣ್ ಕೂಸು ಇತ್ತ್. ನಾನ್ ಮಕ್ಕಳಿಗೆ ಮನೆ ಪಾಠ ಹೇಳಿಕೊಟ್ಟ್‌ಕಂಡ್ ನನ್ನೊಟ್ಟಿಗೆ ಆ

ಮಕ್ಕಳ ಇಸ್ಕೂಲ್‌ಗೆ ಕರ್ಕಂಡ್ ಹೋತಿದ್ದೆ. ಮಕ್ಕ ನನ್ನೊಟ್ಟಿಗೆ ಲಾಯ್ಕ ಹೊಂದಿಕಂಡೊ. ನಾನ್ ನನ್ನ ಸ್ವಂತ ಮಕ್ಕಳಂಗೆ ನೋಡಿಕಂಬತಿದ್ದೆ. ಶ್ರೀ ಸಿ.ಬಿ. ಮುತ್ತಣ್ಣನವು ವೀರಾಜಪೇಟೆ ತಾಲೂಕು ಬೋರ್ಡ್‌ನ ಅಧ್ಯಕ್ಷರಾಗಿ ಮೈಸೂರ್‌ನ ಕಾಫಿ ಪ್ರೊಸೆಸಿಂಗ್ ಕಂಪೆನಿನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿಯೂ ಸೇವೆ ಸಲ್ಲ್‌ಸ್ತಿದ್ದೊ. ತಮ್ಮ ಹೆಚ್ಚ್‌ನ ಸಮಯ ಸಾರ್ವಜನಿಕ ಸೇವೆಗಾಗಿಯೇ ಮೀಸಲಾಗಿತ್. ಆದ್ದ್‌ರ್‌ಂದ ಅವರ ಮನೆನ ಎಲ್ಲಾ ವಿಚಾರಗಳ ಕಡೆಗೆ ನಿಗವಹಿಸ್ತಿದ್ದೆ. ಮಕ್ಕಳಿಗೆ ನಾನೇ ಅಪ್ಪ ಅವ್ವನಂಗಾದೆ. ಮನೆ ಕೆಲ್ಸಕ್ಕೆ ಬೋಜಕ್ಕಿತ್ತೇಳುವ ಗೂಡೆ ಮನೆ ಒಳಗಿನ ಮತ್ತೆ ಅಡುಗೆ ಕೆಲ್ಸ ಮಾಡ್ತಿತ್. ನಾನ್ ಉಳ್ಕಂಬಕೆ ಒಂದ್ ಪ್ರತ್ಯೇಕ ಕೋಂಬರೆ ಇತ್. ಅದ್ ಮಾಸ್ಟರ್ ರೂಂತೇ ಹೆಸ್ರಾತ್. ಶ್ರೀ ಮುತ್ತಣ್ಣನವು ಇಲ್ಲದಿರಕನ ಒಂದೊಂದ್ ಸತಿ ಮುಖ್ಯೋಪಾಧ್ಯಾಯರ್ ನನ್ನೊಟ್ಟಿಗೆ ಬಂದ್ ಉಳ್ಕಂಬತ್ತಿದ್ದೊ. ನಮ್ಮ ನಡುಲಿ ಪ್ರೀತಿ ವಿಶ್ವಾಸ ಹಂಗಿತ್. ನನ್ನ ಸ್ವಂತ ಇಷ್ಟಂದ ಇಸ್ಕೂಲ್ ವಠಾರನ ದುರಸ್ಥಿ ಮಾಡಿ, ಕಾಫಿ ತೋಟ ಮಾಡಿಕೆ ಮುಖ್ಯೋಪಾಧ್ಯಾಯರಿಗೆ ಸಲಹೆ ಕೊಟ್ಟೆ. ಅಧ್ಯಾಪಕರ ಮತ್ತೆ ಶಾಲಾಭಿವೃದ್ಧಿಯವರ ಸಹಾಯಂದ ಸುಮಾರ್ 0.75 ಎಕರೆಯಷ್ಟ್ ಇಸ್ಕೂಲ್ ಜಾಗಲಿ ಕಾಫಿತೋಟ ಮಾಡ್ಸಿದೆ. ಶಾಲಾಭಿವೃದ್ಧಿ ಸಮಿತಿನ ಅಧ್ಯಕ್ಷ ಶ್ರೀ ಮುತ್ತಣ್ಣನವೇ ಅಲ್ಲಿನ ಹೂವಿನ ಕಾಡು ಗಿಡಗಳ ಒದಗಿಸಿ ಕೊಟ್ಟೊ. ಇದರ್‌ಂದ ನಾಕ್ ಗೋಡೆಗಳ ಒಳಗಿನ ಪಾಠ ಪ್ರವಚನಂದ ಬೇಜಾರಾಗಿದ್ದ ಮಕ್ಕಳಿಗೆ ಒಂದ್ ಗಂಟೆ ಕಾಲ ಹೊರಗೆ ಬಂದ್ ಕೃಷಿ ಚಟುವಟಿಕೆಗಳ್‌ಲಿ ಸೇರ್ದರ್‌ಂದ ಮನಸ್‌ಗೆ ಕುಸಿ ಆತಿತ್. ಅಷ್ಟೇ ಅಲ್ಲ ಕೃಷಿ ಬಗ್ಗೆ ಮಾಹಿತಿ ತಿಳ್ಕಂಬತಿದ್ದೊ. ಇಸ್ಕೂಲ್ ಆವರಣ ಪೊರ್ಲಾಗಿ ಕಾಂಬತಿತ್. ಶಾಲಾ ಕೃಷಿ ನಿಧಿಗೆ ದುಡ್ಡೊ ಬಂದದೆ ಪರಿಸರನೂ ಶುದ್ದ ಆದೆ. ನನ್ನ ಕೈಂದೇ ನಟ್ಟ ಎರಡ್ ತೆಂಗ್‌ನ ಗಿಡಗ ಇಸ್ಕೂಲ್ ಗೇಟ್ ಹತ್ರ ದೊಡ್ಡದಾಗಿ ಬೆಳ್ದ್ ನಿತ್ತೊಳೊ. ಇಸ್ಕೂಲ್ ಮಕ್ಕ ಮತ್ತೆ ಅಲ್ಲಿನ ಸ್ಥಳೀಯರ್ ನನ್ನನ

ತುಂಬಾ ಕೊಂಡಾಡ್ತಿದ್ದೊ. 1956ರ್‌ಲಿ ಕುಟ್ಟ ಗ್ರೂಪ್ ಆಫ್ ಹಾಸ್ಪಿಟಲ್ ಹೆಸ್ರ್‌ನ ಆಸ್ಪತ್ರೆ ಒಂದ್ ಕುಟ್ಟಲಿ ನಿರ್ಮಾಣ ಆತ್. ಅದರ ಉದ್ಘಾಟನೆನ ಭಾರತದ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವು ಮಾಡ್ದೊ. ಆ ಸಂದರ್ಭಲಿ ನಂಗೆ ಬೆರಳಚ್ಚ್ ಗೊತ್ತಿದ್ದರ್‌ಂದ ಇಂಗ್ಲೀಷ್‌ಲಿ ಮೆಮೋರೆಂಡಂನ (ಮನವಿ ಪತ್ರ) ತಯಾರಿಸಿ ಕೊಡಿಕೆ ಸಿ.ಬಿ. ಮುತ್ತಣ್ಣನವು ಕೇಳಿಕಂಡೊ. ನಾನ್ ಮನವಿ ಪತ್ರನ ತಯಾರ್ಸಿಕೊಟ್ಟೆ. ಅದೇ ದಿನ ಅಪರಾಹ್ನ ಕಾವೇರಿ ಹೊಳೆಗೆ ಕಟ್ಟಿದ್ದ ಬೇತರಿ ಸೇತುವೆನ ಶ್ರೀಯುತರ್ ಉದ್ಘಾಟಿಸಿದೊ. ನಾನ್ ಸುಮಾರ್ 2 ವರ್ಷ 10ತಿಂಗ ಮುಟ್ಟ ಕುಟ್ಟ ಹಿರಿಯ ಪ್ರಾಥಮಿಕ ಇಸ್ಕೂಲ್‌ಲಿ ಸೇವೆ ಮಾಡ್ದೆ. ನಾನ್ ಆಟಲಿ ಸನ ತುಂಬ ಆಸಕ್ತಿವಹಿಸಿದ್ದೆ. ನಾ ಕುಟ್ಟಲಿಕನ ನಂದೇ ಆದ ಉಪಾಧ್ಯಾಯಕ ಗುಂಪುನ ಕಟ್ಟಿಕಂಡ್ ಬ್ಯಾಡ್‌ಮೆಂಟನ್ ಆಟ ಆಡಿಕೆ ಬೇರೆ ಇಸ್ಕೂಲ್‌ಗಳಿಗೆ ಹೋತಿದ್ದೊ. 1956ರ ಜುಲೈಲಿ ಮಡಿಕೇರಿ ತಾಲೂಕ್‌ನ ಬೆಟ್ಟಗೇರಿ ಇಸ್ಕೂಲ್‌ಗೆ ವರ್ಗಾವಣೆ ಕಾಗದ ಬಾತ್. ಆಗ ಮುತ್ತಣ್ಣನವು ನನ್ನ ವರ್ಗಾವಣೆನ ರದ್ದ್ ಮಾಡಿನೆ. ನೀವ್ ಇಲ್ಲೇ ಇರೊಕು, ಮತ್ತೆ 10 ಎಕರೆಯಷ್ಟ್ ಜಾಗನ ಮಂಜೂರ್ ಮಾಡ್ಸಿಕೊಟ್ಟನೆತ ಭಾರೀ ನನ್ನ ಬೇಡಿಕಂಡೊ. ಆದರೆ ನನ್ನ ಸಂಸಾರ ಎಲ್ಲವೂ ಮಡಿಕೇರಿ ತಾಲೂಕ್‌ನ ಬಲಮುರಿಲಿ ಇರ್ದರ್‌ಂದ ಅವರ ಮಾತ್‌ಗೆ ಒಪ್ಪಿಕಂಬಕೆ ಸಾಧ್ಯ ಆತ್‌ಲೆ. ಕಡೆಗೆ ಸಿ.ಬಿ. ಮುತ್ತಣ್ಣನವು ಬೇಸರತ್ತಾಗಿ ನನ್ನನ್ನ ಬೀಳ್ಕೊಟ್ಟೊ. ಶ್ರೀಯುತ ಮುತ್ತಣ್ಣನವು ಕಣ್ಣೀರ್ ಪೂಜಿಕಂಡೂ. ನಂಗೂ ಮಕ್ಕಳ್ನ ಮತ್ತೆ ಶ್ರೀಯುತರ ಆತ್ಮ ವಿಶ್ವಾಸ ಪ್ರೀತಿ ಸಂಬಂಧನ ಕಳ್ಕಂಡಕ್ಕೆ ತುಂಬ ಬೇಜರಾತ್.

ಈ ನಡುಲಿ ಒಂದಿನ ಶ್ರೀಯುತ ಮುತ್ತಣ್ಣನವು ಮನೆಲಿತ್ತ್‌ಲೆ ಆಗ ಒಂದ್ ಘಟನೆ ನಡ್ತ್. ಇರ್‌ಳ್ ಸುಮಾರ್ 10.30ರ ಹೊತ್ತ್‌ಲಿ ಎರಡ್ ನಾಯಿಗ ಜೋರ್ ಬೋರೇ ಬೊಗಳ್‌ತಾ ಇದ್ದೊ. ಮನೆ ಸುತ್ತಮುತ್ತ ಯಾರ್‍ನೊ ಓಡ್ಸಿಕಂಡ್ ಬೊಗ್‌ಳಿ ಓಡಾಡ್‌ತ್ತಿದ್ದೊ. ನಂಗೆ

ಒಂದ್ ರೀತಿ ಹೆದ್ರಿಕೆ ಆತ್. ನಾನ್ ಊಟದ ಮೇಜದ ಮೇಲೆ ಹತ್ತಿ ವೆಂಟಿಲೇಟರ್‌ಂದ ಹೊರಗೆ ನೋಡ್ದೆ. ಆಗ ಮನೆ ಹಿಂದೆ ಒಬ್ಬ ಮನ್ಸ ಓಡುವಂಗೆ ಕಂಡತ್ತ್. ಕೂಡ್ಲೆ ಅಡುಗೆ ಗೂಡೆನ ಕರ್ದ್ ಕೋವಿ ತಕಂಡ್ ಬಾಕ ಹೇಳ್ದೆ. ಕೋವಿ ಕೈಗೆ ಸಿಕ್ತ್. ಅಷ್ಟರ್‌ಲಿ ನಾಯಿಗ ಬೊಗುಳುದು ಕಮ್ಮಿ ಮಾಡ್ದೊ. ಅದ್ ಒಬ್ಬ ಕಳ್ಳ ಓಡ್ದ್‌ತ ಅಂದಾಜಿ ಮಾಡ್ದೆ. ಸಾಮಾನ್ಯವಾಗಿ ಮುತ್ತಣ್ಣನವು ಮನೆಲಿ ಇಲ್ಲದಿರುದು ಊರುವುಕೆಲ್ಲ ಗೊತ್ತಿರುವ ಸಂಗತಿ. ಮಕ್ಕಳೇ ಮನೆಲಿರ್ದುತ ಗೊತ್ತು. ಹಂಗಾಗಿ ಕಳ್ಳ ಕದ್ಯಕೆ ಬಂದೊಳದ್ ಆದರೆ ಕಳ್ಳ ಕಡೆಗೆ ವಿಫಲ ಆತ್.

1956ರ ಜುಲೈಂದ ಸೆಪ್ಟೆಂಬರ್ ಕಡೆವರೆಗೆ ಬರೀ ಎರಡ್ ತಿಂಗ ಮಾತ್ರ ಹಿರಿಯ ಪ್ರಾಥಮಿಕ ಇಸ್ಕೂಲ್ ಬೆಟಗೇರಿಲಿ ಸೇವೆ ಮಾಡಿ ಒಪ್ಪಂದದ ವರ್ಗಾವಣೆ (Mutual) ರೀತಿ ನಾನ್ ಮತ್ತೆ ಕೆ.ಬಿ. ಬಸಪ್ಪ ಒಪ್ಪಂದ ಮಾಡ್ಕಂಡ್ ಮೂರ್ನಾಡ್ ಹಿರಿಯ ಪ್ರಾಥಮಿಕ ಇಸ್ಕೂಲಿಗೆ ವರ್ಗ ಆದೆ. ಅಲ್ಲಿ ಒಂದ್ ವರ್ಷ ಸೇವೆ ಮಾಡಿ 1957ರ ನಡುಲಿ ಹಿರಿಯ ಪ್ರಾಥಮಿಕ ಇಸ್ಕೂಲ್ ಹೊದ್ದೂರ್‌ಗೆ ವರ್ಗ ಆದೆ. 1958ರ್‌ಲಿ ಪುನಾ ಒಪ್ಪಂದದ ರೀತಿಲಿ ಶ್ರೀಮತಿ ಚೆಯ್ಯಂಡ ಯಂ. ಪಾರ್ವತಿ ಯಾವರೊಟ್ಟಿಗೆ ಒಪ್ಪಂದ ಮಾಡ್ಕಂಡ್ ಪಾರಾಣೆ ಹಿರಿಯ ಪ್ರಾಥಮಿಕ ಇಸ್ಕೂಲಿಗೆ ವರ್ಗಾದೆ. ನಾನ್ ಎ.ಸಿ.ಸಿ. ತರಬೇತಿ (Auxlary Cadet Corps) ಪಡ್ದದ್‌ರ್‌ಂದ ಎ.ಸಿ.ಸಿ. ಅಧ್ಯಾಪಕನಾಗಿಯೂ ಸೇವೆ ಮಾಡ್ಕಂಡ್ ಬಂದೆ. ಅಂದ್‌ನ ಕಾಲಲಿ ದೈಹಿಕ ಶಿಕ್ಷಣ ತರಬೇತಿ ಪಡ್ದ ಮಾಸ್ಟ್‌ಗ ಇತ್ಲೆ. ಆದ್ದರ್‌ಂದ ನಾನೇ ಮಕ್ಕಳಿಗೆ ದೈಹಿಕ ಶಿಕ್ಷಣ ಕೊಡ್ತಿದ್ದೆ. ಪಾರಾಣೆ ಇಸ್ಕೂಲ್‌ಂದನೇ 1962ರ್‌ಲಿ ಉಪಾಧ್ಯಾಯರ ತರಬೇತಿಗೆ ಆಯ್ಕೆಯಾಗಿ ಕೂಡಿಗೆ ತರಬೇತಿ ಇಸ್ಕೂಲ್‌ಗೆ ದಾಖಲಾದೆ. ಆಗ ಮೂಲ ಶಿಕ್ಷಣನೇ ತರಬೇತಿನ ಮುಖ್ಯ ಉದ್ದೇಶ. ತರಬೇತಿಗೆ ಹೋದ ಸುರುಲೇ ಅಲ್ಲಿನ ತರಬೇತಿ ಇಸ್ಕೂಲ್‌ನ

ಒಂದ್ ಎಕರೆ ಬತ್ತದ ಕೃಷಿ ಭೂಮಿಲಿ ಕೃಷಿ ಚಟುವಟಿಕೆಲಿ ತರಬೇತಿಗೆ ಆಯ್ಕೆ ಆದ ಶಿಕ್ಷಕರ್ ಸೇರ್ಕಂಬಕು. ಕಾಲೇಜ್‌ನ ಮಂತ್ರಿ ಮಂಡಲಲಿ ನನ್ನನ ಕೃಷಿ ಮಂತ್ರಿತ ಸರ್ವಾನುಮತಂದ ಆಯ್ಕೆ ಮಾಡ್ದೊ. ತರಬೇತಿ ಕೇಂದ್ರಲಿ ಇದ್ ಭಾರಿ ಜವಾಬ್ದಾರಿ ಕೆಲ್ಸ. ಕೃಷಿ ಸಚಿವ ಶಿಕ್ಷಕರ್‌ಂದ ಸಕಾಲಲಿ ಬತ್ತದ ಕೃಷಿ ಮಾಡ್ಸೊಕು. ನಾನ್ ಬಹಳ ಮೆತ್ತಂಗೆ ತರಬೇತಿ ಶಿಕ್ಷಕರ್‌ಂದ ಕೃಷಿ ಮಾಡ್ಸಿ ತೃಪ್ತಿ ಪಡ್ಕಂಡೆ. ಪ್ರಿನ್ಸಿಪಾಲ್ ಶ್ರೀ ಕೆ.ಬಿ. ಅಯ್ಯಪ್ಪ ಮತ್ತ್ ಪ್ರಾಧ್ಯಾಪಕರ ಪ್ರಶಂಸೆಗೆ ಒಳಗಾದೆ. ತಿಂಗಕ್ಕೊಮ್ಮೆ ಮಾದರಿ ಪಾಠ (Model Lesson) ಪ್ರದರ್ಶಿಸಿಕೆ ಬೇರೆ ಇಸ್ಕೂಲ್‌ಗಳಿಗೆ ಹೋಕಾಗಿತ್ತ್. ಟೀಚಿಂಗ್ ನೋಟ್ಸ್ ಮತ್ತ್ ಚಿತ್ರಗಳ ಆಲ್ಬಮ್ ಮಾಡಿ ಇಸಿಕಂಬಕು. ಹಿಂಗೆ ಎರಡ್ ವರ್ಷ ತರಬೇತಿನ ಮುಗ್ಸಿ ಪುನಾ ನಿಯೋಜನೆಗೊಂಡ ಪಾರಾಣೆ ಇಸ್ಕೂಲ್‌ಗೆ ನೇಮಕ ಆದೆ. ಹಿಂಗೆ ತರಬೇತಿಗೆ ನಿಯೋಜನೆ ಆದ ಇಸ್ಕೂಲ್‌ಗೇ ವಾಪಾಸ್ ಆದಂದ ನಾನೊಬ್ಬನೇ

ನನ್ನ ಪ್ರಾಮಾಣಿಕ ಸೇವೆನ ಸರಕಾರ ನೋಡಿ 1966–67ರ್‌ಲಿ ವಿದ್ಯಾ ಇಲಾಖೆ ವತಿಯಿಂದ ಮೈಸೂರ್ ಸಿವಿಲ್ ಆಕ್ಟ್ 23(2)ರ ಪ್ರಕಾರ 20–10–1966ರ್‌ಲಿ ಕೊಡಗ್‌ನ ಪೈಸಾರಿ ಜಾಗಂದ 10 ಸೆಂಟ್ ಮನೆ ನಿವೇಶನ ಜಾಗನ ಪಡ್ಕಂಬಕೆ ಹುಕುಂಸಂಖ್ಯೆ LND.11.174/66-67 ನನ್ನ ಕೈಸೇರ್ದ ಪ್ರಕಾರ ನಾನ್ ಮಡಿಕೇರಿಲಿ ಒಬ್ಬ ಸರ್ವೆ ಅಧಿಕಾರಿಯವರ ಮೂಲಕ ಜಾಗ ಗುರುತು ಮಾಡಿ, ಕಂದಾಯ ಕಚೇರಿ ನಾಪೋಕ್ಲುಗೆ ಕಳ್ಸಿದೊ. ನನ್ನ ಅರ್ಜಿ ನಾಪೋಕ್ಲು ಕಚೇರಿಗೆ ಬಂದದ್ ನಂಗೆ ಗೊತ್ತಾಗಿ, ನಾನ್ ಕಂದಾಯ ಪರಿವೀಕ್ಷಕರ್‌ನ (ರೆವಿನ್ಯೂ ಇನ್ಸ್ ಪೆಕ್ಟರ್) ಕೇಳಕನ "ಗ್ರಾಮಾಂತರ ಪ್ರದೇಶಲಿ ಆಸ್ತಿ ಇರೊವುಕೆ ಮಡಿಕೇರಿಲಿ ಮನೆ ನಿವೇಶನ ಮಂಜೂರ್ ಮಾಡಿಕೆ ಆದುಲೆತ ಹೇಳ್ದೊ. ಈ ರೀತಿ ಹೇಳ್ದ ಮೇಲೆ ನನ್ನ ನಿತ್ಯದ ಇಸ್ಕೂಲ್ ಕೆಲ್ಸನ ಕರೆಗೆ ತಳ್ಳಿ ಈ ಜಾಗದ ಹಿಂದೆ ಮತ್ತೆ ಲಂಚಾವತಾರ

ಪೀಡೆನ ಹಿಂದೆ ಬೀಳದೆ. ಆ ಸಂಗತಿನ ಕೈ ಬುಟ್ಟೆ. ಆ ರೀತಿ ಮಂಜೂರ್ ಮಾಡಿಕೆ ಆದುಲೆತ ಹೇಳ್ದ ವ್ಯಕ್ತಿ ಗ್ರಾಮಾಂತರ ಪ್ರದೇಶಲೇ ಹುಟ್ಟಿ ಬೆಳ್ದ್, ಇಂದೂಸನ ಆಸ್ತಿಯ ಮಾಲೀಕನಾಗಿ ಈಗ ವಾಸ ಮಾಡ್ತಾ ಉಟ್ಟು. ದೇವ್ರೇ ಅವಂಗೆ ಪ್ರತಿಫಲ ಕೊಡೊಕುತ ನನ್ನ ಆಸೆ. ಇದ್‌ಕೆ ಇನ್ನೊಬ್ಬನ ಪಿತೂರಿಸನ ಇತ್ತ್. ಅಂವನ ಕಥೆ ಮುಗ್ತ್. ಇದ್ ನಾನ್ ಆವೇಶಂದ ಹೇಳುವ ಮಾತ್. ಯಾರೂ ಪ್ರಪಂಚಲಿ ಶಾಶ್ವತರಲ್ಲ. ನಾನ್ ನನ್ನ ಪಾಠ ಪ್ರವಚನಗಳೊಟ್ಟಿಗೆ, ವಿದ್ಯಾರ್ಥಿಗಳ ದಾಖಲಾತಿ ಮತ್ತೆ ವರ್ಗಾವಣೆ ಪತ್ರಗಳ್ನ ಕೊಡುವ ಕೆಲ್ಸ ಮಾಡ್ತದ್ದೆ. ಹಂಗೆ ಇಸ್ಕೂಲ್‌ಲಿ ವಿದ್ಯಾರ್ಥಿಗಳ ಸಹಕಾರ ಸಂಘದ ಪುಸ್ತಕ ಮಳಿಗೆನ ಸೆಕ್ರೆಂಟರಿಯಾಗಿ ಸೇವೆ ಮಾಡ್ಯೊಳೆ. ಸಮಯಕ್ಕೆ ಸರಿಯಾಗಿ ಮಕ್ಕಳಿಗೆ ಮಡಿಕೇರಿಂದ ಪುಸ್ತಕಗಳ್ನ ಮತ್ತೆ ಬಾಕಿ ಬೋಧನೋಪಕರಣಗಳ್ನ ತಂದ್ ಕೊಡ್ತಿದ್ದೆ. ಪಾರಾಣೆ ಇಸ್ಕೂಲ್‌ಗೆ ಒಂದ್ ಎಕರೆಯಷ್ಟ್ ಬತ್ತ ಬೆಳೆದ ಜಾಗ ಇತ್ತ್. ಮಕ್ಕಳ್‌ಂದೇ ಮೂರ್ ವರ್ಷಗಳ ಮುಟ್ಟ ಬುಡದಾಗೆ ಬತ್ತದ ಕೃಷಿ ಮಾಡ್ಸಿ ಇಸ್ಕೂಲ್‌ನ ಕೃಷಿ ನಿಧಿಗೆ ಧನ ಸಂಗ್ರಹ ಮಾಡಿ ಕೊಟ್ಟೊಳೆ. ವರ್ಷಕ್ಕೆ ಸುಮಾರ್ 23–24 ಬಟ್ಟಿಯಷ್ಟ್ ಬತ್ತ ಸಿಕ್ಕ್‌ತಿತ್ತ್. ಈ ಆದಾಯದ ಶೇ. 90 ರಷ್ಟ್ ಇಸ್ಕೂಲ್ ಕೃಷಿ ನಿಧಿಗೆ ಜಮಾತಕಂಡ್ ಉಳ್ದ ಶೇ.10 ರಷ್ಟ್ ಇಸ್ಕೂಲ್ ಸರಕಾರದ ಬೊಕ್ಕಸಕ್ಕೆ ಹಾಕೊಕು. ಇದರ ಬಾಪ್ತು ಸುರೂಲೆ ಜಮಾ ಖರ್ಚಿದ್ ಪಟ್ಟಿಮಾಡಿ ಡಿ.ಡಿ.ಪಿ.ಐ. ಅವರ್‌ಂದ ಮಂಜೂರಾತಿ ಪತ್ರ ತಕಂಬಕು. ಇಸ್ಕೂಲ್ ಕೃಷಿ ನಿಧಿಂದ ಮಕ್ಕಳ ಮಧ್ಯಾಹ್ನದ ಬಿಸಿ ಊಟಕ್ಕೆ,ಕೃಷಿ ಹತ್ಯಾರ್ ತಕಂಬಕೆ, ಕ್ರೀಡಾ ಉಪಕರಣ ತಕಂಬಕೆ, ಪ್ರವಾಸಕ್ಕೆ ಮತ್ತೆ ಇಸ್ಕೂಲ್ ಅಭಿವೃದ್ಧಿಗೆ ಉಪಯೋಗ ಮಾಡಿಕಣಕ್. ಹಿಂಗೆ ಮಕ್ಕ ಕೃಷಿ ಕೆಲ್ಸ ಮಾಡ್ದರ್‌ಂದ ಅವರ ಮಾನಸಿಕ ಮತ್ತು ಶರೀರ ಬೆಳವಣಿಗೆಗೆ ಒಳ್ಳೆದಾಗುದರ್‌ಲಿ ಸಂಶಯ ಇಲ್ಲೆ. ಮಕ್ಕಳಿಗೆ ಕೃಷಿ ಮಾಹಿತಿ ಸಿಕ್ಕಿದಂಗಾದೆ. ಮಕ್ಕ ತುಂಬಾ ಕುಸೀಂದ ಗದ್ದೆಲಿ ನಾಟಿ ನಡ್ದು,

ಗೂಡೆಗ ಅಗೆ ತೆಗೆದು, ಕಳೆ ಕೀಳ್ದು, ಗೊಬ್ಬರ ಹಾಕುದು, ಬೆಳೆ ಹೊರ್ದು ಮತ್ತೆ ಒಕ್ಲು ಮಾಡ್ದು ಈ ಎಲ್ಲಾ ಕೆಲ್ಸಗಳ್ನ ತೃಪ್ತಿಂದ ಮಾಡ್ತಿದ್ದೊ. ಆ ಸಂದರ್ಭಲಿ ಮಕ್ಕಳಿಗೆ ಪಾಯಸ ಊಟ ಸಿಕ್ಕ್‌ತಿತ್ತ್. ಉಡುಪಿ ಜಿಲ್ಲೆನ ಪಿ. ಶ್ರೀ ಪತಿರಾವ್‌ತ್ತೇಳ್ವ ಮುಖ್ಯೋಪಾಧ್ಯಾಯರ್ ಇದ್ದ ಸಮೆಲಿ ಇಸ್ಕೂಲ್‌ಲಿ ಸಾಹಿತ್ಯೋತ್ಸವ ಮಾಡ್ತಿದ್ದೊ. ಈ ಉತ್ಸವ ಮೂರ್ ದಿನಗಳ ಮುಟ್ಟ ನಡೆತಿತ್ತ್. ಈ ಮೂರ್ ದಿನಗಳ ಊಟದ ವ್ಯವಸ್ಥೆ ಜವಾಬ್ದಾರಿ ನಂಗಿತ್ತ್. ನಾ ಪಾರಾಣೆ ಇಸ್ಕೂಲ್ ಅಧ್ಯಾಪಕರ ಕೂಟದ ಸೆಕ್ರೆಟರಿ ಆಗಿದ್ದೆ. ಅಂದ್ ಸುಮಾರ್ 700–800 ರಷ್ಟ್ ವಿದ್ಯಾರ್ಥಿಗಳೂ 18–20 ಜನ ಅಧ್ಯಾಪಕರೂ ಇದ್ದೊ. ಒಂದ್ ವರ್ಷ ಇಸ್ಕೂಲ್ ವಾರ್ಷಿಕೋತ್ಸವ ಸಮಾರಂಭಕ್ಕೆ ಮುಖ್ಯ ನೆಂಟ್ರಾಗಿ ಫೀಲ್ಡ್ ಮಾರ್ಷಲ್ ಕೆ.ಯಂ. ಕಾರ್ಯಪ್ಪನವರ್‌ನ ಸ್ವಾಗತಿಸಿಕಾಂಬಕನ ಅವುಕೆ ಎ.ಸಿ.ಸಿ. ವಿದ್ಯಾರ್ಥಿಗಳ್‌ಂದ ದೈಹಿಕ ಶಿಕ್ಷಣನೂ ಪ್ರದರ್ಶಿಸಿದೆ. ಅದ್ ತುಂಬಾ ಮೆಚ್ಚುಗೆ ಸಿಕ್ತ್. ಪಾರಾಣೆ ಇಸ್ಕೂಲ್ ಗೇಟ್ ಹತ್ರ ನಾನ್ ಮತ್ತೆ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ. ಸಿ.ಯನ್. ಗಣಪತಿಯವ್ ಒಂದೊಂದ್ ತೆಂಗ್‌ನ ಗಿಡ ನೆಟ್ಟದ್ದ್ ಈಗ ಅವು ಹೆಮ್ಮರ ಆಗಿ ಬೆಳ್ದುಟ್ಟು. ನಾನ್ ಪಾರಾಣೆ ಇಸ್ಕೂಲ್‌ಂದ ಎ.ಸಿ.ಸಿ.ವತಿಂದ ಮೂರ್ ಸತಿ ಬೆಂಗಳೂರ್‌ನ ಇಬ್ಬುರ್, ವಿದ್ಯಾನಗರ ಮತ್ತೆ ಜಾಲಹಳ್ಳಿ ಕ್ಯಾಂಪ್‌ಗಳಿಗೆ ನಿಯುಕ್ತಿ ಆಗಿದ್ದೆ. ನಂಗೆ ಕ್ರೀಡೆಲಿ ಆಸಕ್ತಿ ಇದ್ದರೆ ಮಕ್ಕಳೊಟ್ಟಿಗೆ ಹಾಕಿ, ಬ್ಯಾಡ್‌ಮಿಂಟನ್ ಆಟಲೆಲ್ಲಾ ಸೇರಿಕಂಬತ್ತಿದ್ದೆ. 8–9 ವರ್ಷಗಳ ಮುಟ್ಟ ಪಾರಾಣೆ ಪ್ರಾಥಮಿಕ ಇಸ್ಕೂಲ್‌ಲಿ ಸೇವೆ ಮಾಡಿ ಮಕ್ಕಳ ಮತ್ತೆ ಪೋಷಕರ ಮನ್ಸ್‌ನ ಗೆದ್ದೊಳೆ. ಕಡೆಗೆ ತಾಲೂಕ್‌ಂದ ಸರಕಾರದ ವರ್ಗಾವಣೆ ನೀತಿ ಸೂಚನೆ ಪ್ರಕಾರ ಮಡಿಕೇರಿ ತಾಲೂಕ್‌ನ ಗಡಿಲಿರುವ ವೀರಾಜಪೇಟೆ ತಾಲೂಕಿಗೆ ಒಳಪಡುವ ಬೆಳ್ಳುಮಾಡು ಹಿರಿಯ ಪ್ರಾಥಮಿಕ ಇಸ್ಕೂಲ್‌ಗೆ ಅಲ್ಲಿನ ಅಧ್ಯಾಪಕಿ ಶ್ರೀಮತಿ ಬಿ.ಸಿ. ಪೂವಮ್ಮ ನವರೊಟ್ಟಿಗೆ ಒಪ್ಪಂದದ

ವರ್ಗಾವಣೆ ಆದೆ.

1967ರ ಸೆಪ್ಟೆಂಬರ್–ಅಕ್ಟೋಬರ್‌ಲಿ ಹಿರಿಯ ಪ್ರಾಥಮಿಕ ಇಸ್ಕೂಲ್ ಬೆಳ್ಳುಮಾಡಿಗೆ ವರ್ಗ ಆಗಿ ಕೆಲ್ಸಕ್ಕೆ ಹಾಜರಾದೆ. ಆಗ ಅಲ್ಲಿ 6 ಜನ ಸರಕಾರಂದ ನೇಮಕ ಆದವು ಮತ್ತೆ ಇಬ್ಬರು ಖಾಸಗಿ ಅಧ್ಯಾಪಕಿಯರಿದ್ದೊ. ಮಕ್ಕಳ ಸಂಖ್ಯೆ ಸುಮಾರ್ 200–350 ರಷ್ಟಿದ್ದೊ. ಶ್ರೀ ಐ.ಯಸ್. ಗಣಪತಿಯವು ಮುಖ್ಯಶಿಕ್ಷಕರಾಗಿದ್ದೊ. 1969ರ್‌ಲಿ ಶಾಲಾಭಿವೃದ್ಧಿ ಸಮಿತಿಯವು ಮತ್ತೆ ಶಿಕ್ಷಕರ್ ಒಟ್ಟಿಗೆ ಸೇರಿ ಹಣದ ರೂಪಂದೂ ಬತ್ತದ ರೂಪಂದೂ ಧನಸಂಗ್ರಹ ಮಾಡಿ ಗಾಂಧೀಜಿಯವರ ಶತಮಾನೋತ್ಸವದ ಗ್ಯಾನಲಿ ಒಂದ್ ಶಾಲಾ ಕಟ್ಟಡ ನಿರ್ಮಿಸಿದೊ. ಬೆಳ್ಳುಮಾಡು ಇಸ್ಕೂಲ್‌ಲಿ ಸನ ಮಕ್ಕಳ ದಾಖಲಾತಿ ಮತ್ತೆ ವರ್ಗಾವಣೆ ಪತ್ರ ಕೊಡುವ ಕೆಲ್ಸನ ನಾ ಮಾಡ್ದೆ. ಇದೇ ಇಸ್ಕೂಲ್‌ಂದ ಮೈಸೂರ್‌ನ ವಿದ್ಯಾಕೇಂದ್ರಲಿ ಇಂಗ್ಲೀಷ್ ಪಾಠ ಭೋಧನೆ ತರಬೇತಿಗೆ ನೇಮ ಆದೆ. ತರಬೇತಿ ಪಡ್ಕಂಡ್ ಹಿಂದಕೆ ಬಂದೆ. ಇಂಗ್ಲೀಷ್ ಪಾಠ ಭೋಧನೆ ತರಬೇತಿ ಆದ ಮೇಲೆ 5ರ್‌ಂದ 7ನೇ ತರಗತಿಗೆ ನಾನ್ ಇಂಗ್ಲೀಷ್ ಭೋದನೆ ಮಾಡ್ತಿದ್ದೆ. ಒಂದ್ ದಿನ ಮೈಸೂರ್‌ಂದ ಇಂಗ್ಲೀಷ್ ಅಧ್ಯಾಪಕಿ ನಮ್ಮ ಇಸ್ಕೂಲ್‌ಗೇ ದಿಢೀರ್ ಆಗಿ ಬಂದೊ. ನನ್ನ ಇಂಗ್ಲೀಷ್ ಭೋಧನೆ ಕೇಳಿಅವು ತುಂಬ ಕುಸಿಪಟ್ಟೊ. ಈ ಮೂರು ತರಗತಿನ ಮಕ್ಕ ಕಡೆ ಪರೀಕ್ಷೆಲಿ ಶೇಕಡವಾರ್ ತೇರ್ಗಡೆ ಆತಿದ್ದೊ. ಇಂಗ್ಲೀಷ್ ಪಾಠ ಮಾಡ್ದು ಬೇರೆ ವಿಷಯಗಳಿಗಿಂತ ಸುಲಭತ ನಂಗಾತ್. ಬೆಳ್ಳುಮಾಡು ಇಸ್ಕೂಲ್ ಆವರಣ ಸನ ತುಂಬ ಕಳೆ ಗಿಡಗಳ್‌ಂದ ಕೂಡಿ ಹೇಸಿಗೆಯಾಗಿ ಕಾಂಬತಿತ್ತ್. ನಾನ್ ನನ್ನ ಇಷ್ಟದಂಗೆ ಆವರಣನ ಶುಚಿ ಮಾಡಿ ಕಾಫಿ ತೋಟ ಮಾಡನೋತ ಮುಖ್ಯಶಿಕ್ಷಕರ್‌ಗೆ ಸಲಹೆ ಕೊಟ್ಟೆ. ಆಗ ಇವು ಇಸ್ಕೂಲ್ ಆವರಣಲಿ ಕಾಫಿ ತೋಟ ಮಾಡುವ ಕೆಲ್ಸ ಮಾಸ್ಟ್ರಗಳಿಗೆ ಬೇಡತ ಹೇಳ್ದೊ. ಮತ್ತೆ ಶಾಲಾಭಿವೃದ್ಧಿ ಮಂಡಳಿನ

ತಿಂಗಳ ಸಭೆಲಿ ವಿಷಯ ಪ್ರಸ್ತಾಪ ಮಾಡಿತ ಅವರ್ನ ಕೇಳಿಕಂಡೆ. ಅದ್ಲೂ ಒಪ್ಪಿತ್ಲೆ ಮತ್ತೊಂದ್ ಸಭೆಲಿ ವಿಷಯ ಪ್ರಸ್ತಾಪ ಮಾಡಿತ ಒತ್ತಾಯ ಮಾಡ್ದೆ. ಸಧ್ಯ ವಿಷಯ ಪ್ರಸ್ತಾಪ ಆತ್. ಆಗ ಶಾಲಾಭಿವೃದ್ಧಿ ಸಮಿತಿನ ಅಧ್ಯಕ್ಷ ಶ್ರೀ ಚಂಗುಲಂಡ ಸೋಮಯ್ಯನವು ಬೆಳ್ಯಪ್ಪ ಆವರಣಲಿ ಕಾಫಿ ತೋಟ ಮಾಡಿಕೆ ಅಡ್ಡಿ ಇಲ್ಲೆತ ಸಭೆಲಿ ಘೋಷಣೆ ಮಾಡ್ಲೊ. ಸಮಿತಿಯ ಸದಸ್ಯರೆಲ್ಲವೂ ತಮ್ಮ ತಮ್ಮ ಒಪ್ಪಿಗೆ ಕೊಟ್ಟೊ. ನಿರ್ಣಯನ ಅನುಮೋದಿಸಿ ದಾಖಲೆ ಮಾಡ್ಲೊ. ಶಾಲಾವರಣನ ಶುಚಿ ಮಾಡಿಕೆ ಶಾಲಾಭಿವೃದ್ಧಿ ಸಮಿತಿಯವೇ ಕಂಟ್ರಾಕ್ಟ್ ಕೊಟ್ಟೊ. ಮತ್ತೆ ಕಾಫಿ ಕೃಷಿ ಮಾಡಿಕೆ ನಾನ್ ಸಿದ್ಧತೆ ಮಾಡ್ದೆ. ವೇಳಾಪಟ್ಟಿಲಿ ಒಂದ್ ಗಂಟೆ ಸಮಯ ತೋಟಗಾರಿಕೆಗೆ ಇಸಿದೊ. ಮಕ್ಕಳೇ ಅವರವರ ಮನೆಗಳ್‌ಂದ ಕೃಷಿ ಹತ್ಯಾರ್ ತಂದ್ ಕೆಲ್ಸ ಮಾಡ್ತಿದ್ದೊ. ಶ್ರೀ ಮಾತಂಡ ಡಾಲಿತ್ತೇಳವು ಸುಮಾರ್ 267ಕಾಫಿ ಗಿಡಗಳ್ನ ಪುಕ್ಸಟೆ ಕೊಟ್ಟೊ. ನಾನ್ ಮಕ್ಕಳ್ನ ತೋಟಕೆ ಕರ್ಕೊಂಡೋಂಗಿ ಕಾಫಿ ಕೃಷಿ ಬಗ್ಗೆ ವಿವರಣೆ ಕೊಟ್ಟ್‌ಕಂಡ್ ಒಂದ್ ಗಿಡನ ನೆಟ್ಟ್ ತೋರ್ಸಿದೆ. ಒಂದ್ ಗಿಡನ ಮಾತ್ರ ಒಬ್ಬ ಮಾಸ್ಟ್ರ ನೆಟ್ಟ್ ತೋರ್ಸಿದೆ. ಒಂದ್ ಗಿಡನ ಮಾತ್ರ ಒಬ್ಬ ಮಾಸ್ಟ್ರ ನೆಟ್ಟತ್. ಹೆಸ್ರ್ ಹೇಳ್ದುಲೆ ಇಸ್ಕೂಲ್‌ಗೆ ಬೇಕಾದ ಕೃಷಿ ಹತ್ಸಾರ್‌ಗಳ್ನ ಸರಕಾರ ಒದಗಿಸಿ ಕೊಟ್ಟತ್. ಈ ಇಸ್ಕೂಲ್‌ಂದೇ ನಾನ್ ಕೂಡಿಗೆಗೆ ಎ.ಯನ್.ಪಿ. (applied Nutrition Programme) ಪೌಷ್ಠಿಕ ಆಹಾರದ ಹಣ್ಣ್ ಬೆಳ್ಸುವ ರಾಜ್ಯಮಟ್ಟದ ತರಬೇತಿಗೆ ನಾನ್ ನೇಮಕ ಆದೆ. ಮೂರ್ ವಾರಗಳ ಕಾಲ ತರಬೇತಿ ನಡ್ತ್. ತರಬೇತಿ ಕ್ಯಾಂಪಿಗೆ ಅಲ್ಲಿನ ಅಭ್ಯರ್ಥಿಗ ನನ್ನನ ಒಮ್ಮತಂದ ಸೆಕ್ರೆಟರಿತ ನೇಮಕ ಮಾಡ್ಲೊ. ರಾಜ್ಯಮಟ್ಟದ ತರಬೇತಿ ಆದ್ದರ್‌ಂದ ತುಂಬಾ ಜವಾಬ್ದಾರಿಂದ ಕೆಲ್ಸ ಮಾಡಕಾಗಿತ್ತ್. ಕಡೆಗೂ ತರಬೇತಿ ಯಶಸ್ವಿ ಆತ್.

ಒಂದ್ ದಿನ ತೋಟಗಾರಿಕೆ ಅಧಿಕಾರಿ (Horticutural) ಶ್ರೀ ಪಾರುವಂಗಡ ನಂಜಪ್ಪನವು ದಿಢೀರ್ ಆಗಿ ಇಸ್ಕೂಲ್‌ಗೆ ಬಂದೊ.

ಇಲ್ಲೊಬ್ಬ ಮಾಸ್ಟ್ ಎ.ಎನ್.ಪಿ. ತರಬೇತಾದವು ಒಳೊತಗೊತ್ತಾಗಿ ನಾನ್ ಬಂದೆ. ಇಲಾಖೆಂದ ಚೋಳಿಹಣ್ಣ್‌ನ ಪಿಳ್ಳೆ ಕೊಟ್ಟನೆತ ಹೇಳಿ ಚೋಳಿಗಿಡನ ಬೆಳ್ಸುವ ವಿಧಾನನ ನಂಗೆ ವಿವರಿಸಿದೊ. ಒಂದಿನ ಸಾಕಷ್ಟ್ ಗಿಡಗಳ್ನೂ ಇಸ್ಕೂಲಿಗೆ ಕೊಟ್ಟೊ. ನಾನ್ ಚೋಳಿ, ಸೂರ್ಯಕಾಂತಿ ಮತ್ತೆ ಬೇರೆ ಬೇರೆ ತರಕಾರಿ ಬೆಳ್ಸಿದೆ. ಇಸ್ಕೂಲ್ ಕೃಷಿ ನಿಧಿಗೆ ಹಣ ಕೂಡ್ತ್. ಕೊಡಗ್‌ನ ಜಿಲ್ಲಾಧಿಕಾರಿಯಾಗಿದ್ದ ಮೈಸೂರ್‌ನ ತಲಕಾಡ್‌ನ ಶ್ರೀ ಶ್ರೀನಿವಾಸನ್ ಅವು ವೀರಾಜಪೇಟೆಗೆ ಹೋತಿದ್ದೊ. ಹಂಗೆ ಹೋಕನ ರಸ್ತೆಕರೆಲಿರುವ ಇಸ್ಕೂಲ್‌ನ ಪೊರ್ಲುನ ನೋಡಿ ಇದ್ದಕ್ಕಿದ್ದಂಗೆ ಅಲ್ಲಿನ ಫಸಲ್‌ನ ನೋಡಿ, ಅರಳಿದ ಸೂರ್ಯಕಾಂತಿ ಹೂವುಗಳ್ನ ಕಂಡ್ ತುಂಬ ಕುಸಿಪಟ್ಟೊ. ಇದರ ಸಂಬಂಧ ಅಧ್ಯಾಪಕ ಯಾರ್‌ತ ಕೇಳ್ದೊ. ಒಟ್ಟಿಗೆ ಇದ್ದ ನಾನ್ "ನಾನೇ ತಹೇಳ್ದೆ. ತುಂಬ ಮೆಚ್ಚಿಕಂಡೊ. ಆಟದ ಮೈದಾನ ಹತ್ರ ಖಾಲಿ ಜಾಗೆ ಇತ್ತ್. ಅಲ್ಲಿ ಪ್ರತ್ಯೇಕ ಆಗಿ ತಂತಿಹಾಕಿ ಸಪೋಟ, ಪೇರಲ, ಬೆಣ್ಣೆ ಹಣ್ಣ್, ಮಾವುನ ಗಿಡನೆಲ್ಲ ನೆಟ್ಟ್ ಹಣ್ಣ್‌ನ ತೋಟ ಮಾಡ್ಸಿಯೊಳೆ.

ಇಸ್ಕೂಲ್ ಆವರಣಲಿ ಇದ್ದ ಎರಡ್ ಗಂಧದ ಮರಗಳ್ನ ಅರಣ್ಯ ಇಲಾಖೆಯವು ತೆರವು ಮಾಡಿ (Extract) ಇಸ್ಕೂಲ್‌ಗೆ ಬೋನಸ್ ಕೊಟ್ಟವೆತ್ತೇಳಿ ಹೇಳ್ಕಂಡ್ ಹೋಗಿದ್ದೊ. ಇದಾಗಿ 6–7ವರ್ಷಗ ಕಳ್ದರೂ ಇಲಾಖೆಂದ ಎಂತನೂ ಇಲ್ಲೆ. ಶಾಲಾ ಅಭಿವೃದ್ಧಿ ಸಮಿತಿ ಮತ್ತು ಗುರುವೃಂದ ಆ ಬೋನಸ್‌ನ ಭರವಸೆನ ಕೈ ಬುಟ್ಟಿದ್ದೊ. ನಾನೇ ಒಂದಿನ ಮುಖ್ಯೋಪಾಧ್ಯಾಯರ ಅನುಮತಿ ಪಡ್ಕಂಡ್ ಮಡಿಕೇರಿಗೆ ಹೋಗಿ ಜಿಲ್ಲಾಧಿಕಾರಿನ ಕಂಡ್ ಇಸ್ಕೂಲ್ ಮ್ಯೂಟೇಷನ್ (Mc) ಸರ್ಟಿಪಿಕೇಟ್ ಕೊಡ್ಸಿ ಕೊಡೊಕುತ ವಿನಂತಿ ಮಾಡಿ, ಸರ್ಟಿಫಿಕೇಟ್ ಸಿಕ್ಕಿದ ಮೇಲೆ ಒಮ್ಮೆ ನಾನೇ ಅರಣ್ಯಾಧಿಕಾರಿ ಶ್ರೀ ಲಕ್ಷ್ಮಣ್ ಅವರ್ನ ಕಾಂಬಕೆ ಹುಣಸೂರಿಗೆ ಹೋದೆ. ಅರ್ಜಿಯೊಟ್ಟಿಗೆ

ಸಂಬಂಧಪಟ್ಟ ದಾಖಲೆಗಳ್ನ ಜೋಡ್ಸಿ ಕೊಟ್ಟೆ. ಕಡತಗಳ್ನ ಪರಿಶೀಲ್ಸಿ ರೂ.2012ಕ್ಕೆ ಚೆಕ್ಕ್ ಬರಸಿ ಸೈನ್ ಮಾಡಿ ಇಸ್ಕೂಲ್‌ನ ಗಂಧದ ಮರದ ಬಾಪ್ತು ಬೋನಸ್ ಕೊಟ್ಟೊ. ಸದ್ರಿ ಚೆಕ್ಕ್‌ನ ತಂದ್ ಮುಖ್ಯ ಶಿಕ್ಷಕರಿಗೆ ಕೊಟ್ಟೆ. ಹಿಂಗೆ ನಾಯಕತ್ವ ವಹಿಸಿಕಂಡ್ ಕೆಲ್ಸ ಮಾಡಿಕೆ ದೇವರೇ ಸ್ಫೂರ್ತಿ ಕೊಟ್ಟಿಕೊಕುತ ನನ್ನ ಭಾವನೆ. ನನ್ನ ಉದ್ಯೋಗದ ಉದ್ದಕ್ಕೂ ನಾಯಕತ್ವಂದಲೇ ಕೆಲ್ಸ ಮಾಡಿ ಎಲ್ಲರ ಪ್ರಶಂಸೆಗೆ ಒಳಗಾದ್ದ್ ಒಂದ್ ಹೆಮ್ಮೆಯ ವಿಷಯ. ನಾಯಕತ್ತೇಳ್ದು ರಕ್ತಂದಲೇ ಬರೊಕುತ್ತೇಳ್ದು ನನ್ನ ಭಾವನೆ ಸತ್ಯಕ್ಕೆ ಜಯ ಉಟ್ಟೇ ಉಟ್ಟು. ಧೈರಂದ ಮುಂದೆ ನುಗ್ಗೊಕು. ಆತ್ಮ ವಿಶ್ವಾಸ ಇರೊಕು. ಸುಮಾರ್ 13–14 ವರ್ಷಗಳ ಮುಂಚೆ ಬೆಳ್ಳುಮಾಡು ಇಸ್ಕೂಲ್‌ಲಿ ಸೇವೆ ಮಾಡ್ನೊಳೆ. ಒಮ್ಮೆ ಇಸ್ಕೂಲ್ ವಾರ್ಷಿಕೋತ್ಸವಲಿ, ಎ.ಸಿ.ಸಿ. ಆಗ ಇಲ್ಲದಿದ್ದರೂ ಮಕ್ಕಳಿಗೆ ತರಬೇತಿ ಕೊಟ್ಟ್ ಸಮವಸ್ತ್ರ ಸಿದ್ಧತೆ ಮಾಡಿ ಉತ್ಸವಕ್ಕೆ ಮುಖ್ಯ ನಂಟ್ರಾಗಿ ಬಂದಿದ್ದ ಕರ್ನಾಟಕದ ಅರಣ್ಯ ಮಂತ್ರಿ ಶ್ರೀ ಆರ್. ಗುಂಡೂರಾವ್ ಅವರ ಮುಂದೆ ಮಕ್ಕಳ ಪಥಸಂಚಲನ ಮತ್ತೆ ಗೌರವರಕ್ಷೆನ ಕೊಡ್ಸಿದೆ. ಅಷ್ಟೇಅಲ್ಲ ಮಕ್ಕಳ್ಂದ ಕವಾಯತ್ತ್ ಮಾಡ್ಸಿದೆ.

ನಿವೃತ್ತಿ ಆಕೆ ಇನ್ನೇನ್ 2–3 ವರ್ಷ ಇರಕನ ಶಿಕ್ಷಣಾಧಿಕಾರಿ (AEO) ಶ್ರೀ ಆಲೆಮಾಡ್ ನಾಚಪ್ಪನವರ ಪೊನ್ನಂಪೇಟೆಯ ಮನೆಗೆ ಒಂದ್ ರಜದ ದಿನ ಹೋದೆ. ನನ್ನನ ನನ್ನ ಮನೆ ಹತ್ರದ ಪಾರಾಣೆ ಇಲ್ಲರೆ ಬಲಮುರಿಗೆ ವರ್ಗ ಮಾಡಿ ಕೊಡಿತ ಕೇಳ್ಕಂಡೆ. ಆಗ ಅವು "ಬೆಳ್ಯಪ್ಪನವರೇ ನೀವು ಬೆಳ್ಳುಮಾಡು ಶಾಲೆಯಿಂದ ವರ್ಗಾವಣೆ ಶಾಲೆಯ ಕಾಫಿ ತೋಟವು ನಿಮ್ಮ ಹಿಂದೆಯೇ ಬರುವುದು. ಅಧಿಕಾರಿಗಳು ಶಾಲೆಗೆ ಸಂದರ್ಶಿಸಿದರೆ ನಿಮ್ಮನ್ನು ಯಾವ ವಿಷಯವಾಗಿಯೂ ಪ್ರಶ್ನಿಸುವಂತಿಲ್ಲ. ನೀವು ಬೆಳ್ಳುಮಾಡು ಶಾಲೆಯಿಂದಲೇ ನಿವೃತ್ತಿ ಹೊಂದಬೇಕುತ ಕೆಮಿ ಮಾತ್ ಹೇಳಿ ಜಾರಿಕಂಡೊ. ನನ್ನ ಸಹದ್ಯೋಗಿಗ ನನ್ನ ಕೆಲ್ಸಗಳ್ನ ನೋಡಿ ಮೆಚ್ಚಿಕಂಡ್

"ಬೆಳ್ಯಪ್ಪ ಮಾಸ್ಟಿಗೆ ರಾಜ್ಯ ಪ್ರಶಸ್ತಿ ಸಿಗಬೇಕು"ತ ತಮಾಷೆ ಮಾಡ್ತಿದ್ದೊ. ಆದರೆ ನಾನ್ ನಿಮ್ಮೆಲ್ಲರ ಸಹಕಾರ ಮತ್ತೆ ಪ್ರೀತಿ ವಿಶ್ವಾಸನೇ ನಂಗೆ ಪ್ರಶಸ್ತಿತ ಹೇಳ್ತಿದ್ದೆ. ಪ್ರಶಸ್ತಿ ಅರ್ಜಿನ ಭರ್ತಿ ಮಾಡಕಾಗಿತ್. ಕಾಂಚಾಣವೇ ಕಾರ್ಯಸಿದ್ಧಿ! ಹಣ ಕೊಟ್ಟವನೂ ಅಲ್ಲ, ತಕ್ಕಂಡವನೂ ಅಲ್ಲ. ಅಧಿಕಾರಿಗಳಿಗೆ ನನ್ನ ಸಾಧನೆ ಬಗ್ಗೆ ಗೊತ್ತು. ಬಾಯಿ ಬಾರದವರಂಗೆ ವರ್ತಿಸಿದ. ಅಧಿಕಾರಿಗಳಿಗೆ ಬುಟ್ಟ ವಿಷಯ. ಸಾಧನೆನೇ ನನ್ನ ಗುರಿ. "ಸಾಧಿಸಿದರೆ ಸಬಲ ನುಂಗಬಹುದು"ತ್ತೇಳುವ ಮಾತುಟ್ಟು. ಸಾಧನೆಮಾಡ್ದಂವಯಾಗಳೂ ಹಾಳಾದುಲೆ. ಬೆಳ್ಳುಮಾಡು ಇಸ್ಕೂಲ್‌ಲಿ ಖಾಸಗಿಯಾಗಿ ಸೇವೆ ಮಾಡ್ತಿದ್ದ ಬಿ.ಡಿ. ಪುಷ್ಪಾವತಿಗೆ ಅವಳ ಅಪ್ಪನ ಕೋರಿಕೆಯಂಗೆ ನಾನ್ ಅಂದ್‌ನ ಡಿ.ಡಿ.ಪಿ.ಐ. ಆಗಿದ್ದ ಶ್ರೀಮತಿ ಕೆ.ಎಸ್. ಇಂದಿರಾ ಅವರ್‌ಲಿ ವಿನಂತಿ ಮಾಡಿಕಂಡೆ. ನನ್ನ ಕೋರಿಕೆಗೆ ಮನ್ನಣೆಸಿಕ್. ಹಂಗಾಗಿ ಶ್ರೀಮತಿ ಪುಷ್ಪಾತಿ ಸರಕಾರಿ ಅಧ್ಯಾಪಕಿ ಆಗಿ ನೇಮಕ ಆತ್. ಹಿಂಗೆ ನನ್ನ ಉದ್ಯೋಗದ ನಡುಲಿ ಬೇರೆಯವುಕೆ ಉಪಹಾರ ಮಾಡ್ದರ ಗ್ಯಾನ ಮಾಡಿಕಣೆ."ಪರೋಪಕಾರ ಪುಣ್ಯಾಯ, ಪಾಪಯ ಪರಪೀಟಂ"ತ್ತೇಳ್ವ ವಾಕ್ಯನ ನಾನ್ ಆರನೇ ತರಗತಿಲಿ ಓದಿಕಂಡಿರಕನ ಶ್ರೀ ಕೆ.ಟಿ. ನಾರಾಯಣ ಮಾಸ್ಟ್ ಕೊಟ್ಟದರ ಗ್ಯಾನ ಮಾಡಿಕಂಡೆ.

ನನ್ನ ಅಚ್ಚುಮೆಚ್ಚ್‌ನ ವಿದ್ಯಾರ್ಥಿಗಳಾದ ಶ್ರೀ ಮುಕ್ಕಾಟಿರ ಚೋಟು ಅಪ್ಪಯ್ಯ, ನಿವೃತ್ತ ಎಸ್ಪಿ ಶ್ರೀ ಬಿದ್ದಂಡ ಜಿ. ಅಯ್ಯಪ್ಪ, ನಿವೃತ್ತ ಡಿವೈಎಸ್ಪಿ ಶ್ರೀ ಬೊಳಕಾರಂಡ ಟಿ.ಪೆಮ್ಮಯ್ಯ, ನಿವೃತ್ತ ಡಿ.ಡಿ.ಪಿ.ಡಿ. ಶ್ರೀ ಬೊಳಕಾರಂಡ ಮಂದಣ್ಣ, ಸಹಕಾರ ಸಂಘದ ನಿವೃತ್ತ ಮತ್ತೆ ಪಾರಾಣೆ ವಿ.ಎಸ್.ಎಸ್.ಎನ್. ಬ್ಯಾಂಕ್‌ನ ಹಾಲಿ ಅದ್ಯಕ್ಷೆ ಶ್ರೀಮತಿ ದೀರ್ಘಕೇಶಿ ಶಿವಣ್ಣ, ಕೊಡಗು ಜಿಲ್ಲಾ ಪಂಚಾಯಿತಿನ ಮಾಜಿ ಅಧ್ಯಕ್ಷರಾದ ಚೌರೀರ ಪೆಮ್ಮಯ್ಯ, ಹಿಂದೆ ಕಾಫಿ ಬೆಳೆಗಾರರ ಹೋರಾಟ ಸಮಿತಿಯ ಉಪಾಧ್ಯಕ್ಷರ್ ಹಾಲಿ ಮುರ್ನಾಡ್ ಪದವಿ ಪೂರ್ವ

ಕಾಲೇಜಿನ ಗೌರವ ಸೆಕ್ರೆಟರಿ ಶ್ರೀ ಅವರೆಮಾದಂಡ ಡಿ. ಪೂವಯ್ಯ, ಕೊಡಗು ಉಪಾಧ್ಯಾಯರ ಸಂಘದ ಮಾಜಿ ಅಧ್ಯಕ್ಷರ್ ಅಲ್ಲದೆ ರಾಜ್ಯಪ್ರಶಸ್ತಿ ವಿಜೇತರೂ ಆಗಿರುವ ಮುಖ್ಯೋಪಾಧ್ಯಾಯ ಶ್ರೀ ಎನ್.ಕೆ. ಪ್ರಭು ಮತ್ತ್ ನೂರಾರ್ ಉದ್ಯೋಗಸ್ಥ ವಿದ್ಯಾರ್ಥಿಗ ನನ್ನೊಂದಿಗೆ ಇಂದೂ ಓಡಾಡಿಕಂಡ್ ಸಭೆ ಸಮಾರಂಭಗಳ್‌ಲಿ ಭಾಗವಹಿಸಿಕಂಡ್ ಇರಿಕೆ ದೇವ್ರು ಕೊಟ್ಟ ಆರೋಗ್ಯುವೇ ಭಾಗ್ಯ. ನನ್ನ ಉಪಾಧ್ಯಾಯ ಕೆಲ್ಸನಂಗೆ ತುಂಬ ಕುಸಿಕೊಟ್ಟುಟು. ಶ್ರೀ ಕಾವೇರಿ ಮಾತೆನ ಅನುಗ್ರಹಂದ, ಸರಸ್ವತಿ ದೇವಿ ತೋರ್‍ಸಿದ ದಾರಿಲೇ ಮುಂದೊರಿತಾ ಒಳೆ. ನನ್ನ ಉದ್ಯೋಗ ಜೀವನಲಿ ಕಹಿಗಿಂತ ಸಿಹಿಯೇ ಮೇಲಾಗಿ ಪ್ರಾಮಾಣಿಕತನನೇ ಯಶಸ್ಸಿಗೆ ದಾರಿತ್ತೇಳ್ದರ ತಿಳ್ಕಂಡೆ. ನಾ ಉದ್ಯೋಗಲಿ ಇರಕನ ಲೋಕಸಭೆ, ವಿಧಾನಸಭೆ ಮತ್ತ್ ಇನ್ನಿತರ ಚುನಾವಣೆಗಳ್‌ಲಿ ಪೋಲಿಂಗ್ ಆಫೀಸರ್ ಆಗಿ ಬೇಕಷ್ಟ್ ಸತಿ ಸೇವೆ ನಾಡೊಳೆ. 1960ರ್‌ಲಿ ಶಿಕ್ಷಕ ತರಬೇತಿ ಸಮೆಲಿ ಮನಶಾಸ್ತ್ರ ಒಂದ್ ವಿಷಯ ಆಗಿತ್ತ್. ಅದರ ಪರೀಕ್ಷೆಲೂ ತೇರ್ಗಡೆ ಆಗೊಳೊ. ನಂಗೆ ಸ್ವಲ್ಪಮಟ್ಟಿಗೆ ಮನಶಾಸ್ತ್ರದ ತಿಳಿವಳಿಕೆ ಉಟ್ಟು. ಹಂಗಾಗಿ ಮಕ್ಕಳ ಮತ್ತ್ ಜನಗಳ ಮನ್ಸ್‌ನ ಗೆಲ್ಲಿಕೆ ಸುಲಭತ ಹೇಳಿಕೆ ಇಷ್ಟಪಟ್ಟನೆ. ನಾನ್ 1981ರ ಮಾರ್ಚ್ ತಿಂಗ 31ಕ್ಕೆ ವೀರಾಜಪೇಟೆ ತಾಲೂಕ್‌ನ ಹಿರಿಯ ಪ್ರಾಥಮಿಕ ಇಸ್ಕೂಲ್, ಬೆಳ್ಳುಮಾಡು ಇಲ್ಲಿಂದ ಸರಕಾರಿ ಕೆಲ್ಸಂದ ನನ್ನ 55ನೇ ವರ್ಷ ಪ್ರಾಯಕ್ಕೆ ನಿವೃತ್ತಿ ಆದೆ. ಧನ್ಯವಾದಗ ತಾಯಿ ಸರಸ್ವತಿ ದೇವಿಗೆ ಶರಣು.

ಉದ್ದಿಮೆ ಹಾಗೂ ವ್ಯಾಪಾರ :

ನಾನ್ ಸರಕಾರಿ ಉದ್ಯೋಗಂದ ನಿವೃತ್ತಿ ಆಗಿ, ಆರಾಮಾಗಿ ಕೃಷಿ ಕೆಲ್ಸ ಮಾಡಿಕಂಡ್ ಇರಕನ ನಮ್ಮ ನೆರೆಮನೆಯವರಾದ ಶ್ರೀ ಕೋಟೆರ ಎ. ಸೋಮಣ್ಣನವು ಹಿಂದೆ ಇಸ್ಕೂಲ್ ಇನ್ಸ್‌ಪೆಕ್ಟರ್ ಆಗಿದ್ದವು ಒಂದಿನ ದಾರಿಲಿ ಸಿಕ್ಕಿ, "ಉದ್ದಿಮೆ ಸಂಸ್ಥೆಯಾದ ಮಡಿಕೇರಿನ ಈಸ್ಟ್

ಎಂಡ್ ಕಂಪೆನಿಗೆ ಒಬ್ಬ ಚುರುಕಾಗಿರುವ ಕೆಲ್ಸಗೊತ್ತಿರುವ ಅಕೌಟೆಂಟ್ ಮ್ಯಾನೇಜರ್ ಬೇಕು. ನೀ ನಿವೃತ್ತಿ ಆಗಿ ಮನೆಲಿ ಕುದ್ದ್‌ಕಂಡ್ ಏನ್ ಮಾಡ್ತ ಒಳ ? ನಮ್ಮ ಕಂಪೆನಿಗೆ ಬಂದಿಯಾ"ತ ಕೇಳ್ಯೊ. ಮನೆಲಿ ಈ ವಿಷಯನ ಹೇಳ್ದೆ. ಮನೆಯವರ ಒಪ್ಪಿಗೆ ಸಿಕ್ಕಿ,ಮಡಿಕೇರಿನ ಅವರ ಸಂಸ್ಥೆಗೆ ಒಂದಿನ ಹೋದೆ. ಹೋದ ಕೂಡ್ಲೆ ಅವರ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೊಡಂದೇರ ಉತ್ತಯ್ಯನವು ನನ್ನನ ಕರ್ಸಿಕಂಡ್, ಆ ಹುದ್ದೆನ ನಂಗೆ ಕೊಟ್ಟೊ. ಅವರ ಕಂಪೆನಿ ರಮ್ಸ್ ಕಂಪೆನಿಯಾಗಿತ್ತ್ "ಖ"ತ್ತೇಳ್ರೆ ಶ್ರೀ ಮುಂಡಂಡ ರಾಜು, "ಗ"ತ್ತೇಳ್ರೆ ಶೀ ಕೊಡಂದೇರ ಉತ್ತಯ್ಯ,"ಒ"ತ್ತೇಳ್ರೆ ಶ್ರೀ ಪಾಲೆಕಂಡ ಮುದ್ದಪ್ಪ, "ಖ"ತ್ತೇಳ್ರೆ ಶ್ರೀ ಕೋಟೇರ ಸೋಮಣ್ಣ ಹಿಂಗೆ ನಾಕ್ ಜನ ಷೇರ್‌ದಾರರ ಸಂಸ್ಥೆ ಆಗಿತ್ತ್. ಅಲ್ಲಿ ನನ್ನ ಮುಖ್ಯ ಉದ್ದೇಶ ಏನ್ತ್ತೇಳ್ರೆ, ನಾನ್ ಹೊಟೇಲ್‌ನ ದಿನದ ಲೆಕ್ಕಪತ್ರಗಳ್ನ ಪರಿಶೀಲ್ಸಿ ದಾಖಲು ಮಾಡ್ದು. ಅಲ್ಲದೆ, ಮದ್ಯದ ಶೇಖರಣೆನ ಜಮಾ ತಕಂಬದು. ಮೂರನೆದ್ ಪೆಟ್ರೋಲ್ ಬಂಕ್‌ನ ಲೆಕ್ಕ ಪತ್ರಗಳ್ನ ಪರಿಶೀಲ್ಸಿ ಇಂಧನನ ಜಮಾಕ್ಕೆ ತಕ್ಕಂಬದು. ಪೆಟ್ರೋಲ್ ಬಂಕ್‌ನ ಲೆಕ್ಕ ಮಾತ್ರ ಕಬ್ಬಿಣದ ಕಡ್ಲೆ ಕಾಯಿ. ಕಷ್ಟಪಟ್ಟ್ ಈ ಮೂರು ವಿಭಾಗಗಳ ಲೆಕ್ಕ ಪತ್ರಗಳ್ನ ಪರಿಶೀಲ್ಸಿ ದಾಖಲು ಮಾಡ್ತಿದ್ದೆ. ನಾನ್ ಅಲ್ಲೇ ಉಳ್ಕಂಬಕೆ ಕೋಂಬರೆ ಕೊಟ್ಟಿದ್ದೊ. ಅಚ್ಚ್‌ಕಟ್ಟಾದ ಊಟನೂ ಸಿಕ್ಕ್‌ತಿತ್ತ್. ಇವುಗಳ ವೆಚ್ಚ ಎಲ್ಲನೂ ಕಳ್ದ್ ರೂ.3,000=00 (ಮೂರ್ ಸಾವ್ರ) ತಿಂಗಳ ಸಂಬಳ ಸಿಕ್ಕ್‌ತಿತ್ತ್. ನನ್ನ ಖಾತೆನ ಮೂರ್ ವಿಭಾಗಗಳ ಕೌಂಟರ್ ಮ್ಯಾನೇಜರ್‌ಗ ಸಾಕಷ್ಟ್ ತಪ್ಪು ಲೆಕ್ಕದಾಖಲ್ ಮಾಡ್ತಿದ್ದೊ. ಅವರವರ ತಪ್ಪುಗಳ್ನ ಅವು ಅವುಕೆ ಎತ್ತಿತೋರ್ಸಿ, ತಪ್ಪಾಗದಂಗೆ ಎಚ್ಚರ್‌ಸ್‌ತಿದ್ದೆ. ಜೇನ್‌ತೆಗ್ದಂವ ಕೈನೆಕ್ಕಿದೆ'ತ ಹೇಳ್ವಂಗೆ ಉದ್ದಿಮೆಗಳ್‌ಲಿ ನಡೆದು ಸಾಮಾನ್ಯ ಆದರೆ ಜಾಸ್ತಿ ನೆಕ್ಕಿ ಹೊಲ್ಸ್ ಮಾಡಿಕಾಗದ್. ಕಡೆಗೆ ಎಲ್ಲರ ಹೆಸ್ರ್ ಹಾಳಾದೆ. ಹಂಗಾಗಿ ಬಹು ಎಚ್ಚರಂದ ನನ್ನ ಸೊಂತ ಸಂಸ್ಥೆಯಂಗೆ ಕೆಲ್ಸ ಮಾಡ್ತಿದ್ದೆ. ವಾರಕ್ಕೆ ಒಂದಿನ ರಜೆ ಇರ್ತಿತ್ತ್.

ಕಡೆ ಕಡೆಗೆ ಲೆಕ್ಕ ಪತ್ರಗಳ್ನ ದಾಖಲ್ ಮಾಡ್ದರ ಒಟ್ಟಿಗೆ ಒಳಗೂ ಹೊರಗೂ ಎಚ್ಚರ ವಹಿಸ್ತಿದ್ದೆ. ನನ್ನ ಪರಿಚಯ ಇರೊವು ನೋಡಿ ನೀನೊಬ್ಬ ಸಂಸ್ಥೆನ ಯಜಮಾನನೋತ ಪ್ರಶ್ನೆ ಮಾಡ್ತಿದ್ದೊ. ನನ್ನ ಎಲ್ಲಾ ಚಟುವಟಿಕೆಗಳ್ನ ಸಂಸ್ಥೆನ ನಾಕ್ ಮಂದಿ ಪಾಲ್‌ದಾರರ್ ನೋಡಿ ತುಂಬ ಮೆಚ್ಚ್‌ತ್ತಿದ್ದೊ. ಒಮ್ಮೆ ಸಂಸ್ಥೆನ ಹಿರಿಯ ಪಾಲ್‌ದಾರ ಶ್ರೀ ಪಾಲೆಕಂಡ ಮುದ್ದಪ್ಪನವು "ಬೆಳ್ಯಪ್ಪನವರೇ ಲೆಕ್ಕಪತ್ರಗಳ ಪರಿಶೀಲನೆಗೆ ಬೇರೆಯವರನ್ನಾದರೂ ನೇಮಕ ಮಾಡುವ, ನೀವು ಒಳಗೂ ಹೊರಗೂ ತಿರುಗಾಡಿಕೊಂಡು ಎಚ್ಚರ ವಹಿಸಿದರೆ ಸಾಕು"ತ್ತೇಳ್ವ ಸಲಹೆನ ತುಂಬ ಆತ್ಮೀಯತೆಂದ ಹೇಳ್ದೊ. ಈ ಮಾತ್‌ನ ನನ್ನ ಮೇಲೆ ಮಡ್ಗಿದ ನಂಬಿಕೆ ವಿಶ್ವಾಸಂದ ಹೇಳ್ದಾಗಿತ್ತ್. ಮಂಗಳೂರು ವಲಯದ ಆದಾಯ ತೆರಿಗೆ ಅಧಿಕಾರಿಗ ಮೂರ್ ತಿಂಗಕ್ಕೊಮ್ಮೆ ಮಡಿಕೇರಿಗೆ ಬಂದ್ ಸುದರ್ಶನದ ಅತಿಥಿಗೃಹಲಿ ಉಳ್ಕಂಡ್ ಸಂಸ್ಥೆನ ಲೆಕ್ಕ ಪರಿಶೋಧನೆ ಮಾಡ್ತಿದ್ದೊ. ನಾನ್ ಲೆಕ್ಕಪತ್ರಗಳೊಟ್ಟಿಗೆ ಸಂಬಂಧಿಸಿದ ವಕೀಲರೊಟ್ಟಿಗೆ ಸುದರ್ಶನಕ್ಕೆ ಹೋತಿದ್ದೆ. ಲೆಕ್ಕಲಿ ಎಲ್ಲಿನೂ ಕುಂದುಕೊರತೆ ಕಂಡತ್ಲೆ. ಸಂಸ್ಥೆನ ಮುಖ್ಯ ಮೇಲ್ವಿಚಾರಕರಾದ ಶ್ರೀ ಕೆ.ಕೆ. ಉತ್ತಯ್ಯನವರ ಗೈರುಹಾಜರ್‌ಲಿ ಎಲ್ಲಾ ಜವಾಬ್ದಾರಿಕೆನ ನಂಗೆ ವಹಿಸಿ ಬೇರೆ ಊರಿಗೆ ಹೋತಿದ್ದೊ. ಅವು ತಮಿಳ್‌ನಾಡ್, ಆಂಧ್ರಪ್ರದೇಶಗಳ್‌ಲಿ ಹೊಸ ಬಸ್ಸ್‌ಗಳ್ನ ತಕಂಬಕೆ ಮುಂಗಡ ಕೊಡಿಕೆ ಹೋತಿದ್ದೊ. ಕಂಪೆನಿನ ಎಲ್ಲಾ ಉದ್ಯೋಗಿಗ ಮತ್ತೆ ಕಾರ್ಮಿಕ ವರ್ಗದವು ನನ್ನನ ಗೌರವಂದ ನೋಡ್ತಿದ್ದೊ. ನಂಗೆ ಒಂದನೇ ವರ್ಗದ ಊಟ ಸಿಕ್ಕ್‌ತಿತ್ತ್. ನಾಕೇಳ್ದರ ಕೊಡ್ತಿದ್ದೊ. ಒಮ್ಮೆ ನನ್ನ ಕುಟ್ಟದ ಹಳೇ ಸಿನೇತ ಶ್ರೀ ಸಿ.ಬಿ. ಮುತ್ತಣ್ಣನವು ಉಂಬಕೆ ಈ ಹೊಟೇಲ್‌ಗೆ ಬಂದ್ ಉಂಡ್‌ಕಂಡಿರಕನ ನನ್ನನ ನೋಡಿ ಬೆಳ್ಯಪ್ಪನವರೇ ನಿಮಗೆ ಸಂದ ಸ್ಥಳ. ನೀವು ಇಲ್ಲಿಯೇ ಖಾಯಂ ಆಗಿ ಇರಬೇಕು"ತ ಕೆಮಿಮಾತ್ ಹೇಳಿ ಕುಸಿಪಟ್ಟೊ. ನಾನ್ ಹಂಗೆ ಸುಮಾರ್ ಎರಡ್ ವರ್ಷ ಮುಟ್ಟ ಸೇವೆ ಮಾಡಿ ಕೌಟುಂಬಿಕ

ತೊಂದರೆ ಇದ್ದದ್ದ್‌ಕೆ ಪ್ರಧಾನ ವ್ಯವಸ್ಥಾಪಕ ಶ್ರೀ ಕೆ.ಕೆ. ಉತ್ತಯ್ಯನವರೊಟ್ಟಿಗೆ ನಾನ್ ಹುದ್ದೆಗೆ ರಾಜಿನಾಮೆಕೊಟ್ಟನೆತ ಮನವಿ ಮಾಡ್ದೆ. ಆಗ ಅವು "ನೀವು ಸಂಸ್ಥೆ ಬಿಡುವುದಾದರೆ ಬೇರೊಬ್ಬ ವಕೀಲರ ಗುಮಾಸ್ತ ಮಹೇಶ ಎಂಬವನಿಗೆ ಎರಡು ತಿಂಗಳು ತರಬೇತಿ ಕೊಟ್ಟು ಹೋಗಬೇಕು"ತ ನನ್ನನ ಕೇಳಿಕಂಡೊ. ಹಂಗೇ ನಾನ್ ಶ್ರೀ ಮಹೇಶಂಗೆ ಎರ್ಡ್ ತಿಂಗ ತರಬೇತಿ ಕೊಟ್ಟ್ ಜಾಗ ಖಾಲಿ ಮಾಡ್ದೆ.

1985ರ ಫೆಬ್ರವರಿ–ಮಾರ್ಚ್ ತಿಂಗಳ್‌ಲಿ ಹಾಸನದ ಅರಸೀಕೆರೆಲಿ ಹೇಮಾವತಿ ಕಾಫಿ ಕ್ಯುರಿಂಗ್ ಕಂಪೆನಿ. ವ್ಯವಸ್ಥಾಪಕ ಶನಿವಾರಸಂತೆನ ನಿವಾಸಿ ಶ್ರೀ ಬಿ.ಕೆ. ಚಿಣ್ಣಪ್ಪನವು, ಮಡಿಕೇರಿಲಿ ನನ್ನನ ಭೇಟಿ ಮಾಡಿ ಕಾಫಿಬೋರ್ಡ್‌ನನ ಮೂಲಕ ಕಾಫಿ ಶೇಖರಣಾ ಮಳಿಗೆಯೊಂದರ್ನ ಸುರು ಮಾಡಿಕೆ ಪರವಾನಗಿ ಕೊಡ್ಸಿನೆತ ಹೇಳ್ದಕೆನಾನ್ ಮರಗೋಡ್‌ಲಿ ಕಾಫಿ ಶೇಖರಣಾ ಡಿಪ್ಪೋ ತೆರ್ದೆ. ಅಲ್ಲಿನ ನಿವಾಸಿ ಮಳ್ಳಂದಿರ ಶಿವಯ್ಯನವರ ರಸ್ತೆ ಕರೆಲಿದ್ದಮನೆನ ಬಾಡಿಗೆಗೆ ಗೊತ್ತುಮಾಡಿ ಡಿಪ್ಪೊ ತೆರ್ದೆ. ಕಂಪೆನಿಯವು ಸಾಕಷ್ಟ್ ಹಣ ಜಮಾ ಕೊಡ್ತಿದ್ದೊ. ನನ್ನ ಮಳಿಗೆಗೆ ವರ್ಷ ಒಂದರ ಸರಾಸರಿ 45–50ಲಾರಿ ಲೋಡು ಕಾಫಿ ಸಂಗ್ರಹ ಆಗ್ತಿತ್ತ್. ಒಂದ್ ಲಾರಿಲೋಡ್‌ತ್ತೇಳ್ರೆ 10–15ಟನ್. ಕಂಪೆನಿಯುವು ಸಮಯಕ್ಕೆ ಸರಿಯಾಗಿ ಲಾರಿ ಕಳ್‌ಸ್‌ತಿದ್ದೊ. ತಪ್ಪಿದಲ್ಲಿ ನಾನೇ ಸಿದ್ದಾಪುರಕ್ಕೆ ಹೋಗಿ ಲಾರಿಗಳ್ನ ಬಾಕೆ ಮಾಡ್ತಿದ್ದೆ. ಒಮ್ಮೆಮ್ಮೆ ನಾನ್ ಹಾಸನಕ್ಕೆ ಹೋಗಿ ಬಾತಿದ್ದೆ. ನಂಗೆ 50 ಕೆ.ಜಿ.ನ ಚೀಲವೊಂದಕ್ಕೆ ರೂ. 10=00 ಕಮಿಷನ್ ಸಿಕ್ಕ್‌ತಿತ್ತ್. ನಾನ್ ನನ್ನ ಬಲಮುರಿ ಮನೆಂದಲೇ ದಿನ ನಿತ್ಯ ಮರುಗೋಡಿಗೆ ಹೋಗಿ ಬಾತಿದ್ದೆ. ಒಂದು ಸತಿ 3–4 ವರ್ಷಗಳ ಲೆಕ್ಕ ಪರಿಶೋಶನೆನ ಬೆಂಗಳೂರ್‌ನ ಕಾಫಿ ಬೋರ್ಡ್‌ನ ಮುಖ್ಯ ಕಚೇರಿನ ಇಬ್ಬರು ಲೆಕ್ಕ ಪರಿಶೋಧಕರಾದ ಶ್ರೀ ಶ್ರೀನಿವಾಸನ್ ಕಚೇರಿನ ಮತ್ತೆ ಶೇಷನ್ ವರೀ ಅರ್ಧ ದಿನಲಿ ತಪಾಸಣೆ ಮಾಡಿ ಹೋದೊ. ನನ್ನ ಲೆಕ್ಕಚಾರನ

ನೋಡ್ದ ಅವು ತುಂಬ ಕುಸಿಪಟ್ಟೊ. ನಾನ್ ಒಂದೊಂದು ಸತಿ ಬೆಂಗಳೂರ್‌ನ ಅವರ ವ್ಯಾಪಾರಲಿ ಪ್ರಾಮಾಣಿಕತ್‌ನೇ ಮುಖ್ಯ. ಪ್ರಾಮಾಣಿಕ ಆಗಿ ಸೇವೆ ಮಾಡ್ತಾ ಒಳೊ. ಯಾವ ಅಧಿಕಾರಿಗಳಿಗೂ ತಲೆ ಬಾಗೊಕುತ್ತಿಲ್ಲೆ. ಕಾಫಿ ಬೆಳೆಗಾರರಿಗೂ ನನ್ನ ಮೇಲೆ ತುಂಬ ವಿಶ್ವಾಸ ಇತ್ತ್. ಮಡಿಕೇರಿನ ಕಾಫಿ ಬೋರ್ಡ್‌ನ ಅಧಿಕಾರಿ (ACMO)ಶ್ರೀ ಮಹಾದೇವಯ್ಯನವರ ಪ್ರಶಂಸೆಗೆ ಒಳಗಾದೆ. ಒಂದ್ ಸತಿ ಕಾಫಿ ಬೋರ್ಡ್‌ನ ಸದಸ್ಯರಾಗಿದ್ದ ಶ್ರೀ ಅತ್ತಿಕಟ್ಟೆ ಜಗನ್ನಾಥನವು ಕಾಫಿ ಬೋರ್ಡ್‌ನ ಸಭೆಲಿ ನನ್ನ ಕಾಫಿ ಅಕೌಂಟ್‌ನ ಮಾಹಿತಿನ ಮೈಸೂರ್‌ನ ಕಾಫಿ ಬೋರ್ಡ್ ಆಫೀಸ್‌ಗೆ ಅನಿರೀಕ್ಷಿತಾಗಿ ಹೋಕಾಬಾಹಿತ್ತ್. ಹಂಗೇ ಕೆಲವು ವಿಷಯಗಳ್ನ ಪ್ರಸ್ತಾಪಿಸಿ ಮಾತಾಡಿ ಹಿಂದಕ್ಕೆ ಬಾತಿದ್ದೆ. ಆಗ ಸದ್ರಿ ಜಿಲ್ಲಾ ಕಾಫಿ ಬೋರ್ಡ್ ಅಧಿಕಾರಿ ಇದ್ದಕ್ಕಿದ್ದಂಗೆ "ಮರಗೋಡು ಕಾಫಿ ಡಿಪ್ಪೋಲಿ ಒಬ್ಬ ಮಾಸ್ಟ್ರ ಮ್ಯಾನೇಜರ್ ಇರುವರಂತೆ, ಅವರ ಚೆಕ್ಕ್‌ಗಳಿಗೆ ಮಡಿಕೇರಿಯ ಎ.ಸಿ.ಯಂ.ಒ. ಶ್ರೀ ಮಹದೇವಯ್ಯನವರು ಕಣ್ಣು ಮುಚ್ಚಿಕೊಂಡು ರುಜುಮಾಡಿಕೊಡುವರರಂತೆ"ತ ಹೇಳಕನ, ಆ ಮಾಸ್ಟೇ ನಾನ್‌ತ ಹೇಳ್ದೆ. ಆಗ ಅವುಕೆ ಆಶ್ಚರ್ಯ ಆಗಿ ನನ್ನನೇ ನೋಡಿ ತಬ್ಬಿಬಾದೊ. ಪುನಾ ಒಮ್ಮೆ ನನ್ನ ಕೈಕುಲುಕಿದೊ. ಕೊಡಗ್‌ಲಿ ಹೇಮಾವತಿ ಕಂಪೆನಿವತಿಂದ 13 ಡಿಪ್ಪೋಗ ಇದ್ದೊ. ಕಾಫಿ ಬೋರ್ಡ್‌ನವುಕೆ ನನ್ನಲಿ ಇದ್ದಂಗೆ ಬೇರೆ ಯಾರ ಮೇಲೆನೂ ವಿಶ್ವಾಸ ಇತ್ಲೆ. 1989–90ರ ಸಾಲ್‌ಲಿ ಕಾಫಿ ಬೋರ್ಡ್ ಬೋನಸ್ ಮಂಜೂರ್ ಮಾಡಿತ್ತ್. ಆದರೆ ಹೇಮಾವತಿ ಕಾಫಿ ಕಂಪೆನಿಯವುಕೆ ಮಂಜೂರ್ ಮಾಡಿತ್ತ್‌ಲೆ. ಆಗ ನಾನ್ ಬೇರೆ ನಮ್ಮ ಬೇರೆಮ್ಯಾನೇಜರ್‌ಗಳ್ನ ಸಂಪರ್ಕಮಾಡಿ ಬೆಂಗಳೂರಿಗೆ ಹೋಗಿ ವಿಚಾರ್ಸನೋತ ಹೇಳ್ದನ ಯಾರೂ ಸಹಕಾರ ಕೊಟ್ಟತ್ತ್‌ಲೆ. ಒಂದಿನ ನಾನೊಬ್ಬನೇ ಬೆಂಗಳೂರಿಗೆ ಹೋಗಿ ಕಾಫಿ ಬೋರ್ಡ್‌ನ ಉಪಾಧ್ಯಕ್ಷ ಅನಿಲ್‌ಕುಮಾರ್ ಭಂಡಾರಿಯವರ ಮನೆಗೇ

ಹೋಗಿ ಹೇಮಾವತಿ ಕಾಫಿ ಕಂಪೆನಿಯ ಬೋನಸ್ಸ್‌ನ ತಡೆ ಹಿಡ್ದರ ಕಾರಣಕೇಳ್ದೆ. ಆಗ ಅವು ಕಂಪೆನಿಲಿ ಸೊಲ್ಪಲೋಪ ಇದ್ದರ್‌ಂದ ಸೋಲ್ಪ ಸಮಯ ಮುಂಚೆ ನಿಲ್ಸಿಯೊಳೊ. ಆದರೆ ಮುಂದೆನ ಮಾರ್ಕೆಟಿಂಗ್ ಮೀಟಿಂಗ್‌ಲಿ ತೀರ್ಮಾನ ತಕಂಡವೆತ ಹೇಳ್ದೊ. ಆಗ ನಾನ್ ಕಾಫಿ ಸರಬರಾಜು ಮಾಡ್ದ ಕಾಫಿ ಬೋರ್ಡಿಗೆ ಹೇಳ್‌ದೆ ತಡೆ ಹಿಡಿಯೊದು ಸರಿಯಲ್ಲ. ಬೇರೆ ಕಂಪೆನಿಯವು ಬೋನಸ್ಸ್ ಮಾಡಿವೆ. ನಮಿಗೆ ಮುಜುಗರ ಆದೆ. ಹಂಗಾಗಿ ಕೂಡ್ಲೆ ಮಂಜೂರ್ ಮಾಡೊಕುತ ಹೇಳಿ ಹಿಂದಕೆ ಬಂದೆ. ಅದೇ ಇರ್‌ಳ್ ಅವು ನನ್ನ ಮನೆಗೆ ಫೋನ್ ಮಾಡಿ ಬೇಜರ ಮಾಡ್‌ಬೇಡಿ, ಕ್ರಮ ತಕಂಡವೆತ ಹೇಳ್ದೊ. ಮಾರ್ನೆ ದಿನ ಮಡಿಕೇರಿನ ಎ.ಸಿ.ಯಂ.ಓರವರ್‍ನ ಭೇಟಿ ಮಾಡಿ ವಿಷಯ ತಿಳ್ಸಿದೆ. ಕೂಡ್ಲೆ ಶ್ರೀ ಮಹಾದೇವಯ್ಯನವು ಬೆಂಗಳೂರ್‌ನ ಮುಖ್ಯ ಕಚೇರಿಗೆ ಫೋನ್ ಮಾಡಿ ವಿಷಯ ಮನವರಿಕೆ ಮಾಡಕನ ಮರಗೋಡು ಕಾಫಿ ಡಿಪ್ಪೋ ಮ್ಯಾನೇಜರ್ ಅವರ ಕಾಫಿ ಬೆಳೆಗಾರರ್‌ಗೆ 32 ಪೋಯಿಂಟ್ ಲೆಕ್ಕಾಚಾರಲಿ ಬೋನಸ್ಸ್ ಕೊಡುವಂಗೆ ಮಾಹಿತಿನಕೊಟ್ಟ ಪ್ರಕಾರ, ನಾನ್ ನನ್ನ ಗಿರಾಕಿಗಳಿಗೆ ಬೋನಸ್ಸ್ ಕೊಡುವಂಗಾತ್. ಉಳ್ದ ಡಿಪ್ಪೋದವು ಸುಮ್ಮನೆ ಕೂರುವಂಗಾತ್. ಇದ್ಕೆಲ್ಲಾ ನನ್ನ ಪ್ರಾಮಾಣಿಕತನ ಮತ್ತೆ ಧೈರ್ಯನೇ ಕಾರಣ. ಕೆಲವ್ ವರ್ಷ ಕಳ್ದಂಗೆ ಹೇಮಾವತಿ ಕಂಪೆನಿಯ ಷೇರ್‌ದಾರರ್‌ಲಿ ಒಡಕು ಆಗಿ ಹೇಮಾವತಿ ಕಂಪೆನಿ ತನ್ನ ಕಾಫಿ ವ್ಯವಹಾರನ ನಿಲ್ಸಿತ್. ಒಂದಿನ ಬೆಂಗಳೂರ್‌ಗೆ ಹೋಗಿ ಬೇರೆ ಆಸ್ಪಿನ್ ವಾಲಾ ಕಂಪೆನಿಲಿ ನಂಗೆ ಏಜೆನ್ಸಿ ಕೊಡಿಕೆ ಸಿದ್ಧತೆ ಆಗ್‌ತಿದ್ದಂಗೆ ಕಾಫಿ ಬೆಳೆಗಾರರ ಹೋರಾಟ ಆಕಾಶ ಮುಟ್ಟಿ, ಬೆಂಗಳೂರ್‌ನ ಮುಖ್ಯ ಕಚೇರಿ ಮುಂದೆ ಧರಣಿ ನಡ್ಸಿ ಮುಟ್ಟುಗೋಲು ಹಾಕುವಂಗೆ ಮಾಡ್ದೊ. ಅದೇ ದಿನ ನಾನ್ ಬೆಂಗಳೂರು ಮುಖ್ಯ ಕಚೇರಿಲಿ ಹಾಜರಿದ್ದೆ. ಹಂಗೇ ಕಾಫಿ ಬೋರ್ಡ್‌ನ ಮಾರ್ಕೆಟಿಂಗ್ ಶಾಖೆನೂ ಮುಚ್ಚಿಹೋತು.

ಈ ನಡುಲಿ ಕಾಫಿ ಉದ್ದಿಮೆಲಿ ಇರಕನ ಒಂದ್ ಲಂಚದ (ಭ್ರಷ್ಟಾಚಾರ) ಹಗರಣ ನನ್ನ ಮುಂದೆ ಭೂತದಂಗೆ ಬಂದ್ ನಿಂತದ್ದರ ಬಗ್ಗೆ ಸ್ವಾರಸ್ಯಕರ ಘಟನೆನ ಇಲ್ಲಿ ಗ್ಯಾನಮಾಡಿಕಾದೆ. ಒಂದಿನ ಸುಮಾರ್ ಪೂರ್ವಾಹ್ನ 10–30ರ ಹೊತ್ತ್‌ಲಿ ದಿಢೀರಾಗಿ ನಾಕ್ ಜನ ಕಾಫಿ ಬೋರ್ಡ್‌ನ ಅಧಿಕಾರಿಗ ನನ್ನ ಕಾಫಿ ಡಿಪ್ಪೊಗೆ ಬಂದೊ.ನಾನ್ ಸ್ವಾಗತಿಸಿದೆ ಅವರ್‌ಲಿ ಒಬ್ಬ ಮೇಲಾಧಿಕಾರಿ ನನ್ನ ಆಸನಲಿ ಕುದ್ದ್‌ಕಂಡೊ. ಬೇರೆಯವು ಆಲ್ಲಿದ್ದ ಕುರ್ಚಿ, ಬೆಂಚಿಗಳ್‌ಲಿ ಕುದ್ದೊ. ತನಿಖೆಗೆ ಬಂದವುತಗೊತ್ತಾಗಿ ನನ್ನ ಲೆಕ್ಕಪುಸ್ತಕನ ಅಧಿಕಾರಿ ಮುಂದೆ ಮಡ್ಗಿದೆ. ಸಾಕಷ್ಟ್ ತನಿಖೆ ಮಾಡ್ದೊ. ಎಲ್ಲಿಯೂ ಕುಂದ್ ಕೊರತೆಗ ಕಂಡ್ ಬಾತ್ಲೆ. ಉಳ್ದವು ಕಾಫಿ ಚೀಲಗಳ ಕಡೆಗೆ ದೃಷ್ಟಿಸಿ ಅಳತೆ ಕಡೆ ನೋಡ್ದೊ. ಎಲ್ಲೋ ಒಂದೆರ್ಡ್ ಚೀಲಗಳ್‌ಲಿ. ಅಲ್ಪಸೊಲ್ಪತ್ತೇಳ್ರೆ ನೂರಿನ್ನೂರ್ ಗ್ರಾಂನಷ್ಟ್ ಹೆಚ್ಚ್ ಕಂಡ್ ಬಾತ್. ಸೊಲ್ಪ ಜಾಸ್ತಿ ಉಟ್ಟಲ, ಯಾಕೆತ ಕೇಳ್ದೊ. ಆಗಸ್ಟೆ 9.30ರ ಹೊತ್ತ್‌ಗೆ ಮರಗೋಡು ಪದವಿ ಪೂರ್ವ ಕಾಲೇಜ್‌ನವು ಬೆಳ್ದ ಕಾಫಿನ ಉಪನ್ಯಾಸಕರ ಮಕ್ಕಳೊಟ್ಟಿಗೆ ಬಂದ್ ನನ್ನ ಮಳಿಗೆಗೆ ಮಾರಾಟ ಮಾಡಿದ್ದೊ. ಆಗ ಮಕ್ಕ ಕೆಳಗೆ ಬಿದ್ದ ಚೂರು ಪಾರ್ ಕಾಫಿನ ಹೆರ್ಕಿ ನಂಗೆ ಗೊತ್ತಿಲ್ಲದೆ ಹಾಕಿರ್‌ವೊತ ಹೇಳ್ದೆ. ಬಾರ್ ಮೂಟೆಗಳ್ನ ನೋಡಿತ ಹೇಳ್ದೆ. ನೋಡಕನ ಎಲ್ಲನೂ ಸರಿಯಾಗೇ ಇತ್ತ್. ಯಾವುದೇ ತಪ್ಪು ಕಂಡ್ ಬಾರದೆ ಸುಮ್ಮನಾಗಿ ನಾಕ್ ಜನರೂ ಕುದ್ದ ಜಾಗಂದ ಅಲ್ಲಾಡ್‌ತ್‌ಲೆ.ಹಂಗೇ ಸುಮಾರ್ ಮಧ್ಯಾಹ್ನ ಹನ್ನೆರಡರ ಸಮಯ ಆತ್. ಅವರ ಪೈಕಿ ಒಬ್ಬ ನಂಗೆ ಪರಿಚಯ ಇದ್ದ ಶ್ರೀ ಮಂಜಾಂದಿರ ಕಾರ್ಯಪ್ಪ ಮಡಿಕೇರಿ ವಲಯದ ಕಾಫಿ ಇನ್ಸ್‌ಪೆಕ್ಟರ್ ಅವರ್ನ ಹೊರಗೆ ಕರ್ದ್ ಎಂತಕೆ ಹಿಂಗೆ ಕುದ್ದೊಳದ್‌ತ ಕೇಳ್ದೆ. ಅವು ಹಣದ ಬೇಡಿಕೆಗೆ ಕುದ್ದದ್‌ತ ಹೇಳ್ದೊ. ಆಗ ನಾನ್ ನನ್ನ ಹತ್ರ ಅವುಕೆ ಕೊಡಿಕೆ ಹಣ ಇಲ್ಲೆತ ಹೇಳ್ದೆ. ಕಾಫಿ ಬೋರ್ಡ್‌ನ ಹಣ ಉಟ್ಟು. ಕಾಫಿಬೋರ್ಡ್ ಹಣಂದ

ಲಂಚ ಕೊಟ್ಟರೆ ಲಂಚ ಕೊಟ್ಟ ಹಣತ ಬರೆಕಾದೆ. ಆದರೆ ಅದ್ ತಪ್ಪು. ಹಂಗೆ ಅವುಕೆ ಹೇಳಿತ ಹೇಳ್ದೆ. ಹಂಗೆ ಹೇಳಿಕೆ ಅವುಕೆ ಆಗದೆ ಹಂಗೇ ಕುದ್ದೊ. ನಂಗೂ ಹೊಟ್ಟೆ ಚುರ್‌ತ ಆತ್. ಪುನಾ ಕಾರ್ಯಪ್ಪನವು ಹೊರಗೆ ಕರ್ದೆ. ನನ್ನ ಹತ್ರ ಸೊಂತ ಹಣ ಇಲ್ಲೆ. ಇದರ್ಲೇ ಸುಧಾರ್ಸಿಕಣಿತ ಹೇಳ್ದೆ. ಕಡೆಗೆ ಅವೇ ಎದ್ದ್ ಜಾಗ ಖಾಲಿ ಮಾಡ್ದೊ. ಅವರ್‌ಲಿ ಒಳ್ಳ ನಡವಳಿಕೆ ಇದ್ದಿದ್ದರೆ ಕಾಫಿನಾರ್ ತರ್ಸಿ ಕೊಡ್ತಿದ್ದೆ. ಅದ್ಕೆನೂ ಅವಕಾಶ ಮಾಡಿಕೊಟ್ಟತ್ಲೆ.

ಮತ್ತೊಂದ್ ದಿನ ನಾನ್ ಕಾಫಿ ಡಿಪ್ಪೊಂದ ಕಾಫಿ ಕ್ಯೂರಿಂಗ್ ವರ್ಕ್ಸ್‌ಗೆ ಕಾಫಿ ಕಳ್ಸಿಕೆ ಸಿದ್ದಾಪುರಂದ ಲಾರಿಗಳ್ನ ಬಾಕೆ ಹೇಳಿಕೆತ ಮರಗೋಡು ಸಿದ್ದಾಪುರ ರಸ್ತೆಲಿ ಹೋಗುವ ಬಸ್‌ನ ಮುಂದೆನ ಬಾಗ್ಲಾಂದ ಬಸ್ಸ್ ಹತ್ತಿದೆ. ಆಗ ಬಸ್ಸ್‌ನ ಹಿಂದೆನ ಬಾಗ್ಲಾಂದ ವೀರಾಜಪೇಟೆ ವಲಯದ ಕಾಫಿಬೋರ್ಡ್ ಅಧಿಕಾರಿ ಇಳ್ತ್. ಹಂಗೆ ಇಳ್ದ್ ನನ್ನ ಡಿಪ್ಪೋಗೆ ಹೋತ್. ಆಗ ನನ್ನ ಸಹಾಯಕ ಅಲ್ಲಿತ್ತ್. ಅವನೊಟ್ಟಿಗೆ ನನ್ನನ ಕೇಳಕನ ನಡ್ದ ಸಂಗತಿನ ಹೇಳ್ತ್. ಆಗ ಆ ಅಧಿಕಾರಿ ನನ್ನ ಮೇಲೆ ಸಿಟ್ಟಾಗಿ ಅಂದ್ ಬರಿಗೈಲಿ ಹೋದ್ದರ್‌ಂದ ಮಾರನೆ ದಿನ ವೀರಾಜಪೇಟೆಂದ ಫೋನ್ ಮಾಡಿ ನೀವು ನೆನ್ನೆ ಡಿಪ್ಪೋಲಿ ಹಾಜರಿತ್ತ್‌ಲೆತ ನಿಮ್ಮ ಮೇಲೆ ಕೇಸ್ ದಾಖಲೆ ಮಾಡಿನೆತ ಹೇಳ್ತ್. ಆಗ ನಾನೂ ನಿಮ್ಮ ಲಂಚಾವತಾರನ ಬಯಲ್ ಮಾಡ್ನೆತ ತಿರ್‌ಗಿ ಹೇಳ್ದೆ. ಅಲ್ಲಿಂದ ಅಂವನ ಸದ್ದ್ ಅಡಂಗಿತ್. ಇದ್ ನನ್ನ ಕಾಫಿ ವ್ಯಾಪಾರದ ಸಮಯಲಿ ನಡ್ದ ಭ್ರಷ್ಟಾಚಾರದ ಅನುಭವ. ಇಂಥಾ ನೀಚರ್‌ನ ನಾಚಿಕೆ ಇಲ್ಲದ ಕೋಚರ್‌ತ ಕರ್ದರೂ ತಪ್ಪಾಕಿಲೆ.

ಹೇಮಾವತಿ ಕಾಫಿ ಕಂಪೆನಿ ತನ್ನ ವ್ಯಾಪಾರನ ನಿಲ್ಸಿದ ಮೇಲೆ ನಾನ್ ಮನೆಲೇ ಆರಾಮಾಗಿದ್ದೆ. ಆಗ ಒಂದಿನ ನನ್ನ ಮನೆಗೆ ಪೂರ್ವಾಹ್ನ 9.30ರ ಹೊತ್ತಿಗೆ ಕೊಡಗ್‌ಲಿ ಹಿಂದೆ ಸಹಕಾರ ಸಂಘಗಳ ಡೆಪ್ಯೂಟಿ ಸೆಕ್ರೆಟರಿ ಆಗಿ ಸೇವೆ ಮಾಡಿ ನಿವೃತ್ತಿ ಆದ ಶ್ರೀ ಮಲ್ಲೇಂಗಡ

ಗಣಪತಿಯವು ಬಂದೊ. ನೀವು ಮರಗೋಡುನ ಹೇಮಾವತಿ ಕಂಪೆನಿಲಿ ಸೇವೆ ಮಾಡ್ದವುತಾನೆತ ಕೇಳ್ದೊ.ನಾನ್ ಅದ್ಕೆ ಸರಿಯಾದ ಉತ್ತರ ಕೊಟ್ಟೆ. ಆಗ ಅವು ನೀವು ನಮ್ಮ ಮೈಸೂರ್‌ನ ಸುಬ್ಬಯ್ಯ ಅಂಡ್ ಸನ್ಸ್ ಕಾಫಿ ಕಂಪೆನಿಗೆ ಕಾಫಿ ಕಳ್ಸಿಕೊಡಿಕೆ ಒಪ್ಪಿಕಂಬಕುತ ನನ್ನನ ವಿನಂತಿ ಮಾಡಿಕಂಡೊ. ಇವು ನಿವೃತ್ತಿ ಆದ ಮೇಲೆ ಮೈಸೂರ್‌ನ ಸುಬ್ಬಯ್ಯ ಅಂಡ್ ಸನ್ಸ್ ಕಾಫಿ ವರ್ಕ್ಸ್‌ನ ಮ್ಯಾನೇಜರ್ ಆಗಿ ಸೇವೆ ಸಲ್ಲಿಸಿದ್ದೊ. ಹಂಗೆ ಅವರ ಕೋರಿಕೆ ಪ್ರಕಾರ ಪುನಾ ಮರಗೋಡ್‌ನ ಅದೇ ಮಳಿಗೆಲಿ ವ್ಯಾಪಾರ ಸುರುಮಾಡ್ದೆ. ಹಿಂಗೆ ಅವೇ ನನ್ನನ ಹುಡ್ಕಿಕಂಡ್. ಮನೆಗೇ ಬಂದ್ ಕೇಳಿಕಂಬಕೆ ಕಾರಣ ಏನಿದ್ದು ? ನಂಬಿಕೆ ಮತ್ತೆ ವಿಶ್ವಾಸನೇ ಕಾರಣ. ಅದೃಷ್ಟ ಬಲಿಯಕನ ಅದೇ ನಮ್ಮ ಹುಡ್ಕಿಕಂಡ್ ಬಂದದೆತ್ತೇಳ್ದುಕೆ ಇದೊಂದ್ ಸಣ್ಣ ಉದಾಹರಣೆ. ನಾನ್ 1993–94ರವರೆಗೆ ಕಾಫಿ ವ್ಯಾಪಾರ ಮಾಡೊಳೆ. ಸಾಕಾಷ್ಟ್ ಹಣ ಒದಗಿಸಿ. ಕೊಡ್ತಿದ್ದೊ ಮೈಸೂರಿಗೆ ಹೋದರೆ ಕಾಫಿ ಕಂಪೆನಿನ ಮಾಲೀಕ ಶ್ರೀ ಬಿ.ಎಸ್. ಬೋಪಯ್ಯನವು ತಮ್ಮ ಅಚ್ಚುಮೆಚ್ಚಿನ ಪ್ರೀತಿ ಇತ್ತ್. ನಾವ್ ಸೂರುಗೆ ಗೌರವ ಕೊಟ್ಟರೆ ಹೆಂಗೆ ಹೇಮಾವತಿ ಕಾಫಿ ಕಂಪೆನಿಗೆ ಕಳ್‌ಸ್‌ತಿದ್ದೆನೊ ಹಂಗೇ ಮೈಸೂರ್‌ನ ಕಾಫಿ ವರ್ಕ್ಸ್‌ಗೆ ಕಫಿನ ಕಳ್‌ಸ್‌ತ್ತಿದ್ದೆ. ದಿನ ಕಳ್ದಂಗೆ ಖಾಸಗಿಯಿಂದ ತೆರೆದ (Open)ಮಾರ್ಕೆಟ್ ಸುರಾತ್. ತೆರೆದ ಮಾರ್ಕೆಟ್‌ಲೂ ಒಂದೆರ್ಡ್ ವರ್ಷ ಖಾಸಗಿಯಾಗಿ ಕಾಫಿ ವ್ಯಾಪಾರ ಮಾಡ್ದೆ. ಕಾಫಿ ಬೋರ್ಡ್ ಪ್ರಾಮಾಣಿಕತನಂದ ಕೆಲ್ಸ ಮಾಡ್‌ತ್ತಿದ್ದರೆ ಹಾಗೂ ಕಾಫಿಬೋರ್ಡ್ ಗುಣಮಟ್ಟದ ಕಾಫಿದರನ ಬೆಳೆಗಾರರಿಗೆ ಮೋಸಮಾಡಿ, ಕೆಳದರ್ಜೆನ ದರನ ಕೊಡುದರೊಟ್ಟಿಗೆ ನೆಪಕ್ಕೆ ಒಂದಿಷ್ಟ್ ಬೋನಸ್ ರೂಪಲಿ ಕಾಫಿ ಬೆಳೆಗಾರರಿಗೆ ಕೊಟ್ಟ್ ಸಮಜಾಯಿಸ್‌ತಿತ್ತ್.

ಈ ರೀತಿಯ ಅನ್ಯಾಯಕ್ಕಾಗಿ ಬೆಳೆಗಾರರ್ ಹೋರಾಟ ಮಾಡ್ದು ಅನಿವಾರ್ಯ ಆತ್. ಈಗ ಖಾಸಗಿ ವಲಯಲಿ ಕಾಫಿ

ತಕಂಬದ್‌ರ್‌ಂದ ಲಾಭ ದಲ್ಲಾಳಿಗಳ ಪಾಲಾತ್. ಈಗ ಊರಿಗೊಂದ್ ಬೆಲೆ. ನಾನ್ ಸುಮಾರ್ 15–16 ವರ್ಷ ಮುಟ್ಟ ಕಾಫಿ ಉದ್ದಿಮೆಲಿ ಕೆಲ್ಸ ಮಾಡ್ದ ಅನುಭವಿ. ನನ್ನೊಟ್ಟಿಗೆ ಕಾಫಿ ವ್ಯಾಪಾರ ಮಾಡ್‌ತ್ತಿದ್ದ ಕೆಲವ್ ನಷ್ಟ್ ತುಂಬಿಕಾಗದೆ ಊರ್ ಬುಟ್ಟೊಳೊ. ಆತ್ಮಹತ್ಯೆ ಮಾಡ್ಕಂಡವೂ ಒಳೊ. ನಷ್ಟ ಆಗುವ ಸಂದರ್ಭನೇ ಇಲ್ಲೆ. ಅದ್ಕೆ ಅವ್ರ ಅಜಾಗ್ರತೆ ಮತ್ತೆ ಹಣ ದುರುಪಯೋಗನೇ ಮೂಲ. ಕಾಫಿ ಬೋರ್ಡ್‌ನ ಹಣನ ಅವರ ಸೊಂತಕ್ಕೆ ಉಪಯೋಗಿಸಿ ತಮ್ಮ ಬೇಳೆ ಬೇಸಿಕಂಬಕೆ ಹೊರ್ಟದೇ ಕಾರಣತ ಹೇಳಿಕೆ ತಪ್ಪಾಕಿಲೆ.

ನಾನ್ ಕಾಫಿ ವ್ಯಾಪಾರ ಬುಡುತ ಅಭಿಪ್ರಾಯಲಿ ಇತ್ಲೆ. ಆದರೆ ದುರ್ದೈವಕ್ಕೆ ನನ್ನ ಸಣ್ಣ ಮಂಜ ಶಿವರಾನಂಗೆ ಕಾಯ್ಲು ಆಗಿ ಮಂಗಳೂರ್ ಆಸ್ಪತ್ರೆಲಿ 27–28 ದಿನಗಳ ಮುಟ್ಟ ಮದ್ದ್ ಕೊಡ್ಸಿರೊ ಗುಣ ಆಗದೆ ತೀರಿಹೋತು. ಆಗ ನಾನ್ ಅವನೊಟ್ಟಿಗೆ ಹೆಚ್ಚ್ ಸಮಯ ಮಂಗಳೂರ್‌ಲಿ ಇರಕಾಗಿತ್ತ್. ಹಂಗಾಗಿ ವ್ಯಾಪಾರನ ಕೈಬುಟ್ಟೆ. ಶಿವರಾಮ 16ವರ್ಷಗಳ ಮುಟ್ಟ ಸುಳ್ಯದ ಕೆ.ವಿ.ಜಿ. ವಿದ್ಯಾಸಂಸ್ಥೆಲಿ ಸೇವೆ ಮಾಡಿಟ್ಟು. ಕಾಫಿ ವ್ಯಾಪಾರ ನನ್ನ ಮನ್ಸ್‌ಗೆ ತುಂಬಾ ಕುಸಿಕೊಟ್ಟಟು. "ವ್ಯಾಪಾರ ನಿಮಿಷ, ವ್ಯವಸಾಯ ವರ್ಷ"ತ್ತೇಳ್ವ ಮಾತ್‌ನ ಅನುಭವನೂ ನಂಗಾತ್.

ಒಂದ್ ಮಾತುಟ್ಟು ಆರಂಭ ಸೂರೂಲಿ ಕಷ್ಟ. ವ್ಯಾಪಾರ ನಡುಲಿ ಕಷ್ಟ. ಉದ್ಯೋಗ ಕಡೆಲಿ ಕಷ್ಟ. ಹೆಂಗೆತ್ತೇಳ್ರೆ ಬತ್ತದ ಬೆಳೆ ಕೊಯ್ದ್ 5–6 ತಿಂಗ ಬಂಜರಾಗಿ ಬಿದ್ದ್, ಹುಲ್ಲು ಕಳೆ ಬೆಳ್ದ್ ದನಕರ್‌ಗ ಮೆಟ್ಟಿ ಗಟ್ಟಿಯಾಗಿದ್ದ ಭೂಮಿನ ಹೂಡಿ ಹದಮಾಡಿಕೆ ಕಷ್ಟ್ ಆದೆ. ಹದ ಆದ ಮೇಲೆ ಬೇಸಾಯ ಮಾಡ್ದು ಸುಲಾಭ. ಹಂಗಾಗಿ ಆರಂಭ (ವ್ಯವಸಾಯ) ಸುರಲಿಕಷ್ಟ. ವ್ಯಾಪಾರ ಸುರೂಲಿ ಕೈಹಿಡ್ದದೆ. ಕುಸಿ ಆದೆ. ಜೋಬುತುಂಬ ದುಡ್ಡಿದ್ದದೆ. ನಡುಲಿ ಗಿರಾಕಿಗ ಸಾಲ ಕೇಳಿಕೆ ಸುರು ಮಾಡಿವೆ. ಆಗ ಸಾಲ ಕೊಡದೆ ನಿರ್ಮಾತ್ತಿ ಇಲ್ಲೆ. ಮತ್ತೆ

ಸಾಲವಸೂಲಿ ಮಾಡ್ದು ಕಷ್ಟ. ಇದ್ ಸತ್ಯ. ಹೆಂಗೆತ್ತೇಳ್ರೆ ಸರ್ಕಾರಿ ಉದ್ಯೋಗಸ್ಥರ್ ನಿವೃತ್ತಿ ಆಕೆ 2–3 ವರ್ಷ ಇರಕನ ಭ್ರಷ್ಟಾಚಾರ, ಕಳಪೆ ಕೆಲ್ಸ, ಕಾರಣ ಇಲ್ಲದೆ ಗೈರುಹಾಜರಿ, ದುರುಪಯೋಗ ಹಿಂಗೆ ಬೇರೆ ಬೇರೆ ಅನೈತಿಕ ಚಟುವಟಿಕೆಗಳಿಗೆ ಧುಮುಕಿರೆ ಅಂತವುಕೆ ನಿವೃತ್ತ ವೇತನನೇ ಸಿಕ್ಕುದುಲೆ. ಆದ್ದರ್‌ಂದ ಸರಕಾರಿ ನೌಕರರ್ ನಿವೃತ್ತಿ ಸಮಯಲಿ ಜಾಗ್ರತೆಂದ ಸೇವೆ ಮಾಡೊಕು. ಹಂಗಾಗಿ ಉದ್ಯೋಗ ಕಡೆಗೆ ಕಷ್ಟ. ನನ್ನ ಅನುಭವಲಿ ಈ ಮೂರ್ ವೃತ್ತಿಗಳ್‌ಲಿ ವ್ಯಾಪಾರ ಜೀವನಕ್ಕೆ ಒಳ್ಳೆದ್. ಯಾಕೆತ್ತೇಳ್ರೆ ಕೈಲಿ ಯಾಗೊಳು ದುಡ್ಡ್‌ದ್ ವ್ಯವಹಾರ ಆತಿದ್ದದೆ. ಪ್ರವಾಸ ಹೋದಂಗೆ, ಊರೂರ್ ಸುತ್ತಾಡಿ, ಊರ್‌ನ ಸೌಂದರ್ಯ ಮತ್ತೆ ಜನರ ಸಂಪರ್ಕ ಇದ್ದದೆ. ಸಮಯ ಸುಮ್ಮನೆ ಹಾಳಾದುಲೆ. ನಾನ್ ಈ ಮೇಲ್ಕಂಡ ಮೂರ್ ವೃತ್ತಿಗಳ ಅನುಭವಗಳ್ನ ಸಾರಾಸಗಟಾಗಿ ಧೈರಂದ ಎದ್ರ್‌ಸಿ ಮನ್ಸ್‌ಗೆದ್ದ್ ಜೀವನ ಮಾಡ್ತಾ ಒಳೆ. ಇದ್ಕೆಲ್ಲಾ ದೇವ್ರ ಅನುಗ್ರಹವೇ ಮೂಲ. ಒಟ್ಟಿಗೆ ಧೈರಂದ ಮುನ್ನುಗ್ಗಿ ಸಾದ್ನೊಕು. ಆತ್ಮ ವಿಶ್ವಾಸ ಬೇಕ್ ಮತ್ತೆ ತಾನ್‌ಮಾಡುವ ಕೆಲ್ಸದ ಮೇಲೆ ಪ್ರೀತಿ ಇರೊಕು. ಯಾರಿಗೂ ಕೇಡ್ ಬಯ್ಸಿಕಾಗದ್ ಇದ್ ನನ್ನ ಅನುಭವದ ಮಾತ್.

ಕೌಟುಂಬಿಕ ಜೀವನ :

ನಾನ್ ಹಿಂದೆ ಹೇಳ್ದಂಗೆ 1950ರ ಏಪ್ರೆಲ್ 9ರ್‌ಲಿ ಮೊದುವೆ ಆದೆ. ಮದುವೆ ಆಗಿ 6–7 ವರ್ಷಗಳ ಮುಂಚೆ ಕೂಡುಕುಟುಂಬದ ಜೀವನವೇ ಮಾಡ್ಕಂಡ್ ಬಂದೆ. 1957ರ್‌ಲಿ ನಂಗೂ ನನ್ನ ಚಿಕ್ಕಪ್ಪ ಅಪ್ಪಚ್ಚನವುಕೂ ಆಸ್ತಿ ಪಾಲಾತ್. ಆಸ್ತಿ ಪಾಲಾಕನ ನನ್ನ ಅಪ್ಪನ ಹಳೇ ಸಿನೇತ ಶ್ರೀ ಬೊಳ್ಳಚೆಟ್ಟೀರ ಮಂದಣ್ಣನವು ತೀರ್ಪುಗಾರರನಾಗಿ ಬಂದಿದ್ದೊ. ನಾನ್ ಇಂದೂವಾಸ ಇರುವ ಮನೆ ಹತ್ರದ ಜಮ್ಮ ಆಸ್ತಿದ್ ಜವಾಬ್ದಾರಿಕೆನ ವಹಿಸಿಕಂಬಂಗೆಯೂ, ನನ್ನ ಸಹೋದರ ಶ್ರೀ ಉಲ್ಲಾಸಂಗೆ ಹೊದ್ದೂರು ಕಣ್ಣ ಬಲಮುರಿನ ಸಾಗು ಆಸ್ತಿನ

ಜವಾಬ್ದಾರಿಕೆನ ಬುಟ್ಟ್‌ಕೊಟ್ಟೆ. ಅಲ್ಲಿ ವಾಸದ ಮನೆ ಇರ್ದರ್‌ಂದ ನನ್ನ ಅವ್ವ ಮತ್ತೆ ಸಹೋದರ ಅಲ್ಲಿಯೇ ಉಳ್ಕಂಡೊ. ಸೋದರ ಉಲ್ಲಾಸಂಗೆ ಅಷ್ಟೇನೂ ಅನುಭವ ಇಲ್ಲದ ಕಾರಣ ನಾನೇ ಅಲ್ಲಿ ಕಾಫಿ ತೋಟ ಮಾಡಿ ಕೊಟ್ಟೆ. ನಾನ್ ನನ್ನ ಶಿಕ್ಷಕ ಕೆಲ್ಸದೊಟ್ಟಿಗೆ ಆಸ್ತಿ ಮೇಲ್ವಿಚಾರಣೆಗಳ್ನ ಅಚ್ಚುಕಟ್ಟಾಗಿ ಮಾಡಿಕಂಡ್ ಬಂದೆ. ನನ್ನ ಹೆಣ್ಣೊ ಆಸ್ತಿ ಕಡೆಗೆ ಗಮನ ಕೊಡ್ತಿತ್. ಅವರ ತವುರು ಮನೆಯವು ತುಂಬಾ ಆಸ್ತಿಯವು ಆದ ಕಾರಣಂದ ಅಲ್ಲಿನೂ ಕೃಷಿ ಬಗ್ಗೆ ಮಾಹಿತಿ ಇದ್ದರ್‌ಂದ ಇಲ್ಲಿ ಕೆಲ್ಸದವರ್‌ಂ ಕೆಲ್ಸ ಮಾಡ್ಸಿಕೆ ನನ್ನ ಹೆಣ್ಣ್‌ಗೆ ಕಷ್ಟ ಆತ್ಲೆ. 1958ರ್‌ಲಿ ನನ್ನ ತಂಗೆ ಪಾರ್ವತಿ ಗಂಡ ಶ್ರೀ ಬೈಮನ ಬೆಳ್ಯಪ್ಪನವರ ಸಾಯಂದ ಕಾರುಗುಂದ ಗ್ರಾಮದ ಅಜ್ಜೇಟಿರ ಮುದ್ದಪ್ಪನವರ್‌ಂದ ಹತ್ತ್ ಎಕರೆ ಜಮ್ಮ ಆಸ್ತಿ ತಕಂಡೆ. ಸೊಲ್ಪ ದಿನಲೇ ಆಸ್ತಿ ಮಾರ್ದ ಶ್ರೀ ಮುದ್ದಪ್ಪನವು ನನ್ನ ಆಸ್ತಿದ್ ಒಂದ್ ಭಾಗನ ಅತಿಕ್ರಮಣ ಮಾಡಿ ಯಾಲ ಗಿಡ ನೆಟ್ಟ್ ವ್ಯವಸಾಯ ಮಾಡ್ತ್. ಅದರ ತಡೆಕೆ ನಾನ್ ಜಿಲ್ಲಾಧಿಕಾರಿಗೆ ಅರ್ಜಿ ಕೊಟ್ಟ್ ಮೊಕದ್ದಮೆ ದಾಖಲ್ ಮಾಡಿ ಸ್ಟೇ ತಂದೆ. ಅಂದ್‌ನ ಕಾಲಲಿ ನಾವು ಖರೀದಿಸಿದ ಮೊತ್ತದ ಶೇ.20ರಷ್ಟ್ ನಜರ್ ಹಣ ಸರಕಾರಕ್ಕೆ ಕಟ್ಟಿರೆ. ಜಮ್ಮ ಆಸ್ತಿ ಸಾಗು ಆಗಿ ಬದಲಾಗುವ ವ್ಯವಸ್ಥೆ ಜಾರಿಲಿತ್ತ್. ಆದ್ದರ್‌ಂದ ಈ ಹಗರಣಂದ ಬಚಾವಾಕೆ ತಕಂಡ 10 ಎಕರೆ ಬಾಣೆ ಜಾಗನ ಸರಕಾರಕ್ಕೆ ನಜರು ಕಟ್ಟಿ ಸಾಗು ಆಸ್ತಿ ಆಗಿ ಬದಲಾಯ್ಸಿದೆ. ಕೆಲ ವರ್ಷಗಳ ಮುಂಚೆ ಆಸ್ತಿನ ಅನುಭವಿಸಿ 1968ರ ಹೊತ್ತ್‌ಲಿ ಬೆಟ್ಟತ್ತೂರು ಗ್ರಾಮದ ಕೂಪದೀರ ಶ್ರೀ ಉತ್ತಪ್ಪನವುಕೆ ಮಾರಾಟ ಮಾಡ್ದೆ. ಆಸ್ತಿ ಮಾರುವ ಆಸಕ್ತಿ ಇತ್ತ್‌ಲೆ. ಆದರೆ ಅಂದ್‌ನ ಕಾಲಲಿ ಬಲಮುರಿಂದ ಕಾರುಗುಂದಕ್ಕೆ ಹೋಕೆ ಬಸ್ಸ್ ಸೌಕರ್ಯ ಇತ್ಲೆ. ಸಮಯಕ್ಕೆ ಸರಿಯಾಗಿ ತೋಟಕ್ಕೆ ಹೋಕೆ ಆತಿತ್ಲೆ. ರಜಾ ದಿನಗಳ್‌ಲಿ ಮಾತ್ರ ಎಚ್ಚರ ಇರಕಾಗಿತ್ತ್. ಹಂಗೇ ಕಾರ್‌ಗುಂದ ಆಸ್ತಿನ ಮಾರಾಡ ಮಾಡ್ದ ಕೂಡ್ಲೆ ಪಾಲೂರು ಗ್ರಾಮದ ಬೈತಡ್ಕ ಕುಟುಂಬದ

3 ಎಕರೆ ಯಾಲಕೃಷಿ ಯೋಗ್ಯದ ಸಾಗು ಆಸ್ತಿ. ತಕಂಡೆ ಕುಟುಂಬದ ಜವಾಬ್ದಾರಿನ ಹೊತ್ತ್‌ಕಂಡ್ ಮೇಲೆ 1952ರ ಮಾರ್ಚ್ ತಿಂಗಲಿ ನನ್ನ ಹಿರಿಯ ಮಂಜ ರಮೇಶ ಹುಟ್ಟಿತ್. 1954ರ್‌ಲಿ ಪ್ರಥಮ ಪುತ್ರಿ ಮಾಲತಿ ಹುಟ್ಟಿತ್. 1956ರ್‌ಲಿ ನನ್ನ ಎರಡನೇ ಮಂಜ ಶಿವರಾಮ, 1961ರ ಏಪ್ರಿಲ್ ಒಂದಕ್ಕೆ ಕಡೆ ಪುತ್ರಿ ಪುಷ್ಪ ಹುಟ್ಟಿತ್. ನಾವ್ ಐದ್ ಮಕ್ಕಳ ಅಪ್ಪ ಅವ್ವ ಆದೊ.

ಮಕ್ಕಳ ಮೂಲಭೂತ ಸೌಕರ್ಯ ಆದ ವಿದ್ಯೆ ಕೊಡ್ಸುದು ನಮ್ಮ ಜವಾಬ್ದಾರಿ. ಸೂರೂನ ಮಂಜ ರಮೇಶ ಎಸ್.ಎಸ್.ಎಲ್.ಸಿ ವರೆಗೆ ಓದಿತ್. ಮತ್ತೆ ಅವಂಗೆ ಮಡಿಕೇರಿ ಐ.ಟಿ.ಐ.ಲಿ. ಮೆಷಿನಿಷ್ಟ್ ಗ್ರೂಪ್‌ಲಿ ತರಬೇತಿ ಕೊಡ್ಸಿದೆ. ಸುರನ ಮಗ್ಳು ಎಸ್.ಎಸ್.ಎಲ್.ಸಿ. ಮುಟ್ಟ ಓದಿ, ಅವಳ ಇಷ್ಟದಂಗೆ ಓದ್ ನಿಲ್ಸಿತ್. ಭರತನೂ ಸನ ಎಸ್.ಎಸ್.ಎಲ್.ಸಿ. ಮುಟ್ಟ ಓದಿ ತನ್ನ ಇಷ್ಟದಂಗೆ ಕೃಷಿ ಕಡೆಗೆ ಮನ್ಸ್ ಮಾಡ್ತ್. ಶಿವರಾಮ ಮತ್ತೆ ಪುಷ್ಪ ಇಬ್ಬರು ಪದವಿ ಮುಟ್ಟ ಓದಿದೊ. ಶಿವರಾಮಂಗೆ ಸುಳ್ಯದ ಕೆ.ವಿ.ಜಿ. ವಿದ್ಯಾಸಂಸ್ಥೆಯಾದ ನೆಹರೂ ಮೆಮೇರಿಯಲ್ ಕಾಲೇಜ್‌ನ ಆಫೀಸ್‌ಲಿ ಗುಮಾಸ್ತ ಆಗಿ ಕೆಲ್ಸ ಮಾಡ್ತಿತ್. ರಮೇಶ ಐ.ಟಿ.ಐ. ಮಾಡಿ ಬೆಂಗಳೂರ್‌ನ ಖಾಸಗಿ ಸಂಸ್ಥೆಲಿ ಮೆಷಿನಿಷ್ಟ್ ಆಗಿ ಸೊಲ್ಪ ಸಮಯ ಕೆಲ್ಸ ಮಾಡ್ತ್. ಮತ್ತೆ ತನ್ನ ಸ್ನೇಹಿತನೊಟ್ಟಿಗೆ ಮದ್ರಾಸ್, ಮುಂಬಾಯಿಗೆ ಹೋನೆತ ಹೇಳ್ತ್. ಸುಖಾಸುಮ್ಮನೆ ಇದ್ದ ಕೆಲ್ಸನ ಬುಟ್ಟ್‌ಕಂಡ್ ಇನ್ನೊಂದರ ಹುಡ್ಕಿಕಂಡ್ ಹೋದು ಬೇಡತ ಹೇಳಿ ಹಿಂದಕ್ಕೆ ಮನೆಗೆ ಕರ್ಸಿಕಂಡೆ. ಮತ್ತೆ ಅಂವನ ಸುಳ್ಯದ ಕೆ.ವಿ.ಜಿ.ಲಿ. ಕೆಲ್ಸಕ್ಕೆ ಸೇರ್ಸಿದೆ. ಕೆಲವು ವರ್ಷಗಳ ಮೇಲೆ ಅವರ ಜವುಳಿ ವ್ಯಾಪಾರದ ಜವಾಬ್ದಾರಿಕೆ ವಹಿಸಿಕಂಡ್ ಸರಿಯಾಗಿ ಕೆಲ್ಸ ಮಾಡ್ತ್. ಕಡೆಗೆ ಸಿನೇತರ ಪಿತೂರಿಂದ ಕೆಲ್ಸ ಬುಟ್ಟ್ ಮನೆಗೆ ಬಂದ್ ಕೃಷಿ ಕೆಲ್ಸ ಮಾಡಿಕಂಡ್ ಇತ್ತ್. ಮಕ್ಕಳಿಗೆ ಅವ್ವನ ಮಮತೆ ಜಾಸ್ತಿ ಆಗಿ ಮನೆನೇ ಸರ್ವಸ್ವತ ತಿಳ್ಕಂಡೊ. 1964ರ್‌ಲಿ ನನ್ನ ಸೋದರ

ಉಲ್ಲಾಸಂಗೆ ಬಿಳಿಗೇರಿ ಗ್ರಾಮದ ತುಂತಜ್ಜಿರ ಸುಬ್ಬಯ್ಯ ದಂಪತಿಗಳ ಎರಡನೇ ಮಗ್ಳು ಚಿ.ಸೌ. ಕಾಮುಣಿಯೊಟ್ಟಿಗೆ ಮೊದುವೆ ಮಾಡ್ಸಿದೆ.ಅದೇ ಆರ್ಥಿಕ ವರ್ಷ ಅತಿವೃಷ್ಠಿಂದಾಗಿ ಕಣ್ಣ ಬಲಮುರಿಯ 3 ಎಕರೆ ಬತ್ತದ ನಾಟಿ ಪೂರ ಕಾವೇರಿ ಹೊಳೆ ನೀರ್ ಎರ್‌ಕಿ ಕರ್‌ಗಿ ಹೋತು. ಪುನಾ ಊಡಿ ನಾಟಿ ಮಾಡ್ಡೊ. ನಾಲ್ ಮನೆಲಿ ಸಾಕಷ್ಟ್ ಹಸ್‌ಸಾಕ್‌ತಿದ್ದೊ. ಹಾಲ್, ಮೊಸ್ರು, ತುಪ್ಪಕೆ ಕಮ್ಮಿ ಇತ್ಲೆ. ನಾನ್ ಸಾಕಷ್ಟ್ ತರಕಾರಿ ಬೆಳ್‌ಸ್‌ತಿದ್ದೆ. ನನ್ನ ಹೆಣ್ಣ್ ಮನೆ ಕೆಲ್ಸದ ಕಡೆ ನಿಗ ಮಡ್ಗಿತ್ತ್. ಕೃಷಿ ಬಗ್ಗೆ ತುಂಬ ಆಸಕ್ತಿ ಇತ್ತ್. ನನ್ನ ತಂಗೆ ಗಂಗಮ್ಮನ ಮೊದುವೆ 1966–67ರ್‌ಲಿ ಗಾಳಿಬೀಡು ಗ್ರಾಮದ ಕೋಚನ ಶ್ರೀ ವೆಂಕಪ್ಪನವರೊಟ್ಟಿಗೆ ಆತ್. ಅವು ಮಾಸ್ಟ್ರ ಆಗಿದ್ದೊ. ಅವರ ಮೊದುವೆ ಮಡಿಕೇರಿನ ಮೇಲೆನ ಗೌಡ ಸಮಾಜಲಿ ಆತ್. 1978ರ್‌ಲಿ ನನ್ನ ಸುರೂನ ಮಗ್ಳು ಚಿ.ಸೌ. ಮಾಲತಿದ್ ಮೊದುವೆ ಸುಳ್ಯ ತಾಲೂಕ್‌ನ ಮೋಂಟಡ್ಕ ಶ್ರೀ ರಾಮಕೃಷ್ಣ ಅವ್ರೊಟ್ಟಿಗೆ ಆತ್. ಮೊದುವೆ ಮೂರ್ನಾಡು ಪ್ರೌಢ ಇಸ್ಕೂಲ್‌ಲಿ ನಡ್ತ್. ಶ್ರೀ ರಾಮಕೃಷ್ಣನವು ವೀರಾಜಪೇಟೆ ವಿಜಯ ಬ್ಯಾಂಕ್ ಶಾಖೆಲಿ ಮ್ಯಾನೇಜರ್ ಆಗಿದ್ದೊ. ಈ ಮೊದುವೆ ಸಂಬಂಧ ಕುರುಂಜಿಯವರ ಮೂಲಕ ಆತ್. ಅದೇ ವರ್ಷ ಮನೆ ಹತ್ರ ದೊಡ್ಡದಾದ ಗೊಬ್ಬರ ಗ್ಯಾಸ್ ನಿರ್ಮಾಣ ಮಾಡ್ದೆ. ದನಕರ್‌ಗ ಸಾಕಷ್ಟ್ ಇದ್ದರ್‌ಂದ ದನಗಳ ಸಗಣಿಂದ ಗ್ಯಾಸ್ ತುಂಬ ಉತ್ಪತ್ತಿ ಆತಿತ್. ಗ್ಯಾಸ್‌ಂದ ಅಡುಗೆ ಮತ್ತೆ ಅಡುಗೆ ಮನೆಗೆ ಒಂದ್ ಗ್ಯಾಸ್ ದೀಪದ ಅವಶ್ಯಕತೆ ಇತ್ತ್. 1979–80ರ್‌ಲಿ ಮನೆ ಹತ್ರ ಸುಮಾರ್ 52 ಅಡಿ ಆಳದ ನೀರ್‌ನ ಬಾವಿ ತೋಂಡಿಸಿದೆ. ಈ ಬಾವಿ ಕಗ್ಗಲ್‌ಂದ ಕಟ್ಟಲಾಗುಟು.

1982ರ್‌ಲಿ ನಮ್ಮ ಹಿರಿ ಮಂಜ ಚಿ.ರಾ. ರಮೇಶಂಗೆ ಮಡಿಕೇರಿ ತಾಲೂಕು ಪಾಲೂರು ಗ್ರಾಮದ ದಿ. ಅಚ್ಚುಡ ಬೆಳ್ಯಪ್ಪನವರ ಸುರೂನ ಮಗ್ಳು ಚಿ.ಸೌ. ಪುಷ್ಪಾವತಿಯೊಟ್ಟಿಗೆ ಮಡಿಕೇರಿ ಮೇಲೆನ ಗೌಡ

ಸಮಾಜಲಿ ಮೊದುವೆ ಜಂಬರ ನಡ್ತ್. ದಂಪತಿಗಳಿಗೆ ಇಬ್ಬರು ಹೆಣ್ಣ್ ಮಕ್ಕ ಒಳೊ. ಅವರ ಸುರೂನ ಮಗ್ಳು ಚಿ.ಸೌ. ಶರ್ಮಿಳಂಗೆ ಮರಗೋಡು ಗ್ರಾಮದ ಕೇನೇರ ರ್ರಾವ ದಂಪತಿಗಳ ಎರಡನೇ ಮಂಜ ಚಿ.ರಾ. ಪ್ರದೀಪನೊಟ್ಟಿಗೆ ಮೊದುವೆ ಆಗಿ ಒಂದ್ ಹೆಣ್ಣ್ ಕೂಸು ಹುಟ್ಟಿಟು.

1982ರ್‌ಲಿ ನಮ್ಮ ಮನೆ ಹಿತ್ಲ್ ಹತ್ರ ಎರಡ್ ಎಕರೆ ಜಮ್ಮ ಬಾಣೆ ಜಾಗನ ಶ್ರೀ ಬೊಳ್ತಂಡ ಸೋಮಣ್ಣ ನವ್‌ರ್‌ಂದ ತಕ್ಕಂಡ್ ಕಾಫಿ ತೋಟ ಮಾಡ್ದೆ. 1985ರ ಮೇ ತಿಂಗ 27ರಂದ್ ನಮ್ಮ ಕಡೇ ಪುತ್ರಿ ಚಿ.ಸೌ. ಪುಷ್ಪಳ ಮೊದುವೆ ಪಾರಾಣೆ ಹೈಸ್ಕೂಲ್‌ಲಿ ಸುಳ್ಯ ತಾಲೂಕು ಅಜ್ಜಾವರ ಗ್ರಾಮದ ಪಡ್ಯೆಂಬೈಲು ಶ್ರೀ ಪುರುಷೋತ್ತಮ ಅವರೊಟ್ಟಿಗೆ ನಡ್ತ್. ಆಗ ಶ್ರೀ ಪುರುಷೋತ್ತಮನವು ಪುತ್ತೂರ್‌ನ ಬಿ.ಸಿ. ರೋಡ್‌ನ ಕಾಲೇಜ್‌ಲಿ ಪ್ರಾಧ್ಯಾಪಕರಾಗಿದ್ದೊ. ಈ ಮೊದುವೆ ಕುರುಂಜಿಯವರ ಸಹಯೋಗಂದ ಸಂಬಂಧ ಆತ್. 1988ನೇ ಮಾರ್ಚ್‌ತಿಂಗ 4 ರಂದ್ ನಮ್ಮ ಎರಡನೇ ಮಂಜ ಚಿ.ರಾ. ಭರತ್ (ಲೋಕನಾಥ)ನ ಮೊದುವೆ ಮಡಿಕೇರಿ ಕೆಳಗೆನ ಗೌಡ ಸಮಾಜಲಿ ಚೇರಂಬಾಣೆ ಕೊಟ್ಟೂರು ಗ್ರಾಮದ ಶ್ರೀ ಕೇಕಡ ಅಪ್ಪಯ್ಯ ದಂಪತಿಗಳ ಸುರೂನ ಮಗ್ಳು ಪುಷ್ಪಾಳೊಟ್ಟಿಗೆ ನಡ್ತ್.

1990ರ್‌ಲಿ ಶ್ರೀ ಬೊಳ್ತಂಡ ಎಸ್. ನಾಣಯ್ಯ ಮತ್ತೆ ಬಿಯಸ್. ಪೆಮ್ಮಯ್ಯನವರ ಜಮ್ಮ ಬಾಣೆ 7.90 ಎಕರೆಯಷ್ಟ್ ಅಧಿಕಾರ ಪತ್ರದ ಮೇಲೆ (General Power Of Attorney) ಖರೀದಿಸಿ ಕಾಫಿ ತೋಟ ಮಾಡ್ದೆ. ನಮ್ಮ ಕಡೇ ಮಂಜ ಶಿವರಾಮಂಗೆ 3-4-1993ರ್‌ಲಿ ಮೂರ್ನಾಡು ಗೌಡ ಸಮಾಜಲಿ ಮರಗೋಡು ಗ್ರಾಮದ ಶ್ರೀ ಪೂಳಕಂಡ್ರ ಶಿವಪ್ಪ ದಂಪತಿಗಳ ಒಬ್ಬಳೇ ಮಗ್ಳು ಚಿ.ಸೌ. ರೋಹಿಣಿಯೊಟ್ಟಿಗೆ ಮೊದುವೆ ಆತ್. ಅವ್ಳು ಶಿಕ್ಷಕಿಯಾಗಿ ಸೇವೆ ಮಾಡ್ತಾ ಉಟ್ಟು. ಇವುಕೆ ಒಬ್ಬನೇ ಮಂಜ ಲಿಖಿನ್ ಬೆಳ್ಯಪ್ಪತ ಹೆಸ್ರ್

ಈಗ ಮಡಿಕೇರಿ ಕೆ.ಯಂ.ಎಫ್. ಪ್ರಥಮ ದರ್ಜೆ ಕಾಲೇಜ್‌ಲಿ ಎರಡನೇ ವರ್ಷದ ಬಿ.ಕಾಂ. ಓದುತಾ ಉಟ್ಟು.

ನಾನ್ ನನ್ನ ಆಸ್ತಿನ ಮೂರುಗಂಡ್ ಮಕ್ಕಳಿಗೆ ಸಮಾ ಆಗಿ ಪಾಲ್ ಮಾಡಿ ಕೊಟ್ಟೊಳೆ. ಫಸಲ್‌ನ ಅನುಭವುಸ್ತಾ ಒಳೊ. ನಾನ್ ಪಾಲೂರ್‌ಲಿ ಖರೀದಿ ಮಾಡ್ದ 3 ಎಕರೆ ಸಾಗು ಆಸ್ತಿನ ನನ್ನ ಎರಡನೇ ಮಂಜ ಭರತಂಗೆ ರಿಯಾಯ್ತಿಲಿ ಮಾರಾಟ ಮಾಡ್ದೆ. ಯಾಕೆತ್ತೇಳ್ರೆ ಮೂರ್ ಮಕ್ಕಳಿಗೆ ಸಮಪಾಲ್ ಮಾಡ್ರೆ ಒಬ್ಬೊಬ್ಬಂಗೆ ಒಂದೊಂದ್ ಎಕರೆ ಬಂದದೆ. ಆದರೆ ಒಂದ್ ಎಕರೆ ಕೃಷಿಗಾಗಿ ಅಷ್ಟ್ ದೂರ ಹೋಗಿ ಬಾಕೆ ಉದಾಸಿನ ತೋರ್ಸುವೊತ್ತೇಳುವ ದೃಷ್ಟಿಂದ ಈ ರೀತಿ ಮಾಡ್ದೆ. ಕಾಫಿ ತೋಟದ ಸುರೂಲಿ ಏನೇನ್ ಕೆಲ್ಸಗಳ ಮಾಡೊಕೊ ಅವುಗಳ್ನೆಲ್ಲ ಮಾಡಿ 6–7 ವರ್ಷ ಆದ ಮೇಲೆ ಮಕ್ಕಳಿಗೆ ಪಾಲ್ ಮಾಡಿ ಕೊಟ್ಟೊಳೊ. ತೋಟಕೆಲ್ಸದ ಭಾರ ಎಲ್ಲ ಕಳ್ದಮೇಲೆ ಅವರ ಪಾಲಾತ್. ನಾನ್ ಅದೆಷ್ಟೋ ಕಾಲ ಒಂದಲ್ಲ ಒಂದ್ ರೀತಿಯ ಉದ್ಯೋಗಲಿ ಸೇರ್ಕಂಡ್ ಇತ್ತೀಚೆಗೆ ಮನೆಲೇ ನೆಲೆ ನಿತ್ತ್ ಕುಟುಂಬದ ಬಾಣೆ ಜಾಗ ಸರ್ವೆ.ನಂ. 287/1ರ್‌ಲಿ ನನ್ನ ಪಾಲ್‌ನ ಒಂದ್ ಎಕರೆಲಿ ಅಂದಾಜ್ 0.75 ಎಕರೆಯಷ್ಟ್ ಬಾಣೆ ಜಾಗಲಿ ಕಾಫಿ ಮತ್ತೆ ಕರಿಮೆಣ್ಸ್ ಕೃಷಿ ಮಾಡೊಳೆ. ಯಾರ ಸಾಯ ಇಲ್ಲದೆ ನನ್ನ ಸೊಂತ ಶ್ರಮಂದ ಕೃಷಿ ಮಾಡಿ ಫಸ್‌ಲ್‌ಗೆ ಬಂದುಟು. ಈಗ ನಂಗೆ ಶಕ್ತಿ ಕುಂದಿದ್ ತೋಟದ ಕೆಲ್ಸ ಮಾಡಿಕೆ ಹಿಂದೇಲ್ ಹಾಕಿನೆ. ನಂಗೆ ಕೆಲ್ಸತ್ತೇಳ್ರೆ ತುಂಬ ಕುಸಿ. ಆರೋಗ್ಯಕೂ ಒಳ್ಳದ್. ಕೆಲ್ಸವೇ ಒಂದ್ ರೀತಿಲಿ ವ್ಯಾಯಾಮ. ಆರೋಗ್ಯದ ಪಂಚಸೂತ್ರಗಳ್‌ಲಿ ವ್ಯಾಯಾಮನೂ ಒಂದ್. ಈ ನಡುವೆ 2011ರ ನವೆಂಬರ್‌ಲಿ ಮಡಿಕೇರಿ ಕೂರ್ಗ್ ಚಾನೆಲ್ ದೂರದರ್ಶನಲಿ (ಟಿ.ವಿ) ಅರೆಭಾಷೆಲಿ ಕೊಡಗ್‌ನ ಹುತ್ತರಿ ಬಗ್ಗೆ ನನ್ನ ಬಂಧುಗಳೊಟ್ಟಿಗೆ ಸಂವಾದ ಕಾರ್ಯಕ್ರಮ. ನಡ್ಸಿಕೊಟ್ಟೊಳೊ. ಅದ್ ಗೊತ್ತಾಗಿ ಮಡಿಕೇರಿ ಆಕಾಶವಾಣಿಯವು

ನಮಗೊಂದು ಕಾರ್ಯಕ್ರಮ ಕೊಡೊಕುತ ಕೇಳಂಡೊ. ಹಂಗಾಗಿ 2012ರ ಜನವರಿಲಿ ಮಡಿಕೇರಿ ಆಕಾಶವಾಣಿ ಉದ್ಘೋಷಕರ ಶ್ರೀ ಸುಬ್ರಾಯ ಸಂಪಾಜೆಯವರೊಟ್ಟಿಗೆ ಅರೆಭಾಷೆಲಿ ಸ್ವಾತಂತ್ರ್ಯ ಪೂರ್ವದ ಜನಜೀವನನ (ಅವಿಭಾಜ್ಯ ಕುಟುಂಬ) ಕೊಡಗ್‌ನ ಜನ್ರ ಸ್ವಾತಂತ್ರ್ಯ ಹೋರಾಟ ಕೊಡಗ್‌ನ ರಾಜ್ಯಾಡಳಿತ ಮತ್ತೆ ಹಿಂದೆನ ಅನುಭವನಗಳ ಬಗ್ಗೆ ಸಂವಾದ ಕಾರ್ಯಕ್ರಮಲಿ ಭಾಗವಹಿಸಿದ್ದೆ. ಪುನಾ 2012ರ್ ಫೆಬ್ರವರಿಲಿ ಮಡಿಕೇರಿ ಆಕಾಶವಾಣಿಲಿ ಪರಿಸರದ ಒಟ್ಟಿಗೆ ಸಹಬಾಳ್ವೆತ್ತೇಳುವ ವಿಷಯದ ಬಗ್ಗೆ ಮಾಹಿತಿ, ಕೃಷಿ ಅನುಭನ ನನ್ನ ತೋಟದ ಮಾಹಿತಿ, ಇಸ್ಕೂಲ್ ಮಕ್ಕಳಿಗೆ ಕೃಷಿಯ ಕುರ್ತ್ ಕೊಟ್ಟ ರೂಪುರೇಷಗ ಮುಂತಾದ ವಿಷಯಗಳ್ನ ಆಕಾಶವಾಣಿ ಕಾರ್ಯನಿರ್ವಾಹಕಿ ಶ್ರೀಮತಿ ಕನಿಷ್ಠ ಫೆರ್ನಾಂಡಿಸ್ ಅವ್ರೊಟ್ಟಿಗೆ ಕನ್ನಡಲಿ ನಡ್ಸಿದ ಸಂವಾದ ಕಾರ್ಯಕ್ರಮ. ಪ್ರಸಾರ ಆಗುಟು ಇಂತಹ ಕಾರ್ಯಕ್ರಮಗಳ್‌ಲಿ ಸೇರ್ದರ್‌ಂದ ಮನಸ್ಸ್‌ನ ಭಾರ ಕಮ್ಮಿ ಆದಂಗಾದೆ ಮತ್ತೆ ಜನ ಸಂಪರ್ಕನೂ ಆದೆ.

ನನ್ನ ಬದ್ಕ್‌ನ ಉದ್ದಕ್ಕೂ ಮಕ್ಕಾಲ್ ಪಾಲ್ ಮನೆ ಹೊರಗೆನ ಕೆಲ್ಸಲಿ ಸೇವೆ ಮಾಡಿ ಜಯ ಕಂಡೊಳೆ. ಆದರೆ ನಾನ್ ಹೊರಗೆನ ಉದ್ಯೋಗ, ವ್ಯಾಪಾರ ಹಿಂಗೆ ಬೇರೆ ಬೇರೆ ಚಟುವಟಿಕೆಲಿ ಜಯ ಕಾಂಬೊಕುತಾದರೆ ನನ್ನ ಹೆಣ್ಣ್‌ದ್ ಸಾಯನೇ ಕಾರಣ. ಯಾಕೆತ್ತೇಳ್ರೆ ಮನೆ ಒಳೆಗೆನ, ಹೊರಗೆನ ಆಸ್ತಿಯ ಉಸ್ತುವಾರಿನ ಹೆಣ್ಣೇ ಹೊತ್ತ್ ಕಂಡದ್ದರ್‌ಂದ ನಂಗೆ ಹೊರಗೆನ ಕೆಲ್ಸ ಹಗುರಾತ್. ನಾನ್ ಮಾಸ್ಟ್ರ ಆಗಿರಕನ ಮನೆಂದೇ ಇಸ್ಕೂಲಿಗೆ ಹೋಗಿ ಬಾತಿದ್ದೆ. ಆಗ ನನ್ನ ಹೆಣ್ಣ್ ಸಮಯಕೆ ಸರಿಯಾಗಿ ಬೆಳಗೆದ್ ತಿಂಡಿ ಮಾಡ್ದುರೊಟ್ಟಿಗೆ ಮಧ್ಯಾಹ್ನದ ಊಟದ ವ್ಯವಸ್ಥೆನೂ ಮಾಡಿ ಬುತ್ತಿ ಕಟ್ಟಿ ಕೊಟ್ಟ್ ಇಸ್ಕೂಲಿಗೆ ಕಳ್‌ಸ್ತಿತ್ತ್. ಇದ್ ನನ್ನ ಹೆಣ್ಣ್‌ದ್ ಉದಾರಗುಣ. ಅವ್ಳು ಅಡುಗೆ ಮಾಡ್ದರ್‌ಲಿ ಎತ್ತಿದ ಕೈ. ಹೋಂ ಸೈನ್ಸ್‌ಲಿ ನಿಪುಣೆ. ಹಂಗಾಗಿ

ಅಂತಾ ಒಳ್ಳ ಆಹಾರನ ತಿಂದದ್ದ್‌ಕೆ ಬಹುಶಃ ನಾನ್ ಇಂದೂ ಆರೋಗ್ಯಂದ ಇರಿಕೆ ಕಾರಣ ಆಗಿರ್‌ದುತ ಊಹಿಸಿರೂ ತಪ್ಪಿಲ್ಲ. ಒಂದ್ ಸತಿ ಹೇಮಾವತಿ ಕಾಫಿ ಕಂಪೆನಿನ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ಬಿ.ಕೆ. ಚಿಣ್ಣಪ್ಪನವು ನಮ್ಮ ಮನೆಗೆ ಬಂದಿರಕನ ಮಧ್ಯಾಹ್ನದ ಊಟ ಮಾಡ್ದೊ. ಈಸ್ಟ್ ಎಂಡ್ ಹೋಟಲ್‌ನ ಊಟದ ರೀತಿಲಿ ಈ ಊಟ ಉಟ್ಟುತ ಹೊಗಳ್ದೊ. ಹಂಗೇ ನೆರೆಮನೆಯ ಕೊಡವ ಸಿನೇತರು ಸನ ನನ್ನ ಹೆಣ್ಣ್ ಮಾಡುವ ಅಡುಗೆನ ಮೆಚ್ಚಿಕಂಡೊಳೊ. ಇದ್ ಹೆಣ್ಣ್ ಮಕ್ಕಳಿಗೆ ಒಳ್ಳಕಲೆ ಮತ್ತೆ ಸೌಭಾಗ್ಯ. ನನ್ನ ಹೆಣ್ಣ್ ಹಂಜ ದುಡುಕ ಸೊಭಾವದವುಳು ಆದರೆ ಆತ್ಮ ಶುದ್ಧ ಆಗಿತ್ತ್. ವಿದ್ಯೆ ಏಳನೇ ಮುಟ್ಟ ಇದ್ದರೂ ಗಣಿತಲಿ ಭಾರಿ ಚುರುಕು. ಸಂಸಾರ ದೊಡ್ಡ ನೌಕೆ ಇದ್ದಂಗೆ. ನೌಕೆ ಭಾರನ ಹೊತ್ತ್ ಕಂಡ್ ಒಂದೇ ಸಮಲಿ ಹೋಗ್ತಾ ಇದ್ದರೆ ಮಾತ್ರ ಅದ್ ದಡ ಸೇರ್ದು. ಆದ್ದರ್‌ಂದ ಸಂಸಾರಲಿನೂ ಒಡಕ್ ಆಗದಂಗೇ ಹೊಂದಿಕಂಡ್ ಹೋಕ್ಕಾದೆ. ತಾಳ್ಮೆ ಮನ್ಸಂಗೆ ಅತಿ ಮುಖ್ಯ. ಒಂದೊಂದ್ ಸತಿ ಸಂಸಾರಲಿ ಮಾತ್‌ಗೆ ಮಾತ್ ಬಂದರೂ ಬಾದು. ನೆಗೆಟೀವ್‌ನ ಹಿಂದಕ್ಕೆ ದೂಡಿ ಪಾಸಿಟೀವ್‌ನ ಸ್ವೀಕರಿಸಕಂಬಕು. ಹಂಗೆ ಇದ್ದರೆ ಮಾತ್ರ ಸಂಸಾರಲಿ ಸಮಪಾಲ್, ಸಮಬಾಳ್ ಆದು.

ನಾನ್ ಸುಮರ್ 61 ವರ್ಷಗಳ ಮುಟ್ಟ ದಾಂಪತ್ಯ ಜೀವನ ಸಾಗಿಸಿದೆ. ಬಹಳ ವರ್ಷಗಳ್‌ಂದ ನನ್ನ ಹೆಣ್ಣ್ ಮದ್ದ್ ಉಪಚಾರಂದ ಗಟ್ಟಿ ಮುಟ್ಟಾಗಿಯೇ ಇತ್ತ್. 2011 ಜನವರಿ 20ರಂದ್ ನನ್ನ ಸಣ್ಣ ಮಗ್ಳು ಪುಷ್ಪಾ ದಂಪತಿಗಳ ಸುಳ್ಯ ಪೇಟೆಲಿ ಕಟ್ಟಿದ ಹೊಸಮನೆ ಕೂಡಿಕೆ ಹೋಗಿ, ಅದೇ ದಿನ ತನ್ನ ತಂಗೆದ್ ಮಂಜ ರವಿಕುಮಾರ್ ದಂಪತಿಗಳ ಕೋರಿಕೆಯಂಗೆ ಸುಂಟಿಕೊಪ್ಪದ ಅವರ ಮನೆಗೆ ಹೋಗಿ ಅಂದ್ ಅಲ್ಲೇ ಉಳ್ಕಂಡತ್. ಮಾರಾಣೆ ದಿನ ನಮ್ಮ ಮನೆಗೆ ಬಾತ್. ಒಂದೆರ್ಡ್ ದಿನಲಿ ಎದೆ ಬೇನೆ ಬಾತ್. ಮಡಿಕೇರಿನ ಮರ್ಕರಾ

ನರ್ಸಿಂಗ್ ಹೋಂಗೆ ದಾಖಲಾತ್. ಒಂದ್ ದಿನದ ಮಟ್ಟ್‌ಗೆ ಡಾ. ಪಿ.ಯಂ. ಗಣಪತಿಯವರ್‌ಲ್ಲಿ ಚಿಕಿತ್ಸೆ ಪಡ್ದ್ ಜನವರಿ 27ನೇ ಗುರುವಾರ ಬೆಳಗಿನ ಜಾವ 5.40ಕ್ಕೆ ಕಡೇ ಉಸ್ರೆಳ್ತ್. ಮಡಿಕೇರಿ ಆಕಾಶವಾಣಿಲಿ ನಿಧನ ಸುದ್ದಿ ಕೇಳಿ ತುಂಬ ಜನ ಬಂಧುಗ, ಸಿನೇತರ್, ನೆರೆಕರೆಯವು ಮನೆಗ ವ್ಯಕ್ತ ಪಡಿಸಿದ ಸರ್ವರಿಗೂ ನನ್ನ ಧನ್ಯವಾದಗ. ನಮ್ಮ ಹಿಂದೂ ಧರ್ಮದ ಮತ್ತೆ ಗೌಡ ಜನಾಂಗಗಳ ಪದ್ಧತಿ ಪರಂಪರೆ ರೀತಿ ಎಲ್ಲಾ ಶ್ರಾದ್ಧಾ ಕಾರ್ಯಕ್ರಮಗಳ್ನ ಮಾಡ್ದೊ. ಅಲ್ಲಿಗೆ ನನ್ನ ಸಾಂಸಾರಿಕ ಜೀವನಕ್ಕೆ ಮಂಗಳ ಹಾಡ್ದೆ.

ಸಾರ್ವಜನಿಕ ಸೇವೆ : ನನ್ನ ಬದ್ಕ್‌ಲಿ ಹಿಂದೆ ನಾನ್ ಮಾಡ್ದ ಅಲ್ಪ ಸೊಲ್ಪ ಸಾಧನೆಗಳ್ನ ಹೇಳಿಕೆ ಇಷ್ಟಪಟ್ಟನೆ. ಸುಮಾರ್ 1993–94ರ ಆಚೆ ಈಚೆ ಕರ್ನಾಟಕಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಲಿ ಇರಕನ ಶ್ರೀ ಎಸ್. ಬಂಗಾರಪ್ಪನವು ಮುಖ್ಯ ಮಂತ್ರಿಯಾಗಿಯೂ ಶ್ರೀ ಮಲ್ಲಿಕಾರ್ಜುನ ಖರ್ಗೆಯವು ಕಂದಾಯ ಮಂತ್ರಿಗಳಾಗಿದ್ದ ಸಮಯಲಿ ಕೊಡಗ್‌ನ ಜಮ್ಮ ಹಿಡುವಳಿದಾರರ ಸಂಘ ಮಡಿಕೇರಿಲಿ ರಚನೆ ಆಗಿತ್ತ್. ಆಗ ನನ್ನ ಪಾಲ್‌ನ ಜಮ್ಮ ಬಾಣೆ ಜಾಗದ ಖಾತೆ ವರ್ಗಾವಣೆ ಆಗದ ಸಮಸ್ಯೆಯ ಬಗ್ಗೆ ಅರ್ಜಿ ಬರ್ದ್ ಸದ್ರಿ ಸಂಘಕ್ಕೆ ಕೊಟ್ಟ್. ಸಂಘದ ಮೂಲಕ ಕ್ರಮಕ್ಕೆ ಕಚೇರಿಗೆ ಹೋದೆ. ಜಮ್ಮ ಆಸ್ತಿಯ ಕುಂದುಕೊರತೆಗಳ ಕುರ್ತ್ ಮಾತಾಡಿಕೆ ಸಂಘದ ಸದಸ್ಯರ್ ನಂಗೆ ಅವಕಾಶ ಮಾಡಿಕೊಟ್ಟೊ.

ನಾನ್ ಸಭೆಲಿ ಮಾತಡಕನ ಸಂಘದ ಸರ್ವಸದಸ್ಯರ್ ಒಮ್ಮತಂದ ಸದ್ರಿ ಸಂಘಲಿ ಸೆಕ್ರೆಟರಿಯ ಕೊರತೆ ಇದ್ದರ್‌ಂದ ನನ್ನನ ಸೆಕ್ರೆಟರಿಯಾಗಿ ಆಯ್ಕೆ ಮಾಡ್ದೊ. ಶ್ರೀ ಯಂ.ಎ. ಚಂಗಪ್ಪನವು ಸಂಘದ ಅಧ್ಯಕ್ಷರಾಗಿದ್ದೊ. ಸಂಘದ ಪರ ವಕೀಲರ್ ನೇಮಕ ಆಗಿದ್ದೊ. ಒಂದೆರಡ್‌ವಾರ ಕಳ್ದ ಮೇಲೆ ಬೆಂಗಳೂರ್‌ಗೆ ಮುಖ್ಯಮಂತ್ರಿ ಮತ್ತೆ ಕಂದಾಯ ಮಂತ್ರಿಗಳೊಟ್ಟಿಗೆ ಜಮ್ಮ ಸಮಸ್ಯೆಗಳ ಕುರ್ತ್ ಮಾತಾಡಿಕೆ

ಸಂಘದ ಪರವಾಗಿ ನಿಯೋಗ ಹೋದುತ ತೀರ್ಮಾನ ಆತ್. ಅದೇ ರೀತಿ ಒಂದ್ ದಿನ ನಾವು ಸುಮಾರ್ 7–8 ಜನ ಅಧ್ಯಕ್ಷರ ನಾಯಕತ್ವಲಿ ನಿಯೋಗ ಹೋದೊ. ಬೆಂಗಳೂರ್‌ಲೆ ಅರ್ಜಿನ ಬರ್‍ದೊ. ಆದಿನ ವಿಧಾನ ಸಭಾ ಅಧಿವೇಶನ ಆಗ್ತಾ ಇತ್ತ್. ಹಂಗಾಗಿ ಮಂತ್ರಿಗಳ್ನ ಕೂಡ್ಲೆ ಕಾಂಬಕಾತ್‌ಲೆ. ಸಾಯಂಕಾಲ 5ಗಂಟೆ ಮೇಲೆ ಭೇಟಿ ಆಕೆ ಸಾಧ್ಯ ಆಗಿತ್ತ್. ಈ ನಡುಲಿ ಕಾಂಗ್ರೆಸ್ ಪಕ್ಷದ ಸೆಕ್ರೆಟರಿಯೊಬ್ಬ ನಮ್ಮ ನಿಯೋಗನ ಕಂಡ್ ವಿಷಯ ತಿಳ್ಕಂಡೊ. ಆಗ ಅವು ಮಂತ್ರಿಯೊಟ್ಟಿಗೆ ಮಾತಾಡವ್ ಯಾರ್‌ತ ಕೇಳ್ದೊ. ಸಂಘದ ಅಧ್ಯಕ್ಷ ಚಂಗಪ್ಪನವು ಮಾತಾಡ್ದುತಾತ್. ಆಗ ಕಾಂಗ್ರೆಸ್ ಪಕ್ಷದ ಸೆಕ್ರೆಂಟರಿ ನಮ್ಮ ಮಾತ್‌ನ ಕ್ರಮಬದ್ಧತೆಗಳ್ನ ಪರೀಕ್ಷಿಸಿ, ಸಂಘದ ಸೆಕ್ರೆಟರಿ ಬೆಳ್ಯಪ್ಪನವರೇ ಮಾತಾಡಬೇಕುತ ತೀರ್ಮಾನ ಕೈಗೊಂಡೊ. ಸಾಯಂಕಾಲ 5 ಗಂಟೆ ಮೇಲೆ ಕಂದಾಯ ಮಂತ್ರಿ ಮಲ್ಲಿಕಾರ್ಜುನ ಖರ್ಗೆಯವು ತಮ್ಮ ಕೋಂಬರೆಗೆ ಬಂದೊ. ಆಗ ಪಕ್ಷದ ಸೆಕ್ರೆಟಿಯವರ ಸೂಚನೆ ಪ್ರಕಾರ ನಾವು ಮಂತ್ರಿಗಳ ಕೋಂಬರೆಗೆ ಹೋಕನ ನನ್ನನ ಮಂತ್ರಿಗಳ ಹತ್ರನೇ ಕೂರ್‍ಸಿ ಬಾಕಿದ್ದವರ ಸೆಮಿ ಸರ್ಕಲ್ಲಾಗಿ ಕೂರ್‍ಸಿದೊ. ನಾನ್ ಮನವಿ ಕಾಗದನ ಮಂತ್ರಿಯವುಕೆ ಕೊಟ್ಟ್ ವಿಷಯನ ವಿವರಿಸಿದೆ. ಆಗ ಅವು "ಕೊಡಗ್‌ಲಿ ಜಮ್ಮ ಬೇಕು, ಜಮ್ಮ ಬೇಡ ಎಂದು ಹೇಳುವ ಎರಡು ಅಲ್ಲ, ಜಮ್ಮ ಬೇಕೇ ಬೇಕು. ನಮ್ಮ ಮುಖ್ಯ ಉದ್ದೇಶವಾದ ಖಾತೆ ವರ್ಗಾವಣೆ ಬಗ್ಗೆ ನೀವ್ ಕ್ರಮ ಕೈಗೊಳ್ಳೊಕುತ ಹೇಳಕನ ಕಂದಾಯ ಇಲಾಖೆ, ಕಾನೂನು ಇಲಾಖೆ, ಮತ್ತೆ ಅರಣ್ಯ ಇಲಾಖೆಗಳೆಲ್ಲವೂ ಜೊತೆಗೂಡಿ ಸಭೆ ನಡ್ಸಿ ಸಮಸ್ಯೆನ ಬಗೆ ಹರಿಸುತ ಹೇಳ್ದೊ. ಮಂತ್ರಿಕಚೇರಿಂದ ಫ್ಯಾಕ್ಸ್ ಕಳ್ಸಿದ ಕೂಡ್ಲೆ ನೀವು ಮತ್ತೆ ಅಧ್ಯಕ್ಷರು ಊರಿಂದ ಬರಬೇಕುತ ಅತೀ ವಿನಯ ಪೂರ್ವಕವಾಗಿ ಹೇಳ್ದೊ. ಹಂಗೇ ನಮ್ಮ ಆಡ್ರೆಸ್‌ನ ಕಚೇರಿಲಿ ಕೊಡಿಕೆ ಹೇಳ್ದೊ. ನನ್ನ ಮತ್ತೆ ಅಧ್ಯಕ್ಷರ ವಿಳಾಸ ಕೊಟ್ಟ್ ಹೊರಟೊ. ರಾತ್ರೆ ಹೊತ್ತ್ ಅಂದ್‌ನ

ಶಾಸಕರಾದ ಶ್ರೀ ಡಿ.ಎ. ಚಿಣ್ಣಪ್ಪ, ಶ್ರೀ ಎ.ಯಂ. ಬೆಳ್ಯಪ್ಪ ಮತ್ತೆ ವಿಧಾನ ಪರಿಷತ್ತ್‌ನ ಯಂ.ಸಿ. ನಾಣಯ್ಯ ಇವರ್ನೆಲ್ಲ ಭೇಟಿ ಮಾಡಿ ಮನವರಿಕೆ ಮಾಡಕನ ನಿಯೋಗ ಹೋದವುಕೆ ವೀರಾಜಪೇಟೆ ಕ್ಷೇತ್ರದ ಶಾಸಕಿ ಶ್ರೀಮತಿ ಸುಮಾವಸಂತನವು ನಮಿಗೆ ಧೈರ ತುಂಬಿದೊ. ಮಾರಣೆ ದಿನ ಪೂರ್ವಾಹ್ನ 10 ಗಂಟೆಗೆ ಶಾಸಕ ಭವನದ ಎದ್‌ರೇ ಪತ್ರಿಕಾಗೋಷ್ಠಿನ ಏರ್ಪಡಿಸಿ ಗೋಷ್ಠಿಲಿ ವಿಷಯ ಮಂಡಿಸಿ ಬೆಂಗಳೂರ್‌ಂದ ಹಿಂದೆಕೆ ಬಂದೊ. ಅದೇ ಸಮಯಲಿ ತಮಿಳ್ ನಾಡ್‌ನ ಕಾವೇರಿ ನೀರ್‌ನ ಹೋರಾಟ ಮತ್ತೆ ಕಾಡ್‌ಗಳ್ಳ ವೀರಪ್ಪನ್ ಅಟ್ಟಹಾಸ ತೀವ್ರವಾಗಿ ನಡೆತಿತ್ತ್. ಆದ್ದರ್‌ಂದ ಸರಕಾರ ಕಡೆಗೆ ಒಂದೆರ್ಡ್ ವರ್ಷಗಳ್‌ಲಿ ಸರಕಾರಂದ ಖಾತೆ ವರ್ಗಾವಣೆಗೆ ಹೋದ್ದಕ್ಕೆ ಪ್ರತಿ ಫಲ ಸಿಕ್ಕಿದಂಗಾತ್. ಇದ್ ಒಂದ್ ಸಮಾಜ ಸೇವೆನ ಸಣ್ಣ ಅನುಭವ.

1980–81ರ ಸಾಲ್‌ಲಿ ಬಲಮುರಿ ಗ್ರಾಮದ ನೆಬ್ಲೂರು ಕೇರಿನ ಕಡೇ ಭಾಗ ಆದ ನಮ್ಮ ಕಟ್ರತನ ಕುಟುಂಬ, ಪೊನ್ನಚ್ಚನ ಕೊಟ್ಟಕೇರಿಯನ ಕುಟುಂಬಗಳಿಗೆ ವಿದ್ಯುತ್ ಇಲ್ಲದಕ್ಕೆ ನಾನ್ ಅರ್ಜಿ ಬರ್ದ್ ಈ ಮೂರು ಕುಟುಂಬದವರ ಸೈನ್ ಹಾಕ್ಸಿ ಮಡಿಕೇರಿನ ಜೂನಿಯರ್ ಇಂಜಿನಿಯರ್ ಕಚೇರಿಗೆ ಅರ್ಜಿ ಕೊಟ್ಟೆ. ಅರ್ಜಿ ಅಲ್ಲೇ ಬಿದ್ದಿತ್ತ್. ಒಂದಿನ ನಿಯೋಗದೊಟ್ಟಿಗೆ ಹೀಗಿ ಎಚ್ಚರಿಸಿರೂ ಪ್ರಯೋಜನ ಆತ್ಲೆ. ಒಂದಿನ ನಾನ್ ಒಬ್ಬನೇ ಅಪರಾಹ್ನ ಮಡಿಕೇರಿಗೆ ಹೋದಂವ ವಿದ್ಯುತ್ ಮುಖ್ಯ ಕಚೇರಿಗೆ ಹೋಗಿ ಮುಖ್ಯ ಇಂಜಿನಿಯರ್ ಹಾಸನದ ಶ್ರೀ ಮುಕುಂದತ್ತೇಳವರ್ನ ಕಂಡ್ ಈ ಮೂರು ಮನೆಗಳಿಗೆ ವಿದ್ಯುತ್ ಇಲ್ಲದೆ ತುಂಬಾ ತೊಂದರೆ ಆಗುಟು. ಹಂಗಾಗಿ ತಾವು ಕ್ರಮ ಕೈಗೊಂಡ್ ವಿದ್ಯುತ್ ಕೊಡ್ಸಿತ ಮನವಿ ಮಾಡಿ, ನನ್ನ ಪರಿಚಯದ ಸಿಬ್ಬಂದಿಗಳೊಟ್ಟಿಗೆ ವಿಷಯನ ಹೇಳ್ಕಂಡಿರಕನ ಅವು ನಮ್ಮ ಮುಖ್ಯ ಇಂಜಿನಿಯರ್‌ರವರ ಇಂಜಿನಿಯರ್ ಸೀಟು ಕೊಡ್ಸಿಕೊಡುವಿರಾತ ನನ್ನನ ಕೇಳಿಕಂಡೊ. ನಾನ್ ಖಂಡಿತಾ ಮಂಜಂಗೆ ಸೀಟ್ ಕೊಡ್ಸಿನೆತ ಭರವಸೆ ಕೊಟ್ಟೆ.

ಒಂದೆರ್ಡ್ ದಿನಗಳ್‌ಲಿ ವಿದ್ಯುತ್ ಕಚೇರಿಂದ ಇನ್ಸ್‌ಪೆಕ್ಟರ್ ಒಳಗೆ 20ಕಂಬಗಳ ವಿದ್ಯುತ್ ಲೈನ್‌ಗೆ ಕಂಬಗಳ್ನ ಮುಖ್ಯ ಇಂಜಿನಿಯರ್ ಮಂಜಂಗೆ ಸುಳ್ಯದ ಕೆವಿಜಿಲಿ ಸೀಟ್ ಕೊಡ್ಸಿನೆತ ಹೇಳ್ದ ಪ್ರಕಾರ, ನನ್ನ ಭರವಸೆ ಮೇಲೆ ವಿದ್ಯುತ್ ಸರಬರಾಜಾತ್. ನಾನ್ ಮಡಿಕೇರಿಗೆ ಹೋಗಿ ಸೀಟ್ ಬಗ್ಗೆ ಕೇಳ್ಕನ, ಅವರ ಮಂಜಂಗೆ ಹಾಸನಲಿ ಸೀಟ್ ಸಿಕಿತ್‌ತ ಹೇಳ್ದೊ. ನನ್ನಂದ ಈ ಮೂರು ಕುಟುಂಬಗಳಿಗೆ ಜಾಗಲಿರುವ ಕಾರ್ಮಿಕರ ಮತ್ತೆ ಇತರ ಮನೆಗಳಿಗೆ ವಿದ್ಯುತ್ ಸಿಕ್ಕಿಯುಟ್ಟು. ಇದ್ ಒಂದ್ ನನ್ನ ಸಾರ್ವಜನಿಕ ಸೇವೆಯೇ.

ಪ್ರವಾಸ : ನಾನ್ ದೊಡ್ಡೆ ಮಾದರಿಲಿ ಪ್ರವಾಸ ಹೋಗದಿದ್ದರೂ ಸಣ್ಣ ಮಾದರಿಲಿ ಹೋಗೊಳೊ. ಉದ್ಯೋಗಲಿ ಇರಕನೂ, ನಿವೃತ್ತಿ ಆದ ಮೇಲೂ ಪ್ರವಾಸ ಹೋಗೊಳೆ ದಕ್ಷಿಣ ಭಾರತದ ಆಂಧ್ರ ಪ್ರದೇಶ ವಿಜಯವಾಡು, ಏಲ್ಲೂರು, ಗುಂಟೂರು, ಚಿತ್ತೂರು ಇಲ್ಲೆಲ್ಲಾ ಮತ್ತೆ ದೇವಸ್ಥಾನಗಳಿಗೂ ಹೋಗೊಳೆ. ವಿಜಯವಾಡಲಿ ಕೃಷ್ಣಾ ನದಿಗೆ ನಿರ್ಮಿಸಿರುವ ಎತ್ತರದ ಸೇತುವೆ ಉದ್ದಕ್ಕೂ ನಡ್ದೊಳೆ. ಆಂಧ್ರಲಿ ಬತ್ತ, ಹೊಗೆಸೊಪ್ಪು, ಹಣ್ಣ್ ಜಾಸ್ತಿ ಬೆಳ್ದರ ನೋಡಿ ಕುಸಿಪಟ್ಟೊಳೆ ಮದ್ರಾಸ್‌ನ ಕೆಲ ಜಾಗಗಳ್ನ ಮತ್ತೆ ಮರೀನ ಬೀಚ್, ನೋಡಿ ಕುಸಿಪಟ್ಟೋಳೆ.ಆಗ ಅಲ್ಲಿ ಅಮೆರಿಕಾದ ಜಲಮಂಜರಿತ್ತೇಳುವ ಸರಕು ಸಾಗಾಣೆನ ಹಡಗು ಬಂದ್ ನಿತ್ತಿತ್ತ್. ಆ ಹಡಗ್‌ದ ಮೇಲೆ ಕೆಳಗೆ ಇಳ್ದ್ ಕುಸಿಪಟ್ಟೊಳೆ. ಉತ್ತರ ಕರ್ನಾಟಕದ ಹುಬ್ಬಳ್ಳಿ,ಧಾರವಾಡ, ಗದಗ್–ಇವುನೆಲ್ಲ ನೋಡಿಯೊಳೆ. ಹುಬ್ಬಳ್ಳಿಯ ವಿದ್ಯಾಕೇಂದ್ರಲಿ ನಾವು ಶಿಕ್ಷಕರ್ ಒಂದ್ ರಾತ್ರೆ ಉಳ್ದಿದ್ದೊ. ಹಂಪೆ, ಹೊಸಪೇಟೆ, ಭದ್ರಾವತಿ, ಜೋಗುಜಲಪಾತ ಇವನ್ನೆಲ್ಲಾ ನೋಡೊಳೆ. ಹಂಪೆಲಿ ಕೆಲ ಕಂಬಗಳಿಗೆ ಕಡ್ಡಿಂದ ತಟ್ಟಿರೆ ಪಿಟೀಲ್ ನಾದ ಕೇಳಿಬಂದದೆ.

ಭದ್ರಾವತಿಲಿ ಬಹಳ ಹತ್ರಂದಲೇ ನೀರ್‌ನ ಮೇಲೆಂದ ಧುಮುಕುವಂಗೆ ಮಾಡಿ ವಿದ್ಯುತ್ ಉತ್ಪಾದನೆ ಮಾಡ್ಯೊಳೊ. ಭದ್ರಾವತಿ

ಸೇತುವೆ ಉದ್ದಕ್ಕೂ ನಡ್ದಾಡ್ದ್ಯೊಳೊ. ಚಿತ್ರದುರ್ಗದ ಕೋಟೆ, ಬೆಟ್ಟದ ಮೇಲೆನ ಕುಪ್ಪದ ಕೊಳ, ಓಬವ್ವನ ಕಿಂಡಿ, ಇದರ್ನೆಲ್ಲ ನೋಡಿಯೊಳೆ. ಉತ್ತರ ಕನ್ನಡದ ಭಟ್ಕಳ, ಗೋಕರ್ಣದ ದೇವಸ್ಥಾನಲಿ ಪೂಜೆ ಮಾಡ್ಸಿಯೊಳೊ. ಮಲ್ಪೆಲಿ ಸಮುದ್ರ ಸ್ನಾನ, ಕಾಪುಲಿ ಲೈಟ್ ಹೌಸ್ ನೋಡ್ನೊಳೊ. ಉಡುಪಿಲಿ ಕನಕನ ಕಿಂಡಿ. ಅಲ್ಲಿನ ದಿಗಂಬರ ಸಮಾಧಿ, ಅಲ್ಲಿಯ ಅತಿ ದೊಡ್ಡ ಮತ್ತೆ ಉತ್ತರದ ಚೌಕಾರಾರಲಿ ಅಟ್ಟಿದ ಕಟ್ಟಿಗೆ ರಾಶಿನ ನೋಡ್ನೊಳೊ. ಧರ್ಮಸ್ಥಳ, ಶ್ರವಣ ಬೆಳಗೊಳ ಇವುನೆಲ್ಲಾ ನೋಡಿ ಕುಸಿಪಟ್ಟೊ. ಹಾಸನದ ಬೇಲೂರು, ಹಳೇ ಬೀಡು, ಚಿಕ್ಕ ಮಂಗಳೂರ್‌ನ ಮುಳ್ಳಯ್ಯನ ಗಿರಿ, ಅದರ ತುದೀಲಿರುವ ದೇವಸ್ಥಾನ, ಅಲ್ಲಿನ ಗುಹೆಗ, ಬಾಬಾ ಬುಡನ್‌ಗಿರಿ, ಅಲ್ಲಿನ ದೇವಸ್ಥಾನ, ಮತ್ತೆ ಅಲ್ಲಿನ ಒಂದ್ ಜಲಪಾತನೆಲ್ಲಾ ನೋಡ್ದೊ. ಅಲ್ಲಿನ ಬೆಟ್ಟಸಾಲ್ ಕಣ್ಣಿಗೆ ಮುದ ಕೊಟ್ಟವೆ. ನಕ್ಸಲರ ಅಡಗು ತಾಣಕ್ಕೆ ಹೇಳಿ ಮಾಡ್ಸಿದಂಗೆ ಉಟ್ಟು. ಕಬ್ಬಿಣದ ಅದಿರು ರಾಶಿನೆಲ್ಲಾ ನೋಡುವಂತದಾಗುಟ್ಟು.

ಕೇರಳದ ಕಣ್ಣಾನೂರು, ಅಲ್ಲಿನ ಸಮುದ್ರದ ಅಲೆಗಳ ಆರ್ಭಟ, ಕಣ್ಣೂರ್‌ನ ಕೋಟೆ, ಅಲ್ಲಿನ ರಸ್ತೆಗಳ ಅಗಲೀಕರಣ, ವಾಹನ ಸೌಕರ್ಯಗಳ ಮುನ್ನೋಟ, ಶುಚಿತ್ವನೆಲ್ಲಾ ನೋಡುವಂತದ್ದೇ. ಪರಷನಿಕಾಡುವ ಮುತ್ತಪ್ಪ ದೇವಸ್ಥಾನ, ಅಲ್ಲಿನ ಪೇಟೆ ಪಟ್ಟಣ ಇವು ಮನಸ್ಸೆಳ್ದವೆ. ಕರ್ನಾಟಕದ ಮೈಸೂರು ಅರಮನೆ, ಮೃಗಾಲಯ, ಚಾಮುಂಡಿ ಬೆಟ್ಟ, ಅಲ್ಲಿನ ಚಾಮುಂಡೇಶ್ವರಿ ದೇವಸ್ಥಾನ, ಕೃಷ್ಣರಾಜ ಸಾಗರ, ಪಕ್ಷಿಧಾಮ, ನಂಜನಗೂಡ್‌ನ ನಂಜುಡೇಶ್ವರ ದೇವಸ್ಥಾನ, ಕಪಿಲ ನದಿಲಿ ಮೀದ್ ನಂಜನಗೂಡುಲಿರುವ ದೊಡ್ಡ ಮಾವುನ ಮರದ ಕೆಳಗಿರುವ ವಿದ್ಯಾಕೇಂದ್ರ ಇವೆಲ್ಲಾ ನೋಡುವಂತದ್ದಾಗುಟ್ಟು. ಬೆಂಗಳೂರಂತೂ ನನ್ನ 5–6 ವರ್ಷಗಳ ವಾಸದ ಅನುಭವ. ಆಗ ವಿಧಾನ ಸೌಧ ಸ್ಥಾಪನೆ ಆಗ್‌ತಿತ್. ದಕ್ಷಿಣ ಕನ್ನಡದ ಸುಳ್ಯ ನಂಗೆ ನೆರಮನೆ ಇದ್ದಂಗೆ. ಕುಸಿ ಆದಂಗೆ ಹೋನೆ, ಬನ್ನೆ. ನಾನ್ ಕೊಡಗ್‌ಲಿ

ಸುತ್ತಾಡ್ಡಕ್ಕಿಂತ ಜಾಸ್ತಿ ಹೊರಗಡೆ ಸುತ್ತಾಡಿಯೊಳೆ. ಕೊಡಗ್‌ನ ಪವಿತ್ರ ಸ್ಥಳವಾದ ತಲಕಾವೇರಿ, ಭಾಗಮಂಡಲ, ಬ್ರಹ್ಮಗಿರಿ ಹತ್ತಿ ಇಳ್ದೊಳೆ. ಇನ್ನೂರಕ್ಕೂ ಹೆಚ್ಚ್ ಮೆಟ್ಟ್‌ಗ ಒಳೊ. ಕೊಡಗ್‌ನ ಅತೀ ಎತ್ತರದ ತಡಿಯಂಡ ಮೋಳ್ ಬೆಟ್ಟದ ತುದಿ ಮುಟ್ಟ ಹತ್ತಿಯೊಳೆ. ತುದೀಲಿ ಒಂದ್ ಸಣ್ಣ ಕೊಳ ಉಟ್ಟು. ಅಲ್ಲಿ ನಾಲ್ಕುನಾಡು ಅರಮನೆಯಸುತ್ತ ಪಿರಂಗಿ ಉಂಡೆಗಳಂಗೆ ಇರುವ ಕಲ್ಲ್‌ನ ರಾಶಿ ನೋಡಿ ಕುಸಿಪಟ್ಟೊಳೆ. ಅಲ್ಲಿ ಒಂದ್ ಹಿರಿಯ ಪ್ರಾಥಮಿಕ ಇಸ್ಕೂಲ್‌ಲಿ ಎ.ಸಿ.ಸಿ. ಅಧ್ಯಾಪಕ ಆಗಿರಕನ, ಸುಮಾರ್ 1964–65ರ ಹೊತ್ತ್‌ಲಿ ಕೊಡಗ್‌ನ ಎ.ಸಿ.ಸಿ. ಅಧ್ಯಾಪಕರ್ ಒಂದ್ ಗೂಡಿ ತಡಿಯಂಡ ಮೋಳ್ ಪ್ರವಾಸನ ಕೈಗೊಂಡಿದ್ದೊ.

ಸಂಘ ಸಂಸ್ಥೆಗಳ ಸದಸ್ಯತ್ವ ಮತ್ತೆ ಇಂದ್‌ನ ಚಟುವಟಿಕೆಗ :

ನಾನ್ ಸಂಘ ಸಂಸ್ಥೆಗಳ ಕಾರ್ಯನಿರ್ವಾಹಕ ಅಲ್ಲರೂ ಹಲವು ಸಂಘ ಸಂಸ್ಥೆಗಳ ಸದಸ್ಯ ಆಗಿಯೊಳೆ. ನನ್ನ ಹುಟ್ಟೂರ್ ಆದ ಬಲಮುರಿ ಗ್ರಾಮದ ಧವಸ ಭಂಡಾರದ ಸದಸ್ಯ ಆಗಿಯೊಳೆ. ಪಾರಾಣೆ ವಿವಿಧೋದ್ದೇಶ ಸಹಕಾರ ಸಂಘದ ಹಾಗೂ ಅದರ ಬ್ಯಾಂಕ್‌ನ ಸದಸ್ಯನೂ ಹೌದು. ಕೊಡಗು ವಿದ್ಯಾಸಂಘದ ಸಹಕಾರ ಪತ್ತಿನ ಸದಸ್ಯ ಆಗಿಯೊಳೆ. ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘದ ಸದಸ್ಯ. ಮಡಿಕೇರಿನ ವಿವಿಧೋದ್ದೇಶದ ಸಹಕಾರ ಸಂಘದ (ಜನತಾ ಬಜಾರ್) ಸದಸ್ಯನೂ ಹೌದು. ಕೊಡಗು ಜೇನ್ ನೊಣ ಸಹಕಾರ ಸಂಘ, ವೀರಾಜಪೇಟೆ ಇಲ್ಲಿ ಸದಸ್ಯ ಮತ್ತೆ ಕೊಡಗು ಗೌಡ ನಿವೃತ್ತ ನೌಕರರ ಸಂಘದ ಸದಸ್ಯ. ವೀರಾಜಪೇಟೆಕ್ಷೇತ್ರದ ನಿವೃತ್ತ ನೌಕರರ ಸಹಕಾರ ಸಂಘದ ಸದಸ್ಯ , ಮಡಿಕೇರಿಕ್ಷೇತ್ರದ ನೌಕರರ ಹಾಗೂ ಜಿಲ್ಲಾ ಹಿರಿಯ ನಾಗರಿಕರ ಸಂಘದ ಸದಸ್ಯನೂ ಆಗ್ಯೊಳೆ. ರಾಜ್ಯದ ಹಿರಿಯ ನಾಗರಿಕರ ಒಕ್ಕೂಟದ ಸದಸ್ಯನೂ ಹೌದು. ನನ್ನನ ಕೊಡಗು ವಿದ್ಯಾ ಸಹಕಾರ ಸಂಘದವತಿಂದ ನನ್ನ 88ನೇ ವರ್ಷದ ಪ್ರಾಯಲಿ

ಮತ್ತೆ ಸಂಘದ 88ನೇ ವಾರ್ಷಿಕೋತ್ಸವದ ಸಮಂಯಲಿ ಸನ್ಮಾನಿಸಿಯೊಳೊ. ನನ್ನ 88ನೇ ವರ್ಷ ಪ್ರಾಯನೂ ಮತ್ತೆ ಸಂಘದ 88ನೇ ವಾರ್ಷಿಕೋತ್ಸವಕ್ಕೂ ತಾಳೆ ಹೊಂದಿದ ಸಂದರ್ಭಲಿ ನನ್ನನ ಸನ್ಮಾನಿಸಿರ್‌ದ ನನ್ನ ಮನ್‌ಸ್‌ಗೆ ತುಂಬ ಕುಸಿಕೊಟ್ಟುಟು.

ನಾನ್ ಈಗ ನನ್ನ ಬಿಡುವಿನ ಸಮಯಲಿ ಲೇಖನಗಳ ಬರೆಕೆ ಪ್ರಯತ್ನ ಮಾಡ್ತೊಳೆ. 2013ರ ನವೆಂಬರ್ ತಿಂಗಲಿ ಕ್ರಮವಾಗಿ ಕೊಡಗ್‌ನ ಶಕ್ತಿ ದಿನ ಪತ್ರಿಕೆಲಿ "ಹಿರಿಯರ ಅನುಭವ ಮಾಲಿಕೆ"ತ್ತೇಳುವ ವಿಭಾಗಲಿ "ಶಿಕ್ಷಣದಲ್ಲಿ ಶಿಕ್ಷಕರಿಗೆ ವಿಷಯವಾರು ತರಬೇತಿ"ತ್ತೇಳುವ ವಿಷಯಗಳ ಕುರ್ತ್ ಲೇಖನಗಳ್ನ ಬರ್‍ದೊಳೆ. ಈಗ ತಾನೆ 11.4.2014, 19.4.14 ಮತ್ತೆ 27.4.14ರ ಶಕ್ತಿ ದಿನ ಪತ್ರಿಕೆಲಿ ಮೂರ್ ಕಂತ್‌ಗಳ್‌ಲಿ "ಕೊಡಗು ಅಂದು–ಇಂದು"ತ್ತೇಳುವ ಶಿರೋನಾಮಲಿ ಪ್ರಕಟ ಆತ್. ನನ್ನ ಅನಿಸಿಗಳ್ನ ಲೇಖನ ರೂಪಲಿ ಬರ್‍ದ್ ಕಳ್ಸಿಕೆ ಪತ್ರಿಕೆಯವು ಕೇಳ್ತಾ ಒಳೊ. 20–8–2009ರ್‌ಲಿ ಪಾರಾಣೆ ಹೈಸ್ಕೂಲ್ ಶತಮಾನೋತ್ಸವ ಸ್ಮರಣ ಸಂಚಿಕೆಗೆ ಗೌಡ ಸಂಸ್ಕೃತಿ ಬಗ್ಗೆ ಕೊಟ್ಟ ಲೇಖನ ಮುದ್ರಣ ಆಗುಟ್ಟು. 2011 ಮಾರ್ಚಿ 30–31 ಕೊಡಗು ಜಿಲ್ಲಾ 8ನೇ ಕನ್ನಡ ಸಾಹಿತ್ಯ ಸಮ್ಮೇಳನದ ಮೂರ್ನಾಡು ಹೋಬಳಿ ಮಟ್ಟದ "ನೆನಪು"ತ್ತೇಳುವ ಸ್ಮರಣ ಸಂಚಿಕೆಗೆ "ಹಿಂದಿನ ಕಾಲದ ಮಕ್ಕಳ ಆಟಪಾಠಗಳ ಸನ್ನಡತೆ"ತ್ತೇಳುವ ಲೇಖನನೂ ಮುದ್ರಣ ಆಗುಟು. ಹಿಂಗೆ ಇತ್ತೀಚೆಗೆ ಮೆದುಳಿಗೆ ಮೇವು ಕೊಡುವ ಕೆಲ್ಸಗಳ ಮಾಡಿಕೆ ಪ್ರಯತ್ನ ಪಡ್ತಾ ಒಳೆ.

"gdle mind is a devells workshop"ತ ಹೇಳುವಂಗೆ (ಸೋಮಾರಿತನವೇ ಭೂತದ ಕಾರ್ಖಾನೆ)ಸೋಮಾರಿತನ ಹೋಕುತ್ತಾದರೆ ಯಾವ್ದಾರ್ ಒಳ್ಳೆ ಕೆಲ್ಸಗಳ್ನ ಮಾಡಿಕಾದೆ. "ಕಾಯಕವೇ ಕೈಲಾಸ" ತ್ತೇಳ್ದು ಬಸವಣ್ಣನವರ ತತ್ತ್ವನ ಅನುಸರ್‍ಸದಿದ್ದರೆ ಕೈ ಸುಟ್ಟ್ ಕಂಡಂಗಾದೆ. ತತ್ತ್ವದ ಗೂಡಾರ್ಥ ಕಳಬೇಡ, ಕೊಲಬೇಡ, ಹುಸಿಯ

ನುಡಿಯೂ ಬೇಡ, ಅನ್ಯರನು ಅಸಹ್ಯ ಪಡಬೇಡ, ತನ್ನ ಬಣ್ಣಿಸ ಬೇಡ, ಇದಿರ ಹಳಿಯಲೂ ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಈ ತತ್ವಗಳ ಪ್ರಕಾರ ನಾವು ಕೆಲ್ಸ ಮಾಡ್ರೆ ಮಾತ್ರ ಕೆಲ್ಸಲಿ ಜಯ ಕಾಣಕ್. ನಾನ್ ನನ್ನ ಜೀವಿತಲಿ ಈ ತತ್ವನ ಅನುಸರಿಸಿ ಒಳಗೆ ಹೊರಗೆ ಕೆಲ್ಸಗಳ್ನ ಮಾಡಿ ಜಯಿಸೊಳೆ. ಅರುವತ್ತು ದಾಟಿದ ಮೇಲೆ ಅರಳೋ, ಮರಳೋತ್ತೇಳುವ ಗಾದೆ ಮಾತುಟ್ಟು. ಆದರೆ ನಾ ಹೇಳ್ದಾದರೆ ಅದ್ ಒಂದ್ ಭ್ರಮೆ. ನಾವು ದೇವ್ರ್‌ಲಿ ಮೊರೆ ಹೋಕು. ನಮ್ಮ ಬುದ್ಧಿ ಶಕ್ತಿನ ಚುರುಕು ಮಾಡೊಕು. ಮನ್ಸಿದ್ದರೆ ಮಾರ್ಗತ್ತೇಳುವಂಗೆ ಮನ್ಸ್‌ನ ಭಾವನೆಗಳ್ನ ಸ್ಥಿರಗೊಳ್ಸೊಕೂ. ಏಕಾಗ್ರತನ ಬರೊಕುತಾದರೆ ದೇವ್ರ್‌ನ ಧ್ಯಾನ ಮಾಡೊಕು. ಪ್ರಕೃತಿನೇ ದೇವ್ರ್. ನಮ್ಮ ಕಣ್ಣ್‌ನ ಮುಂದೆ ಕಾಂಬೊದೆಲ್ಲಾ ದೇವರೇ. ಪಂಚಭೂತಗಳಿಗೆ ನಮಸ್ಕಾರ ಮಾಡ್ಕಂಡ್ ಈ ಲೇಖನನ ಮುಕ್ತಾಯ ಮಾಡಿನೆ.

ಕುಟುಂಬಕ್ಕೆ ಸಲ್ಲಿಸಿದ ಔದಾರ್ಯ :

ಓದುಗರ್ ನನ್ನನ ನೀನ್ ಅಂತರಂಗಲೂ ಬಹಿರಂಗಲೂ ಸಾಧನೆ ಮಾಡದಿದ್ದರೂ ಸಣ್ಣ ಪುಟ್ಟ ಸಾಧನೆಗಳ್ನ ಮಾಡಿ ಜಯಿಸೊಳ. ಆದರೆ ನಿನ್ನ ಕುಟುಂಬಕ್ಕೆ ಕೊಟ್ಟ ಕೊಡುಗೆ ಎಂತದ್ದ್‌ತ ಪ್ರಶ್ನೆ ಮಾಡಿಕೆ ನಾನ್ ಅದ್ಕೆ ಉತ್ತರ ಕೊಡಿಕಾದೆ. ನಾನ್ 1978–79ರ್‌ಲಿ ನನ್ನ ಸೊಂತ ಮನೆಗೆ ಕುಡೆಕೆ ನೀರ್‌ನ ಬಾವಿ ಇಲ್ಲದ ಕಾರಣ ಮಡಿಕೇರಿ ತಾಲೂಕು ಬೋರ್ಡಿಗೆ ಅರ್ಜಿಕೊಟ್ಟೆ. ಆಗ ಸದ್ರಿ ಬೋರ್ಡ್ ಅಧಿಕಾರಿಗ ಮತ್ತೆ ಬೋರ್ಡ್‌ನ ಸದಸ್ಯರ್ ಅರ್ಜಿಗೆ ಮನ್ನಣೆ ಕೊಟ್ಟ್ ಬಾಮಿ ಮಂಜೂರ್ ಮಾಡ್ಡೊ. ಆದರೆ ಸೊಂತ ಮನೆಗಳಿಗೆ ಬಾಮಿ ಮಂಜೂರು ಮಾಡ್ದು ಬೋರ್ಡ್‌ನ ಕಾನೂನಿಗೆ ವಿರೋಧ ಆದ್ದರ್‌ಂದ ತಾಲೂಕು ಬೋರ್ಡ್ ಅಧ್ಯಕ್ಷರಾದ ಶ್ರೀ ನಾಯಕಂಡ ಸನ್ನಿ ನಂಜಪ್ಪನವು ನನ್ನನ ನೋಡಿ ಬಾಮಿ ಮಂಜೂರಾಗುಟು, ಆದರೆ ಸೊಂತ ಮನೆಗೆ ಆದ್ಲೆ, ಐನ್ ಮನೆಗೆ ಮಾಡ್ಸಕ್. ಬೇಡತಾದರೆ ರದ್ದಾದೆತ ಹೇಳ್ಡೊ. ನಾನ್

ಬೇಡತ ಹೇಳದೆ ಐನ್‌ಮನೆಗೆ ಕುಡಿವ ನೀರ್‌ನ ಬಾವಿ ತೋಂಡಿಕೊಡಿತ ಕೇಳ್ಕಂಡೆ. ಹಂಗಾಗಿ ನನ್ನಂದ ಐನ್‌ಮನೆಗೆ ಕುಡಿವ ನೀರ್‌ನ ಬಾವಿ ಆತ್. ಎರಡನೆದಾಗಿ ನಮ್ಮ ಮನೆ ಮಾಚಯ್ಯನವು ತಮ್ಮ ಮನೆಗೆ ಒತ್ತಾಗಿ ಮತ್ತೊಂದ್ ಕೋಂಬರೆ ಮಾಡಿಕೆ ಜಾಗದ ಕೊರತೆ ಇತ್ತ್. ನನ್ನೊಟ್ಟಿಗೆ ನಮ್ಮ ಜಾಗ ಬುಟ್ಟ್ ಕೊಡಿಕೆ ಕೇಳ್ಕಂಡೊ. ನಮಗೆ ಸೇರ್ದ ಜಾಗನ ಕೋಂಬರೆ ಮಾಡಿಕಂಬಕೆ ಬುಟ್ಟ್ ಕೊಟ್ಟೊಳೆ. ಮೂರನೇದಾಗಿ ಸದ್ರಿ ಮಾಚಯ್ಯನವರ ಸಣ್ಣ ಮಂಜ ಡಾಲು ಮಧುರಾಜು ತನ್ನ ಎಸ್.ಎಸ್.ಎಲ್.ಸಿ. ತೇರ್ಗಡೆ ಆದ ಮೇಲೆ ಓದ್ ಮುಂದೊರ್ಸಿಕೆ, ಫೀಸ್ ಕಟ್ಟಿಕೆ ದುಡ್ಡುದ್ ಕಷ್ಟ ಇದ್ದ ಕಾರಣ ನನ್ನೊಟ್ಟಿಗೆ ಫೀಸ್ ಕಟ್ಟಿಕೆ ದುಡ್ಡು ಬೇಕುತ ಕೇಳಿಕಣ್ತ್. ಹಂಗಾಗಿ ನಾ ಅವಂಗೆ ರೂ.400=00ನ ಉದಾರಾಗಿ ಕೊಟ್ಟೊಳೆ. ನಾಲ್ಕನೇದಾಗಿ ಕಟ್ರತನ ಕುಟುಂಬಕ್ಕೆ ಹೋಗಿ ಬಾಕೆ ಪ್ರ್ಯಾನ್ ದಾರಿದ್ ಸೌಕರ್ಯ ಇಲ್ಲದೆ ಪರದಾಡುವ ಸ್ಥಿತಿ ಬಾತ್. ಆಗ ಬೊಳ್ತಂಡ ಕುಟುಂಬದವರ ಬಾಣೆ ಜಾಗಕ್ಕಾಗಿ ಕುಟುಂಬದ ಪಟ್ಟೆದಾರ ಶ್ರೀ ಬಿದ್ದಂಡ ಕುಶಾಲಪ್ಪನವು ಮತ್ತ್ ಅವರ ಮನೆಯವರಲ್ಲಿ ವಿನಂತಿ ಮಾಡ್ಕಂಡದ್ದರ್‌ಂದ ನನ್ನ ಮನವಿಗೆ ಗೌರವ ಕೊಟ್ಟ್ ಸುಮಾರ್ ಒಂದ್ ಕಿಲೋಮೀಟರ್ ನಷ್ಟ್ ದೂರಕ್ಕೆ ಅವರ ಕುಟುಂಬದವರ ಕಾಫಿ ತೋಟದ ಎರಡೂ ಕರೆಗಳ್‌ಲಿ ತಂತಿಬೇಲಿ ಹಾಕಿ ನಮ್ಮ ಕುಟುಂಬಕ್ಕೆ ಹೋಗಿ ಬಾಕೆ ವಾಹನ ಸೌಕರ್ಯದ ದಾರಿ ಮಾಡ್ಸಿ, ಶಾಸಕರಾದ ಶ್ರೀ ಕೆ.ಜಿ.ಬೋಪಯ್ಯನವರ ಸಾಯಂದ ಡಾಮರೀಕರಣ ಮತ್ತ್ ಜಲ್ಲಿ ಕಲ್ಲ್‌ದ್ ದಾರಿ ಮಾಡ್ಸೊಳೆ. ಹಂಗೇ ಕುಟುಂಬದ ಸರ್ವ ಸದಸ್ಯರ ಮನೆಗಳಿಗೆ ನಾನ್ ಕ್ರಯಕ್ಕೆ ತಕಂಡ ಜಾಗಕ್ಕಾಗಿ ದಾರಿ ಬುಟ್ಟ್ ಕೊಟ್ಟೊಳೆ. ನಮ್ಮ ಮನೆ ಕೆ.ಸಿ. ಸೋಮಯ್ಯನವುಕೆ ನೆಟ್ಟಂಗೆ ಅವರ ಮನೆಂದ ಅವರ ಜಾಗಕ್ಕೆ ಹೋಕೆ ನನ್ನ ಮಂಜ ಶಿವರಾಮನ ಆಸ್ತಿಗಾಗಿ ದಾರಿ ಬುಟ್ಟ್ ಕೊಟ್ಟೊಳೆ. ನಾನ್ ನಮ್ಮ ಊರು ಒರುವೆ ಫಂಡ್‌ನ ಸಂಘಕ್ಕೆ 30 ಉತ್ತಮ

ದರ್ಜೆನ ಸ್ಟೀಲ್ ಬಟ್ಲ್‌ಗಳ ಮುಫತ್ತಾಗಿ ಕೊಟ್ಟೊಳೆ. ಪಾರಾಣೆ ಪ್ರೌಢಶಾಲಾ ತೋಟಗಳ ನಿಧಿಗೆ ಧನ ಸಹಾಯ ಮಾಡೊಳೆ. ಮೂರ್ನಾಡ್ ಪ.ಪೂ.ಕಾಜೇಜಿಗೆ ದೊಡ್ಡ ರೀತಿಲಿ ನಾಮ ಫಲಕ ಮಾಡಿ ಕೊಟ್ಟನೆತ ಹೇಳಕನ ಆಡಳಿತ ಮಂಡಲಿಯವರ ಅಸಹಕಾರದ ಕೈಬುಟ್ಟೆ. ನಮ್ಮ ಕೇರಿನ ಮಾಂಗೋಟು ಶಾಸ್ತಾವು ದೇವರ ನಿಧಿಗೆ ರೂ.500=00ಧನ ಸಹಾಯ ಮಾಡೊಳೆ. ಹಿಂಗೆ ನಾನ್ ಸಣ್ಣ ಪುಟ್ಟ ಧರ್ಮಕಾರ್ಯಗಳ ಮಾಡ್ಕಂಡ್ ತೃಪ್ತಿ ಪಟ್ಟ್ ಕಂಡೊಳೆ. ನಾನ್ ಆರೋಗ್ಯಂದ ಶತಾಯುಷಿ ಆಗಿ ಬಾಳಿ ಬದ್ಕಿರೆ ಕಡೆಲೊಂದ್ ದೊಡ್ಡ ಧರ್ಮ ಕಾರ್ಯವಾದ ಈ ಶರೀರನ ದಾನ ಮಾಡೊಕೊತ್ತೇಳುವ ಆಸೆನ ದೇವರ ತೀರ್ಮಾನಕ್ಕೆ ಬುಟ್ಟೊಳೆ.

ನಾನ್ ಈಗ ಮಕ್ಕಳೊಟ್ಟಿಗೆ, ಪಿಳ್ಳಿಗಳೊಟ್ಟಿಗೆ, ಮರಿ ಪಿಳ್ಳಿಗಳೊಟ್ಟಿಗೆ ಜೊತೆಯಾಗಿ ಒಂದ್ ರೀತಿ ಮೌನಾಧರಿತ ಜೀವನನ ಬಹು ಸೂಕ್ಷ್ಮಲಿ ನಡೆಸ್ತೊಳೆ ನಿತ್ಯ ಒಂದೆರ್ಡ್ ಪತ್ರಿಕೆಗಳ ಓದುಗಾರಿಕೆಯೊಟ್ಟಿಗೆ ಮತ್ತೆ ಫಿಲಿಪ್ಸ್ ರೇಡಿಯೊ ಒಂದರ್ನ ನನ್ನ ಸಂಗಾತಿಯಾಗಿ ಮಾಡ್ಕಂಡ್ ಅಂದಾಜ್ 0.75ಎಕರೆ ಕಾಫಿ ಕೃಷಿ ಮತ್ತೆ ಒಳ್ಳಮೆಣ್ಸ್ ತೋಟಲಿ ಸಣ್ಣಪುಟ್ಟ ಕೆಲ್ಸಗಳ್ನ ಮಾಡಿಕಂಡ್ ಮನೆ ಮುಂದೆನ ಸಣ್ಣ ಹೂವ್‌ನ ತೋಟದ ಕೆಲ್ಸಗಳ ಕಡೆ ಗಮನ ಹರ್ಸಿಕಂಡ್,ವೃತ್ತ ಪತ್ರಿಕೆಗಳ್ನ ತಾಕೆ ಸುಮಾರ್ ಎರಡ್ ಕಿ.ಮೀ.ದೂ ನಡ್ಕಂಡ್ ಹೋಗಿ ಬನ್ನೆ. ಒಂದೊಂದ್ ಸತಿ ಲೇಖನಗಳ ಅಗತ್ಯ ಬಾಕನ, ಮಾದ್ಯಮಗಳಿಗೆ ಅರ್ಪಿಸಿಕಂಡ್ ದೇವ್ರು. ಸಮಯ ವ್ಯರ್ಥಾದರೆ ದೇವ್ರುನ ವಂಚಿಸಿದಂಗೆ. ಮತ್ತೆ ಹಿರಿಯಂವ ಆಗಿದ್ದ್‌ಕಂಡ್ ಕುಟಂಬದ ಸದಸ್ಯರೊಟ್ಟಿಗೆ ಸಹಕರ್ಸಿ ಕಂಡ್, ಬಂಧು ಬಾಂಧವರ್‌ಲಿ ಕಷ್ಟಸುಖಕ್ಕೂ ಭಾಗಿಯಾಗಿ ಒಡನಾಡಿಕಂಡ್ ಸಭೆ ಸಮಾರಂಭಗಳ್‌ಲಿ ಕೂಡಿಕಂಡ್ ಒಳೆ.

ಅಪ್ಪ ಅವ್ವ ಮಕ್ಕಳ ಹೊತ್ತ್-ಹೆತ್ತ್, ಪೋಷಿಸಿ-ಬೆಳ್ಸಿ,ವಿದ್ಯೆ

ಕೊಟ್ಟ್, ಯವ್ವನಲಿ ಮೊದುವೆ ಮುಂಜಿ ಮಾಡ್ಸಿ, ಮಕ್ಕಳಿಗೆ ಮಕ್ಕಳಾಗಿ, ಪಿಳ್ಳಿಕ್ಕಾಗಿ ಇರುವಂತ ಮಕ್ಕಳ್ನ ಒಂದೊಂದ್ ಸತಿ ನಮ್ಮ ಮಕ್ಕತ ಉದ್ಧಾರ ಮಾಡಿಕೆ ಹೆದ್ರಿಕೆ ಭಾವನೆ ಬಂದದೆ.ಯಾಕೆತ್ತೇಳ್ರೆ ಅವು ಸಂಸಾರದ ಭಾರನ ಹೊತ್ತ್ ಕಂಡ್ ಅವರ್‌ದೇ ಆದ ಕೆಲ್ಸಗಳೊಂದಿಗೆ ತುರ್ತು ಪರಿಸ್ಥಿತಿಲಿರಿಕನ ಅಮ್ಮ ಅಪ್ಪತ ಕರೆಕಾಗಲಿ, ಮೂರ್ನಾಕ್ ಒಳ್ಳ ಮಾತಾಡಿಕೂ ಸಮಯ ಮಾಡ್ಕಣದೆ ಮತ್ತೆ ಸಾಯ ಮಾಡದೆ ಇದ್ದರೆ ನಾವ್ ಅವರ ನಮ್ಮ ಸಹೋದರರೋ, ನೆರೆಕರೆಯವೋ ಇಲ್ಲರೆ ಬಂಧುಮಿತ್ರರೊತ ಭಾವಿಸಿರೆ ತಪ್ಪಾಕಿಲೆತ ನನ್ನ ಅನುಭವನ ಅನಿಸಿಕೆ. ಆದರೆ ನಾವ್ ಪಾರಮಾರ್ಥಿಕವಾಗಿ ಲೌಕಿಕ ಜೀವನಕ್ಕೆ ಕಾಲ್ ಇರಿಸಿದ ಮೇಲೆ ಧರ್ಮಕ್ಕೆ ಅಪವಾದ ಮಾಡದೆ, ಮಕ್ಕತ ಒಪ್ಪಿಕಂಬಕಾದೆ. ಆದರೆ ಇದ್ ಎಲ್ಲವುಕೂ ಅನ್ಸಿಕಿಲೆ. "ಬಲ್ಲವನೇ ಬಲ್ಲ ಬೆಲ್ಲದ ರುಚಿಯ"ತ್ತೇಳುವಂಗೆ ನನ್ನಂಗೆ ಒಂಟಿತನದ ಜೀವನ ನಡ್ಸುವವಂಗೆ ಗೊತ್ತು. ಒಂಟಿತನ ಜೀವನ ಒಂದ್ ಐತಿಹಾಸಿಕ ಜೀವನ. ಅದರ್ನ ವಿವರಿಸಿಕಾದ್ಲೆ. ನಾನ್ ಹಿರಿಯ ನಾಗರಿಕ ಸಂಘ ಸಂಸ್ಥೆಗಳ ಸಭೆಗಳ್‌ಲಿ ಹಾಜರಾಗಿ ಒಬ್ಬೊಬ್ಬ ಹಿರಿಯ ನಾಗರಿಕರ್ ತಮ್ಮ ಮಕ್ಕಳ ತಪ್ಪುಗಳ್ನ ಕೋರ್ಟ್ ಮೆಟ್ಟ್‌ಗಳ ಮುಟ್ಟ ತಾದು ದುರದೃಷ್ಟಕರ ಸಂಗತಿ. ಇದ್ ಪೋಷಕರ್‌ದೇ ತಪ್ಪುತ್ತೇ ನಾನ್ ವಾದಿಸಿನೆ. ಯಾಕೆತ್ತೇಳ್ರೆ ಪೂರ್ತಿಯಾಗಿ ತಮ್ಮ ಆಸ್ತಿಗಳ್‌ನ ಮಕ್ಕಳವಶಕ್ಕೆ ಒಪ್ಪಿಸಿ, ಕೊಟ್ಟುದರ ತಿಂದ್‌ಕಂಡ್ ಬಿದ್ದ್‌ಕಂಬಂಗೆ ಮಾಡ್ದ್ ಪೋಷಕರ ತಪ್ಪು. ಮತ್ತೆ ಹೊಂದಿಕಂಡ್ ಹೋಗುವ ಅಭ್ಯಾಸ ಇಲ್ಲದೆ ಇರ್ದು ಮತ್ತೊಂದ್ ತಪ್ಪು. ಸಂಸಾರಲಿ ಹೊಂದಾಣಿಕೆ ಬಹುಮುಖ್ಯ. ಮಾನವನ ಜೀವನ ಅವರವರ ಭಾವಕ್ಕೆ ಅವರವರ ಭಕುತಿಗೆ ಹೊಂದಿಕಂಡಂಗೆ ಉಟ್ಟು. "ಎಲ್ಲರೊಳಗೊಂದಾಗು ಮಂಕುತಿಮ್ಮ" ಎಂಬ ಮಂಕುತಿಮ್ಮನ ಕಗ್ಗದಂಗೆ ಹೊಂದಿಕಂಡ್ ಬದ್ಕುದೇ ನಮ್ಮೆಲ್ಲರ ಕರ್ತವ್ಯ.ಇದ್ ಒಂದ್ ಜೀವನದ ಅವಿಭಾಜ್ಯ ಅಂಗ ಹಾಗೂ ಜೀವನದ

ರೀತಿ.

ಕಡೆದಾಗಿ ನಮ್ಮನ ಭೂಮಿಗಿಳ್ಸಿದ ದೇವ್ರುಗೂ, ನಮ್ಮ ಮುಂದೆ ಕಾಣ್ತಿರುವ ಪಂಚಭೂತಗಳಾದ ನೀರ್, ಗಾಳಿ, ಬೆಳಕ್, ಭೂಮಿ ಮತ್ತೆಆಕಾಶ ಇದ್ಕೆಲ್ಲಕೂ ಚಿರಋಣಿಯಾಗಿ ನಾವೆಲ್ಲವೂ ಪ್ರೀತಿ ವಿಶ್ವಾಸಂದ, ಸೌಹಾರ್ದತೆಂದ, ತಾಳ್ಮೆಂದ ಮತ್ತೆ ಬದ್ಧತೆಂದ ಪಾರದರ್ಶಕ ಆಗಿ ಪರಸ್ಪರ ಜಾತಿ, ಧರ್ಮ ಭೇದನ ಬುಟ್ಟ್ ಈ ಅಖಂಡ ಭಾರತದ ಪುಣ್ಯ ಭೂಮಿಲಿ ದ್ವೇಷ, ಅಸೂಯೆಗಳ್ನ ದೂರುಮಾಡಿ ಒಂದಾಗಿ ಬಾಳಿ ಬದ್ಕನೋತ ಆಶಿಸಿ ಈ ನನ್ನ ಒಂದ್ ತಿಳ್ದೊ ತಿಳಿಯದೊಯೋ ಬರ್ದ ಬೆಳ್ಳಿಮುಷ್ಟಿ ಲೇಖನಕ್ಕೆ ವಿರಾಮ.

* * * * *

೩. ಹೆಣ್ಣ್, ಹೊನ್ನ್, ಮಣ್ಣ್

ಮಾನವನ ಜೀವನಲಿ ಬಾಲ್ಯ, ಯೌವನ ಮತ್ತೆ ಮುಪ್ಪು ಸರ್ವೇಸಾಮಾನ್ಯ. ಗಂಡಾಗಲಿ ಹೆಣ್ಣಾಗಲಿ ಈ ಮೂರ್ ಹಂತಗಳ್ನ ಧೈರಂದ ಎದ್ರಿಸಿಕಾದೆ. ಮಾನವ ಎಲ್ಲವೂ ಒಂದೇ ರೀತಿಂದ ಜೀವನ ಮಾಡ್ತಾ ಇಲ್ಲೆ. ಕೆಲವು ಬಡವು ಇರುವೊ. ಕೆಲವು ಶ್ರೀಮಂತರ್ ಇರುವೊ. ಮತ್ತೆ ಕೆಲವು ದಿನದ ಜೀವನಕ್ಕೂ ಕುತ್ತು ಇದ್ದರೂ ಇರ್‌ವೋ. ಹಿಂಗಿದ್ದರೂ ಕೂಡ ಮಾನವ ಧೈರ್ಯಂದ ಕಷ್ಟಸುಖಗಳ್ನ ಸಹಿಸಿಕಂಡ್ ಬದ್ಕಿಕಾದೆ. ಮನ್ಸ ಗಂಡಾಗಲಿ, ಹೆಣ್ಣಾಗಲಿ, ಪ್ರಾಯಕ್ಕೆ ಬಂದ ಮೇಲೆ ಒಬ್ಬರ್‌ನೊಬ್ಬ ಪ್ರೀತಿಸಿ, ಹಿರಿಯರ ಆಶೀರ್ವಾದ ಪಡ್ದ್ ಮೊದುವೆಯಾಗಿ ಸಂಸಾರಸ್ಥರಾಗಿ ಜೀವನ ನಡ್ಸಿಕಾದೆ. ಇದ್ ಬ್ರಹ್ಮಕಲ್ಪಿತ. ಹೆಣ್ಣ್ ಒಲಿದರೆ ನಾರಿ, ಮುನಿದರೆ ಮಾರಿ. ಹೆಣ್ಣ್ ಒಲ್ದರೆ ಬಾಳ್ ಬಂಗಾರಾದೆ. ಸಿಟ್ಟಾದರೆ ಹೀನ ಸ್ಥಿತಿನ ಅನುಭವಿಸಿಕಾದೆ. ಹಣೆಬರ ಯಾರಿಗೂ ಗೊತ್ಲೆ. ಬ್ರಹ್ಮಂಗೆ ಮಾತ್ರ ಗೊತ್ತು. ಆದ್ದ್‌ರ್‌ಂದಲೇ ಈಗಳೂ ಕುಲಗೋತ್ರ. ಜಾತಕಫಲ ಹೊಂದಾಣಿಕೆನ ಪರೀಕ್ಷಿಸಿ ಹೆಣ್ಣ್ ಕೊಟ್ಟವೆ. ಎಲ್ಲವೂ ಆಸೆಪಡ್ದು ತಮ್ಮ ಮಗಳ ಬಾಳ್ ಉತ್ತಮ ಆಗಲಿತ. ಇಡೀ ಲೋಕನೇ ಹೆಣ್ಣ್‌ತ್ತೇಳುವ ಜೀವನಕ್ಕೆ ಹೆಚ್ಚ್‌ನ ಸ್ಥಾನಮಾನ, ಗೌರವನ

ಚಾಚೂ ತಪ್ಪದೆ ತಿಳ್ಕಂಡ್ ಕುಟುಂಬಕ್ಕೆ ಬಾಳ ಬೆಳ್ಕಾಗಿ ನಂದಾದೀವಿಗೆಯಂಗೆ ಬೆಳ್ಕ್ ಚೆಲ್ಲಿಕಂಡ್ ವಂಶೋದ್ಧಾರಕ್ಕೆ. ಶ್ರಮಿಸಿಕಂಡ್, ಶ್ರದ್ಧೆ ಭಕ್ತಿಂದ ಹೆಣ್ಣಿಗೆ ಕೊಟ್ಟ ಸ್ಥಾನಮಾನಗಳ್ನ ಬೆಳ್ಸಿ, ಉಳ್ಸಿ ಬಾಳೊಕುತ ಇಂದ್‌ನ ಹೆಣ್ಣ್ ಮಕ್ಕಳಿಗೆ ನನ್ನ ಕೆಮಿಮಾತ್. ಹಂಗೇ ನಾನ್ ಈ ಮೂಲಕ ಒಂದ್ ಕುಟುಂಬದ ಹೆಣ್ಣ್, ಹೊನ್ನು, ಮಣ್ಣ್‌ನ ಮಾದರಿ ವಿಶ್ಲೇಷಣೆನ ನಿರೂಪಿಸಿನೆ.

ಇಂದ್ ನಮ್ಮ ವಿಶಾಲ ಕರ್ನಾಟಕಲಿ ಮಾತ್ರ ಅಲ್ಲ, ಭಾರತದ ಭೂಪಟಲಿ ಗುರುತು ಮಾಡಿಕಂಡಿರುವ ದ.ಕನ್ನಡ ಜಿಲ್ಲೆನ ಸುಳ್ಯ ತಾಲೋಕ್‌ನ ಕುರುಂಜಿ ಕುಟುಂಬದ ದಿವಂಗತ ಶ್ರೀ ಮಹಾಲಿಂಗ ಗೌಡ, ಶ್ರೀಮತಿ ಲಕ್ಷ್ಮಿ ಮಹಾಲಿಂಗ ಗೌಡರ ಎರಡನೇ ಮಂಜ ದಿವಂಗತ ವೆಂಕಟರಮಣ ಗೌಡರ್ 26-12-1928ರಂದ್ ಹುಟ್ಟಿದೊ. ಇವರ ಅಣ್ಣ ದಿವಂಗತ ವಿಶ್ವನಾಥಗೌಡ. ಇವರ ತಮ್ಮಂದರ್ ಕರುಣಾಕರಗೌಡ, ಗೋಪಾಲಗೌಡ, ಶಿವರಾಮಗೌಡ, ಮತ್ತೆ ಮನಮೋಹನ. ಹಿಂಗೆ ನಾಕ್ ಜನ ತಮ್ಮಂದರ್ ಮತ್ತೆ ಒಬ್ಬ ಸಹೋದರಿ ಪದ್ಮಾವತಿ. ಕುರುಂಜಿ ಕುಟುಂಬಲಿ ಎಲ್ಲವೂ ಒಟ್ಟಿಗೆ ಅವಿಭಕ್ತ ಕುಟುಂಬಲಿ ವಾಸ್‌ಸ್ತ್ತಿದ್ದೊ. ಇವರ ಅಣ್ಣ ವಿಶ್ವನಾಥ ಗೌಡರಿಗೆ ಮೊದುವೆ ಆಗಿತ್ತ್. ಇವರ ಮುಖ್ಯ ವೃತ್ತಿ ಕೃಷಿ ಆಗಿತ್ತ್. ಅಂದ್ ಅಡಿಕೆ, ತೆಂಗ್, ಬಾಳೆ,ಗೇರ್, ಕೋಕೋ ಹಿಂಗೆ ಬೇರೆ ಬೇರೆ ಮಿಶ್ರ ಬೆಳೆಗಳ್ನ ಬೆಳ್ಸ್‌ತಿದ್ದೊ. ಶ್ರೀ ಕುರುಂಜಿ ವೆಂಕಟರಮಣ ಗೌಡರ ಬಾಲ್ಯ ಜೀವನದ ಬಗ್ಗೆ ನಂಗೇನೂ ತಿಳಿಯದೆ ಇದ್ದರೂ ನಂಗೆ ಸುಮಾರ್ 1951ರ್‌ಲಿ ನಾನ್ ಬೆಂಗಳೂರ್ ವಾರ್ಡನ್ ಇನ್ಸೂರೆನ್ಸ್ ಜೀವವಿಮಾ ಕಂಪೆನಿಲಿ ಸೇವೆ ಮಾಡ್ಕಂಡಿರಕನ ಒಂದ್ ದಿನ ಸಾಯಂಕಾಲ ಮೆಜೆಸ್ಟಿಕ್ ಹತ್ರದ ಹೊಟೇಲ್‌ಲಿ ಪರಿಚಯ ಆತ್. ಶ್ರೀ ವೆಂಕಟರಮಣ ಗೌಡರ್ ವ್ಯಾಪಾರದ ಕಾರಣಂದ ಬೆಂಗಳೂರ್‌ಗೆ ಬಂದೊಳೆತ ಹೇಳಿ ಪರಿಚಯಸಿಕಂಡೊ. ಆಗ ಅವುಕೆ

ಸುಳ್ಯಲಿ 1948ರ್‌ಲಿ ಸ್ಥಾಪನೆ ಆದ ವೆರ್ರ್ಯಾಟಿ ಸ್ಟೋರ್ಸ್‌ತ್ತೇಳುವ ಅಂಗಡಿ ಇತ್ತ್. ಅದ್ ಕಬ್ಬಿಣದಾಸ್ತಾನು ಮಳಿಗೆಯಾಗಿತ್ತ್. ಆ ಮಳಿಗೆಯ ಉಸ್ತುವಾರಿನ ಕೃಷಿಯೊಟ್ಟಿಗೆ ಇವೇ ವಹಿಸಿಕಂಡಿದ್ದೊ. ಹಿಂಗೆ ಇವು ವ್ಯಾಪಾರ ಮಾಡಿಕಂಡಿರಕನ 1952ರ್‌ಲಿ ನಾನ್ ಬೆಂಗಳೂರ್‌ಂದ ಕೊಡಗ್‌ಗೆ ಬಂದ ಸಂದರ್ಭ ಒಂದಿನ ಶ್ರೀಯುತ ಗೌಡರ್‌ನ್ ಅಪರಾಹ್ನ 3 ಗಂಟೆಲಿ ಮಡಿಕೇರಿ ಚೌಕಿಲಿ ಭೇಟಿಯಾದೆ. ವರ್ಷದ ಹಿಂದೆ ಬೆಂಗಳೂರ್‌ಲಿ ಭೇಟಿಯಾಕನ ಪರಿಚಯ ಮಾಡ್ಕಂಡ ಬಗ್ಗೆ ಪ್ರಸ್ತಾಪಿಸಿ ಮಾತಾಡಿ ಕುಶಲೋಪರಿ ಆಗಿ ನಾನ್ ಅವರ್ನ ನನ್ನ ಮನೆಗೆ ಬನ್ನಿತ ಕರ್ದೆ. ಆಗ ಅವುಕೆ ಹೆಚ್ಚ್‌ನ ಸೌಖ್ಯ ಇತ್ಲೆ. ಹಂಗಾಗಿ ಬಾದುಲೆತ ಹೇಳ್ದೊ. ಆಗನಾನ್ ನೀಮಿಗೆ ಆರೋಗ್ಯಕ್ಕೆ ತಕ್ಕಂಗೆ ಪಥ್ಯೆಯ ಆಹಾರ ಕೊಟ್ಟನೆತ ಹೇಳ್ದೆ. ಆಗ ಅವು ಒಪ್ಪಿ ನನ್ನೊಟ್ಟಿಗೆ ಮನೆಗೆ ಬಂದೊ. ನಾವು ದಂಪತಿಗ ಅವರ್ನ ಅವರ ಇಷ್ಟದಂಗೆ ಉಪಚರಿಸಿ ಮಾರಣೆದಿನ ಬೆಳಿಗ್ಗೆ 8.30ರ ಹೊತ್ತ್‌ಗೆ ಅವರ ಊರ್ ಸುಳ್ಯಕ್ಕೆ ಹೊರ್ಟೊ. ಆಗ ನಾನ್ ನಿಮ್ಮ ಆರೋಗ್ಯ ನೀವು ಗ್ಯಾನ ಮಾಡ್ದಂಗೆ ಕೆಟ್ಟತ್ತ್‌ಲೆ. ನೀವು ಕೌಟುಂಬಿಕ ಜೀವನಕ್ಕೆ ಬಂದರೆ ಎಲ್ಲ ಸರಿ ಆದೆತ ಹೇಳ್ದೆ. ಆಗ ಅವು ನಾನ್ ಯಾರೊಟ್ಟಿಗೆ ಮೊದುವೆ ಆದುತ ಮರುಪ್ರಶ್ನೆ ಹಾಕಿದೊ. ಆಗ ನನ್ನ ಹೆಣ್ಣ್‌ದ್ ತಂಗೆ ಜಾನಕಿತ ಉಟ್ಟು. ಈಗ ಅವ್ಳು ಮಡಿಕೇರಿ ಸೆಂಟ್ರಲ್ ಹೈಸ್ಕೂಲ್‌ಲಿ ಎಸ್.ಎಸ್.ಎಲ್.ಸಿ. ಓದುತ್ತಾ ಉಟ್ಟುತ ಹೇಳ್ದೆ. ಆಗ ಅವು ಯಾಗಾರ್ ಮೊದುವೆ ಆದುತಾದರೆ ನೀವಿಗೆ ತಿಳಿಸನೇ ಮೊದುವೆ ಆನೆತ. ಹೇಳಿ ಊರಿಗೆ ಹೊರ್‌ಟೊ ಅವು ಹೇಳ್ದಂಗೆ ಸುಳ್ಯಂದ 1954ರ ಫೆಬ್ರವರಿ ಮಾರ್ಚ್ ತಿಂಗ ಕೆಲ್ಸದ ಕಾರ್ಮಿಕರ ಮೂಲಕ ಒಪ್ಪಿಗೆ ಕಾಗದ ಕಳ್ಸಿ 1954ನೇ ಮೇ ತಿಂಗ 22–23ರಂದ್ ಮಡಿಕೇರಿ ತಾಲೂಕು ಮರಗೋಡು ಗ್ರಾಮದ ದಿ.ಪೂವಯ್ಯ ದೇವಮ್ಮ ದಂಪತಿಗಳ ನಾಕನೇ ಮಗ್ಳು ಚಿ.ಸೌ. ಜಾನಕಿಯವರ್ನ ಶ್ರೀ ಕುರುಂಜಿ ವೆಂಕಟರಮಣ ಗೌಡರ್ ಮೊದುವೆ ಆದೊ. ಅಂದ್ ವಧುನ ಮನೆಗೆ

ಸಾಯಂಕಾಲ ದಿಬ್ಬಣ ಬಂದೊ. ಅವರ ದಿಬ್ಬಣದ ಪ್ರಮುಖರ್‌ಲಿ ಅಡಕಾರ್ ರಾಮಣ್ಣ ಗೌಡರ್, ಪಡ್ಡಂಬೈಲ್ ಮುದ್ದಪ್ಪಗೌಡರ್, ಪಡ್ಡಂಬೈಲ್ ವೆಂಕಟರಮಣ ಗೌಡರ್ ಮತ್ತೆ ಮಾವೋಜಿ ರಾಮಣ್ಣ ಗೌಡರ್ ಹಿಂಗೆ ನಂಗೆ ಪರಿಚಯ ಇದ್ದವು ಭಾಗವಹಿಸಿದ್ದೊ. ಆದಿನ ಸಾಯಂಕಾಲ ಕೊಡಗ್‌ಲಿ ಮಳೆ ಆತ್. ಮಾರಣೆ ದಿನ ಧಾರಾಮುಹೂರ್ತ ಎಲ್ಲ ಸುಗಮವಾಗಿ ಆತ್. ಮೊದುವೆ ದಿಬ್ಬಣ ವಧುನ ಮನೆಂದ ಬಲಗಾಲಿಸಿ ಹೊರ್ಟತ್. ಕೊಡಗ್‌ನ ಮಳೆನೂ ಅವ್ಕೆ ಆಶೀರ್ವದಿಸಿತ್ ಅವ್ರ ದಿಬ್ಬಣ ಸುಳ್ಯದ ಕುರುಂಜಿ ಅವಿಭಾಜ್ಯ ಕುಟುಂಬದ ಮನೆ ಹೊಸ್ತ್‌ಲ್‌ನ ಬಲ್ದಕಾಲ್‌ನ ಮುಂದೆ ಇಸಿ ಒಳಗೆ ಸೇರ್‍ದೊ.

ಕುರುಂಜಿ ಕುಟುಂಬಲಿ ಶ್ರೀ ವಿಶ್ವನಾಥ್ ಗೌಡರ್ ಮತ್ತೆ ಶ್ರೀ ವೆಂಕಟರಮಣ ಗೌಡರ್ ಮೊದುವೆ ಆದವು. ಕುಟುಂಬದ ಜವಾಬ್ದಾರಿಕೆನ ಈ ಇಬ್ಬರ್ ಹಿರಿಯವ್ ಹೊತ್ತ್‌ಕಂಡೊ. ತಮ್ಮ ಸಹೋದರ ಸಹೋದರಿಗೆ ವಿದ್ಯೆ ಕೊಡ್ಸಿದೊ. ಪ್ರಾಯಕ್ಕೆ ಬಂದಮೇಲೆ ಅವರವರ ಕಾಲ್‌ಲಿ ನಿಲ್ಲುವಂಗೆ ಆದೊ. ಅವರದೇ ಆದ ಸ್ವಕಾರ್ಯಲಿ ತೊಡಗಿಸಿ ಕಂಡೊ. ವೆಂಕಟರಮಣ ಗೌಡರ್ ಜಾನಕಿಯವರ್‍ನ ಮೊದುವೆ ಆದ ವರ್ಷನೇ 1954ರ್‌ಲಿ ಕುರುಂಜಿ ಕಾರ್ಸ್ ಕೋಕೋನಟ್ ಫಾಮ್ಸ್ ಸ್ಥಾಪನೆ ಮಾಡ್ದೊ. 1958ರ್‌ಲಿ ಶೀಯುತರ್ ಕುರುಂಜಿಕಾರ್ಸ್ ಫ್ಯಾಸನ್ ಹೌಸ್‌ತ್ತೇಳುವ ಜವುಳಿ ಮಳಿಗೆನ ತೆರ್‍ದೊ. 1963ರ್‌ಲಿ ಕಾಂತಮಂಗಲಲಿ ಸುಮಾರ್ 38–40 ಎಕರೆಯಷ್ಟ್ ಜಾಗನ ಖರೀದಿ ಮಾಡಿ ಮಂಗಳ ಅಡ್ಕೆ ಕೃಷಿ ಮಾಡಿಕೆ ಸುರು ಮಾಡ್ದೊ. ವೆಂಕಟರಮಣ ಗೌಡರ್ ವ್ಯಾಪಾರ ವ್ಯವಹಾರ ಮಾಡಕನ ಜಾನಕಿಯವು ಕೃಷಿ ಜವಾಬ್ದಾರಿಕೆನ ವಹಿಸಿಕಂಡೊ. ಜಾನಕಿಯವುಕೆ ಅವರ ತವುರು ಮನೆಲಿ ಅಡ್ಕೆ ಕೃಷಿ ಇತ್ತ್. ಹಂಗಾಗಿ ಅವ್ಕೆ ಅದರ ಅನುಭವ ಇತ್ತ್. ವೆಂಕಟರಮಣ ಗೌಡರ್ ಮೊದುವೆ ಆದ ಮೇಲೆ ಒಂದೊಂದ್

ರೀತಿಲಿ ಅಭಿವೃದ್ಧೀ ಕೆಲ್ಸಗಳಿಗೆ ಕೈಹಾಕುವಂಗಾತ್.ಇದೇ ಹೆಣ್ಣ್ ಒಲ್ದರೆ ನಾರಿ, ಮತ್ತೆ ಹೆಣ್ಣ್‌ನ ಗುಣತ ಹೇಳಿವೆ. ಗೌಡರ್ ರಾಜಕೀಯಲ್ಲಿ ಕೈಯಾಡಿಸ್‌ತ್‌ಲೆತ ಹೇಳಿಕೆ ಆದುಲೆ. ಯಾಕೆತ್ತೇಳ್ರೆ ಕೊಡಗು ಸರಕಾರಲಿ ಮುಖ್ಯಮಂತ್ರಿಯಾಗಿದ್ದ ಶ್ರೀ ಚೆಪ್ಪುಡಿರ ಯಂ. ಪೂಣಚ್ಚನವು ಒಮ್ಮೊಮ್ಮೆ ಮಂಗಳೂರ್ ಕಡೆ ಹೋಕನ ಕೊಡಗ್‌ನ ಅಳಿಯ ವೆಂಕಟರಮಣ ಗೌಡರ ಸುಳ್ಯದ ಶ್ರೀ ರಾಮಪೇಟೆನ ಮನೆಲಿ ರಾತ್ರಿ ಉಳ್ದ್ ಕೊಡಗ್‌ನ ಖಾದ್ಯ ಬೋಜನ ಉಂಡ್ ಗೌಡರೊಟ್ಟಿಗೆ ರಾಜಕೀಯ ವಿಚಾರ ಮಾತಾಡ್‌ತಿದ್ದೊ. ಹಿಂಗೆ ಕೊಡಗ್‌ನ ಮುಖ್ಯಮಂತ್ರಿ ಪೂಣಚ್ಚನವ್‌ಂದ ಗೌಡರ್ ರಾಜಕೀಯದ ಕಡೆಗೆ ಓಲೈಸ್‌ದರ್‌ಂದಲೇ ಸುಳ್ಯ ಪುತ್ತೂರ್‌ಂದ ಬೇರೆ ಆಗಿ ಎರಡ್ ಮಾತಿಲ್ಲೆ. ರಾಜಕೀಯಲಿ ಗೌಡರ್ ಕೈ ಆಡ್ಸದೆ ಇದ್ದರೆ ಸುಳ್ಯ ತಾಲೂಕಾಗಿ ಬದಲಾಗಿ ಸಕಲ ಸವಲತ್ತ್‌ಗಳ್ನ ವೆಂಕಟರಮಣ ಗೌಡರ್ ಸುಳ್ಯಕ್ಕೆ ಮಾಡಿಕೊಟ್ಟೊ. ಆಗ ಕರ್ನಾಟಕಲಿ ಕಾಂಗ್ರೆಸ್ ಸರಕಾರ ಇತ್ತ್. ಆದರೆ ಗೌಡರ್ ಯಾವ್ದೇ ಪಕ್ಷಲಿ ಗುರುತು ಮಾಡಿಕಂಡತ್ಲೆ. ಯಾವುದೇ ಪಕ್ಷ ರಾಜ್ಯ ಆಳಿರೂ ಆ ಪಕ್ಷಗಳಿಗೆ ಹೊಂದಿಕಂಬದು ಅವರ ಸೊಭಾವ ಹಿಂಗಾಗಿ ತಮಗೆ ಬೇಕಾದ ಅಭಿವೃದ್ಧಿ ಕೆಲ್ಸಗಳ್ನ ಭದ್ರ ಮಾಡಿಕಂಬತಿದ್ದೊ. ಅದೇ ರೀತಿ ಸುಳ್ಯ ತಾಲೂಕಿಗೆ ಬೇಕಾದ ಕೋರ್ಟು ಕಚೇರಿಗ, ಬಸ್ ನಿಲ್ದಾಣ, ಪಟ್ಟಣ ಪಂಚಾಯ್ತಿ ಕಟ್ಟಡ, ಮಾರ್ಕೆಟ್, ಬ್ಯಾಂಕ್, ಕುಡಿವ ನೀರ್‌ನ ಸೌಕರ್ಯ, ವಿದ್ಯುತ್ ಹಿಂಗೆ ಹತ್ತ್ ಹಲವು ಅಭಿವೃದ್ಧಿ ಕೆಲ್ಸಗಳ್ನ ಮಾಡ್ಸಿದೊ. ಹಿಂದೆ ಸುಳ್ಯಲಿ ಎಲ್ಲೊ ನಾ ಕಂಡಂಗೆ 3–4 ಅಂಗಡಿಗ ಇದ್ದೊ. ಮತ್ತೆಮತ್ತೆ ಅಂಗಡಿ ಮಳಿಗೆನ ಹನುಮಂತನ ಬಾಲಬೆಳ್ದಂಗೆ ಬೆಳ್ದೊ. ಹಿಂಗೆ ಹೆಣ್ಣ್‌ನ ಗುಣಂದ ಹೊನ್ನು ಇಡೀ ಸುಖ್ಯ ತಾಲೂಕ್‌ನೇ ಸುತ್ತಿಕಂಡತ್. ದಿನಾಂದ ದಿನಕ್ಕೆ ಅಭಿವೃದ್ಧಿ ಕಡೆಗೆ ಮೊಕ ಮಾಡ್ತ್.

1964ರ್‌ಲಿ ನಾನ್ ಒಮ್ಮೆ ವೆಂಕಟರಮಣಗೌಡರಲ್ಲಿ ಉಳ್ದಿದ್ದೆ. ಆಗ ಅವು ನಮ್ಮವುಕೆ ಕೊಡಗ್‌ಲಿ ವಿದ್ಯಾಸಂಸ್ಥೆ ಸ್ಥಾಪನೆ ಮಾಡಿಕೆ

ಸಾಧ್ಯ ಇಲ್ಲೆಯಾತ ಕೇಳ್ದೊ. ಆಗ್ ನಾನ್ ಸಾಧ್ಯ ಆಗುವ ನಮ್ಮ ಸಂಬಂಧಿಕರೇ ಒಳೊ. ಆದರೆ ಅದ್ ಅವ್ ಅವ್ಕೆ ಬುಟ್ಟ ವಿಚಾರ. ಸಂಪತ್ತು ಬೇಕಷ್ಟ್ ಉಟ್ಟು. ನಂಗೇನು ಹೆಚ್ಚಿಗೆ ಹೇಳಿಕೆ ಬಾಡ್ಲೆತ ಹೇಳಕನ ಅವು ನಾನ್ ಸುಳ್ಯಲಿ ಪ್ರಥಮದರ್ಜೆ ಕಾಲೇಜು ಸ್ಥಾಪಿಸಿನೆತ ಹೇಳ್ದೊ. ಹಂಗೆ 1967ರ್‌ಲಿ ಅಕಾಡೆಮಿ ಆಫ್ ಲಿಬರಲ್ ಎಜ್ಯುಕೇಷನ್ ಹೆಸ್ರ್‌ಲಿ ನೆಹರೂ ಮೊಮೋರಿಯಲ್ ಕಾಲೇಜು (ಪ್ರಥಮದರ್ಜೆ) ಸ್ಥಾಪನೆ ಮಾಡ್ದೊ. ಅವು ಯಾವ್ದೇ ಅಭಿವೃದ್ಧಿ ಕಾರ್ಯಗಳಿಗೆ ಕೈಹಾಕಕನ ನನ್ನೊಟ್ಟಿಗೆ ಪ್ರಸ್ತಾಪಿಸ್ತಿದ್ದೊ. ನಾನ್ ಒಬ್ಬ ಸರಕಾರಿ ಅಧ್ಯಾಪಕನೂ ರಕ್ತ ಸಂಬಂಧಿಯೂ ಆಗಿದ್ದೆ. ಹಂಗಾಗಿ ಅವು ಅವ್ರ ಮನ್ಸ್‌ನ ನನ್ನೊಟ್ಟಿಗೆ ಹಂಚಿಕಂಬ ಬೇಸಿಗೆ ಕಾಲದ ರಜ ಬೇಕಷ್ಟ್ ಇರ್ತಿತ್ತ್. ಹಂಗಾಗಿ ನಾವ್ ದಂಪತಿಗ ತನ್ನ ತಂಗೆ ಮನೆಗೆ ಆಗಾಗ ಹೋಗಿ ಬಾತಿದ್ದೊ.

ಶ್ರೀಮತಿ ಜಾನಕಿಯವು ಕೃಷಿಯ ಕುರ್‌ತ್ ಕಾಳಜಿ ಇದ್ದದಕ್ಕೆ ಅವೇ ಯಾಗೊಳು ತಮ್ಮ ಸುಳ್ಯದ ಮನೆಂದ ಕಾಮತಮಂಗಲದ ಅಡ್ಕೆ ತೋಟಕ್ಕೆ ಮಧ್ಯಾಹ್ನದ ಊಟದ ಬುತ್ತಿ ಕಟ್ಟಿಕಂಡ್ ಹೋಗಿ ಕಾರ್ಮಿಕರ್‌ಂದ ಕೃಷಿ ಕೆಲ್ಸ ಮಾಡ್ಸಿ ಸಾಯಂಕಾಲ 5 ಗಂಟೆಗೆ ಸುಳ್ಯದ ಮನೆಗೆವಾಪಾಸ್ಸು ಬಾತಿದ್ದೊ. ನಂಟ್ರ್ ಯಾರಾರ್ ಅವರ್ನ ಕಾಂಬೊಕುತಾದರೆ ಸಾಯಂಕಾಲ ಹೊತ್ತ್‌ಲಿ ಮನೆಗೆ ಹೋಕಾಗಿತ್ತ್. ಕಡೆಗೆ ಕಾಂತಮಂಗಲದ ಅಡ್ಕೆ ತೋಟಲೇ ದೊಡ್ಡದಾದ ವಾಸದ ಮನೆನ ಕಟ್ಟಿಸಿ ಅಲ್ಲೇ ತಮ್ಮ ಕಿರಿಯ ಮಂಜ ಡಾ. ರೇಣುಕಾ ಪ್ರಸಾದ್ ಮತ್ತೆ ಡಾ. ಜ್ಯೋತಿ ದಂಪತಿಗಳೊಟ್ಟಿಗೆ ಗೌಡ ದಂಪತಿಗ ವಾಸ ಮಾಡ್ತಿದ್ದೊ. ಕೃಷಿ ಪಂಡಿತೆತ ಹೆಸ್ರ್ ಮಾಡ್ದ ಜಾನಕಿಯವರ ಶ್ರಮಂದ ಅಡ್ಕೆ ಕೃಷಿ ಉತ್ಪನ್ನ ಜಾಸ್ತಿ ಆಕಂಡ್ ಬಾತ್.ಸುರೂಲಿ ಅಡ್ಕೆ ಧಾರಣೆ ಕಮ್ಮಿ ಇತ್ತ್. ಹಂಗಾಗಿ ಜಾಸ್ತೀಯೇನೂ ಹಣ ಸಂಪಾದನೆ ಆತ್‌ಲೆ. ಒಂದು ವರ್ಷ ಒಳ್ಳ ಅಡ್ಕೆ ಫಸಲ್ ಇರಕನ,

ಅದೇ ವರ್ಷ ಧಾರಣೆನೂ ಹೆಚ್ಚಾಗಿ ಅವ್ಕೆ ಅಡ್ಕೆ ಕೃಷಿಂದಲೇ ಸುಮಾರ್ 23 ಲಕ್ಷದಷ್ಟ್ ಆದಾಯ ಕೈಸೇರಿ, ಅದ್ರೊಟ್ಟಿಗೆ ರೂ.2 ಲಕ್ಷ ಸೇರ್ಸಿ 25 ಲಕ್ಷ ಹಣನ ನಿರಖು ಠೇವಣಿ ಇಸಿದೊ. ಅದ್ ಎರಡ್ ಪಟ್ಟ್ ಆಗಿ 50 ಲಕ್ಷ ಆತ್. ಅದೇ 50 ಲಕ್ಷ ಹಣನ ಪುನಾ ಎರಡ್ ಪಟ್ಟ್ ಮಾಡಿ ಒಂದ್ ಕೋಟಿ ಆತ್‌ಗಡ. ಈ ಮಾತ್‌ನ ಶ್ರೀ ಗೌಡರೇ ನನ್ನೊಟ್ಟಿಗೆ ಹೇಳಿಕಂಡ ಸತ್ಯ ಸಂಗತಿ. ಅವು ಕೋಟಿ ಮಾಡುವ ರೀತಿನೆ ಇದ್. ಅವು ಇಂದೇ ರೀತಿಲಿ ಉಳ್ತಾಯ ಮಾಡಿ ಕೊಟ್ಯಾಧಿಪತಿ ಆದೊ. ಇದೆಲ್ಲ ನಾವ್ ಅವರ್‌ಂದ ಕಲೆಕಾದ ಪಾಠ.

ಶ್ರೀ ಗೌಡರ್ ತಮ್ಮ ವಿದ್ಯಾಸಂಸ್ಥೆನ ಕೆಲ್ಸ ಕಾರ್ಯಗಳ್‌ಲಿ ಯಾಗೋಳು ಇರ್ತಿದ್ದೊ. ವಿದ್ಯಾಸಂಸ್ಥೆ ಗಟ್ಟಿ ಆಕುತ್ತಾದರೆ, ಸುರೂಲಿ ಕಟ್ಟಡ ಆಕು. ವಸತಿ ನಿಲಯ ಪೂರ್ಣ ಆಕು. ಇದ್ಕೆಲ್ಲಾ ತಾಂತ್ರಿಕ ಅಧಿಕಾರಿ ಇವೊಬ್ಬರೇ ಅವರ್ದೇ ಆದ ಪ್ಲ್ಯಾನ್. ಯಾರ ಸಲಹೆಗಳ್ನ ಕೇಳವ್ ಅಲ್ಲ. ಇವೇ ಜಾಗಲಿ ನಿತ್ತ್‌ಕಂಡ್ ಕೆಲ್ಸ ಮಾಡ್‌ಸಿದ್ದೊ. ಮಳೆ ಬಿಸ್ಲ್‌ತ್ತೇಳದೆ ಕೊಡೆ ಹಿಡ್ಕಂಡ್ ಅಂದ್‌ನ ಕೆಲ್ಸ ಆಗುವಮುಟ್ಟ ನಿತ್ತ್‌ಕಂಡೇ ಇರ್ತಿದ್ದೊ. ನಾನ್ ಒಂದಿನ ಅವ್ರಲ್ಲಿಗೆ ಹೋಗಿರಕನ ಶ್ರೀಯುತರ್ ಕಾಲೇಜ್‌ನ ಹತ್ರ ಒಳೊತ ಗೊತ್ತಾಗಿ ಅಲ್ಲಿಗೆ ಹೋದೆ. ಅಲ್ಲಿಯೆ ಕುಶಲೋಪರಿ ಆತ್. ಅವರ್ನ ಬುಟ್ಟ್ ಅಲ್ಲಾಡಿಕಾತ್‌ಲೆ. ನಾನ್ ಒಟ್ಟಿಗೆ ಬನ್ನೆತ ಹೇಳ್ದೊ. ನಂಗೂ ನಿತ್ತ್ ನಿತ್ತ್ ಸಾಕಾತ್. ಕಡೆಗೆ ನಾವಿಬ್ಬರ್ ಜಾಗ ಖಾಲಿ ಮಾಡ್ದೊ. ಅವರ ಈ ವರ್ತನೆಗೆ ಭಗವದ್ಗೀತೆಲಿ ಒಂದ್ ಶ್ಲೋಕ ಉಟ್ಟು. ಅದ್ಃ ಸಮಶತ್ರೇಚ, ಮಿತ್ರೇಚ, ತಥಾ ಮಾನಪೊ,ಮಾನವೋ, ಶೋತೋಷ್ಣ, ಸುಖದುಃಖೇಷು, ಸಮಸಂಘ ವಿವರ್ಜಿತಾ," ಹಿಂಗೆತ ಹೇಳ್ರೆಃ ಶತ್ರುಗಳ್ನ ಸಿನೇತರನ್ನಾಗಿ ಮಾಡಿ ಕಂಡ್, ಎಲ್ಲರ್ನೂ ಸಮಾನ ದೃಷ್ಟಿಂದ ಕಂಡ್ ಬಿಸ್ಲ್ ಮಳೆಗಳ್ನ ಸಮನಾಗಿಸಿಕಂಡ್ ಅಭಿವೃದ್ಧಿ ಕೆಲ್ಸಗಳ್‌ಲಿ ತೊಡುಗುದು. ಇದ್ ಅವರ ದಿನನಿತ್ಯದ ಕೆಲ್ಸ. ಕಾಯಕವೆ ಕೈಲಾಸ ಅವರ ಗುರಿ. ಇವು ಬೆಳಿಗ್ಗೆ

7.30ಕ್ಕೆ ಮನೆ ಬುಟ್ಟರೆ, ಮಧ್ಯಾಹ್ನ 2 ಗಂಟೆಗೆ ಉಂಬಕೆ ಮನೆಗೆ ಬಾತಿದ್ದೊ. ಪುನಾ 3.30ಕ್ಕೆ ಮನೆ ಬುಟ್ಟರೆ ರಾತ್ರೆ 12 ಗಂಟೆಗೆ ಮನೆಗೆ ಬಂದ್ ಊಟ ಮಾಡ್ತಿದ್ದೊ. ಮತ್ತೆ ಮೀದ್ ಮಲಗ್‌ತ್ತಿದ್ದೊ. ನಾವೆಲ್ಲ ಉಂಬಕೆ ಮುಂದೆ ಮೀದರೆ ಅವು ಉಂಡ ಮೇಲೆ ಮೀತಿದ್ದೊ. ಇದ್ ಅವರ ದಿನಚರಿ.

ಶ್ರೀ ವೆಂಕಟರಮಣ ಗೌಡರ್ ತಮ್ಮ ಪ್ರಥಮ ಪುತ್ರ ಡಾ.ಕೆ.ವಿ. ಚಿದಾನಂದನವುಕೆ ಮಂಗಳೂರ್‌ನ ವೈದ್ಯಕೀಯ ಕಾಲೇಜ್‌ನ ವಿದ್ಯೆ ಕೊಡ್ಸಿದೊ. ಎಂ.ಬಿ.ಬಿ.ಎಸ್., ಎಂ.ಎಸ್. ಪದವಿ ಪಡ್ದ್ ವೈದ್ಯರಾದ ಮೇಲೆ F.I.C.S , F.A.S., FR.S.P.H (London) ಪದವಿ ಪಡ್ದೊ. ಮಗ್ಳು ಶ್ರೀಮತಿ ಗೋವರ್ಧಿನಿ ತನ್ನ ಪದವಿ ಮುಗ್ಸಿ ಕೊಡಗ್‌ನ ಚೆಯ್ಯಂಡಾಣೆ ನಿವಾಸಿ ತೋಟಂಬೈಲು ದಿವಂಗತ ತಮ್ಮಯ್ಯ ಡಿವೈಎಸ್ಪಿಯವರ ಮಂಜ ಡಾ. ಜಯಕುಮಾರ್ ಎಂಬವರ ಮೊದುವೆ ಆಗಿ ಅಮೆರಿಕಾಲಿ ಒಳೊ.ಗೌಡರ 2ನೇ ಮಂಜ ಡಾ. ರೇಣುಕಾ ಪ್ರಸಾದ್ ಅವು ಮಂಗಳೂರ್‌ನ ವೈದ್ಯಕೀಯ ಕಾಲೇಜ್‌ಲಿ ಓದಿ ಎಂ.ಬಿ.ಬಿ.ಎಸ್. ಪದವಿ ಪಡ್ದೊ. ಹಿಂಗೆ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡ್ಸಿ ಡಾ. ಚಿದಾನಂದನವು ಮಂಡ್ಯ ಜಿಲ್ಲೆನ ಡಾ. ತಮ್ಮಯ್ಯನವರ ಮಗ್ಳು ಚಿ.ಸೌ. ಶೋಭನವರ್ನ ಮೊದುವೆ ಆದೊ. ಡಾ. ಚಿದಾನಂದನವುಕೆ ಇಬ್ಬರ್ ಮಕ್ಕ ಮಗ್ಳು ಶ್ರೀಮತಿ ಐಶ್ವರ್ಯ, ಮಂಜ ಅಕ್ಷಯ. ಡಾ. ರೇಣುಕಾ ಪ್ರಸಾದ್‌ನವು ಕೊಡಗ್‌ನ ಶನಿವಾರ ಸಂತೆಯ ಶ್ರೀ ಸೋಮಯ್ಯ ದಂಪತಿಯರ ಮಗ್ಳು ಡಾ. ಜ್ಯೋತಿಯವರ್ನ ಮೊದುವೆ ಆದೊ. ಇವ್ಕೆ ಇಬ್ಬರ್ ಮಕ್ಕ. ಮಗ್ಳು ಅಭಿಜ್ಞಾ, ಮಂಜ ಮೌರ್ಯ ಪ್ರಸಾದ್.

1967ರ್‌ಲಿ ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್ (ರಿ) ಸಂಸ್ಥೆಯಾದ ಮೇಲೆ ತಾವೇ ಸ್ಥಾಪನಾಧ್ಯಕ್ಷರಾಗಿ ಮತ್ತೆ ನಿರಂತರ ಆಗಿ ಶಿಕ್ಷಣಕ್ರಾಂತಿ ಮುಂದೊರ್ಸ್. ನೆಹರು ಮೆಮೋರಿಯಲ್

ಪ್ರಥಮದರ್ಜೆ ಕಾಲೇಜ್‌ಲಿ ಕಲೆ, ವಾಣಿಜ್ಯ ಮತ್ತೆ ವಿಜ್ಞಾನ ವಿಭಾಗಳ ತೆರ್‌ದೊ. 1990ರ್‌ಲಿ ಕಾನೂನು ಪದವಿ ಕಾಲೇಜ್ ಸುರಾತ್. 1996ರ್‌ಲಿ ಕೊಡಗ್‌ನ ಭಾಗಮಂಡಲಲಿ ಪ್ರಥಮದರ್ಜೆ ಕಾಲೇಜ್ ಸುರುಮಾಡಿತ ಕೇಳ್ಕಣಕನ,ಜಾಗೆ ಮಾಡಿತ ನಂಗೆ ಹೇಳ್ದೊ. ಹಂಗೆ ನಾನ್ ಮೂರ್ನಾಡ್‌ನ ಪ.ಪೂ.ಕಾಲೇಜ್‌ನ ಅಧ್ಯಕ್ಷರೂ ನನ್ನ ಸಿನೇತ ಶ್ರೀ ಪಳಂಗಡ ಮುತ್ತಪ್ಪನವರ್ನ ಕಾಲೇಜಿಗೆ ಜಾಗಕೊಡಿತ ಕೇಳ್ಕಂಡೆ. ಆಗ ಅವು ಮೂರ್ನಾಡ್ ಪ.ಪೂ. ಕಾಲೇಜಿಗೆ ಎರಡ್ ಆಟದ ಮೈದಾನ ಉಟ್ಟು. ಅವುಗಳ ಪೈಕಿ ಒಂದರ್ನ ಕೊಡ್ಲಿನೆ. ಇದ್ಕೆ ಸಮಿತಿ ಸಭೆ ಕರ್ದ್ ತೀರ್ಮಾನ ಆದಮೇಲೆ ವಿಷಯ ತಿಳ್ಸಿನೆತ ಹೇಳ್ದೊ. ಆದರೆ ಆ ಕಾಲೇಜ್‌ನ ಸಮಿತಿ ಸದಸ್ಯರ್ ಕಾಲೇಜ್‌ನ ಮೈದಾನನ ಬುಡಿಕೆ ಒಪ್ಪಿತ್‌ಲೆ. ಸರಿ, ನಾನ್ ಬೇರೆ ಜಾಗ ಹುಡ್ಕತ್ತಿದ್ದೆ. ಕಡೆಗೆ ಮೂರ್ನಾಡ್ ನಾಪೋಕ್ಲು ರಸ್ತೆ ಕರೆಲಿ ಸುಮಾರ್ 40 ಎಕರೆ ಕಾಫಿ ತೋಟವೊಂದ್ ಮಾರಾಟದ ಹಂತಲಿತ್ತ್. ನಾನ್ ತೋಟದ ಮಾಲೀಕನ ವಿಚಾರ್ಸಿದೆ. ಅವು ಹೌದು, ತೋಟನ ಮಾರಿನೆತ ಹೇಳ್ದೊ. ಈ ವಿಷಯನ ವೆಂಕಟರಮಣ ಗೌಡರಿಗೆ ತಿಳ್ಸಿದೆ. ಆಗ ಅವು ಅದರ ಒಂದು ಕೋಟಿಗೆ ಕೇಳಿತ ಹೇಳ್ದೊ. ನಾನ್ ಕೂಡ್ಲೆ ಒಂದಿನ ಅಪರಾಹ್ನ ಮಡಿಕೇರಿಗೆ ಹೋದೆ. ನಂಗೆ ತುಂಬಾ ಆತ್ಮೀಯರಾಗಿದ್ದ ಮತ್ತೆ ಒಳ್ಳ ಲೀಡಿಂಗ್ ವಕೀಲರಾಗಿದ್ದ ಶ್ರೀ ಕೆ.ಎಂ.ಪೊನ್ನಪ್ಪನವರೊಟ್ಟಿಗೆ ಈ ವಿಚಾರನ ಹೇಳ್ದೆ. ಆಗ ಅವು "ಬೆಳ್ಯಪ್ಪನವರೇ ನೀವು ಆಗಾಗ ನನ್ನ ಬಳಿ ಬರಲು ತಯಾರಾಗಿದ್ದೀರಾ"ತ ಕೇಳ್ದೊ. ಯಾಕೆತ ಕೇಳ್ದೆ. "ನಿಮಗೆ ಆ ಜಾಗ ಬೇಡ, ಆ ಕುಟುಂಬದವರು ಸರಿ ಇಲ್ಲ. ಅವರ ಬಗ್ಗೆನನಗೆ ಸಾಕಷ್ಟು ವಿಚಾರಗೊತ್ತಿರುವುದು. ಕೈ ಹಾಕಬೇಡಿ"ತ ಅತಿ ವಿನಯಪೂರ್ವಕವಾಗಿ ಹೇಳ್ದೊ. ಈ ವಿಷಯನ ಗೌಡರಿಗೆ ಮುಟ್ಟಿಸಿದೆ. ಅಲ್ಲಿಂದ ಮೂರ್ನಾಡ್‌ಲಿ ಕಾಲೇಜ್‌ಲಿ ಮಾಡುವ ವಿಷಯ ಕೈಬುಟ್ಟೊ. ವಕೀಲರ್ ಹೇಳ್ದ ಮಾತ್ ಸತ್ಯ. ಅದ್ ಇಂದೂ ಸನ ಸಮಸ್ಯೆಲೇ ಉಟ್ಟು.

ಶ್ರೀಮತಿ ಜಾನಕಿಯವು ತಮ್ಮ ಪ್ರಾಥಮಿಕ ಶಾಲೆ ವಿದ್ಯೆ ಪಡ್ದ ಮೂರ್ನಾಡ್‌ಲಿ ಸುರೂಗೆ "ಶ್ರೀಮತಿ ಜಾನಕಿ ವೆಂಕಟರಮಣ ಗೌಡ ಕಲ್ಯಾಣ ಮಂಟಪನ ನಿರ್ಮಿಸಿದೊ. ಕೊಡಗ್‌ನ ಪಾರಾಣೆ, ಕುಶಾಲನಗರ, ಸುಂಟಿಕೊಪ್ಪ, ಸೋಮವಾರಪೇಟೆ, ವೀರಾಜಪೇಟೆಗಳ್‌ಲೆಲ್ಲಾ ಕಲ್ಯಾಣ ಮಂಟಪ ನಿರ್ಮಿಸಿಯೊಳೊ. ದೇವಸ್ಥಾನಗಳ ಜೀರ್ಣೋದ್ಧಾರ ಮತ್ತೆ ಶಾಲಾ ಕಾಲೇಜ್‌ಗಳಿಗೆ ಕಪಾಟು, ಬೆಂಚಿ ಕುರ್ಚಿ, ಲೈಬ್ರರಿ ಹಿಂಗೆ ನೂರಾರ್ ದಾನಧರ್ಮಗಳ ಮಾಡಿ ಶ್ರೀ ಕುರುಂಜಿ ವೆಂಕಟರಮಣ ಗೌಡ ಅಮರ ಶ್ರೀ ಸಮುದಾಯ ಭವನ, ಮಂಗಳೂರ್‌ಲೂ ಕಲ್ಯಾಣ ಮಂಟಪಗಳ್ನ ಕಟ್ಟಿಯೊಳೊ. ಸುಮಾರ್ ತಾಂತ್ರಿಕ ಶಿಕ್ಷಣ ಸಂಸ್ಥೆಗ, ದಂತ ವೈದ್ಯಕೀಯ ಮಹಾ ವಿದ್ಯಾಲಯ, ಆಯುರ್ವೇದದ ಮಹಾ ವಿದ್ಯಾಲಯಗಳ್ನ ಸುಳ್ಯಲಿ ಸ್ಥಾಪಿಸಿದ್ದಲ್ಲದೆ ಬೆಂಗಳೂರೂ ದಂತ ವೈದ್ಯಕೀಯ ಕಾಲೇಜ್, ಪಾಲಿಟೆಕ್ನಿಕ್ ಕಾಲೇಜ್‌ಗಳ್ನ ತೆರ್ದ್ದೊಳೊ.

ಸುಳ್ಯಲಿ ವೈದ್ಯಕೀಯ ಮಹಾ ವಿದ್ಯಾಲಯ (ಮೆಡಿಕಲ್ ಕಾಲೇಜ್) ತೆರೆಯಕೆ ಮುಂದೇ ನನ್ನೊಂದಿಗೆ ವೈದ್ಯಕೀಯ ಕಾಲೇಜ್ ತೆರ್ದ್ದನೆ, ಆದರೆ ದುಡ್ಡು ಆತ್ಲೆ, 8 ಕೋಟಿ ಬೇಕಾದೆತ ಹೇಳ್ದೊ. ನಿಧಾನಾಗಿ ದುಡ್ಡು ಆದಮೇಲೆ ಮಾಡಿತ ಹೇಳ್ದೆ. ಹಂಗೆ ಅವು ತಮ್ಮ ಪರಿಚಯದವರೊಟ್ಟಿಗೆ ಮಡಿಕೇರಿ, ಸುಂಟಿಕೊಪ್ಪದ ದಾರಿ ಕರೆಲಿ ಸುಮಾರ್ 28ಎಕರೆ ಜಾಗಗೊತ್ತ್ ಮಾಡ್ದೊ. ದಕ್ಷಿಣ ಕನ್ನಡ ಜಿಲ್ಲೆಯವು ಕೊಡಗ್‌ಲಿ ವೈದ್ಯಕೀಯ ಕಾಲೇಜ್ ಮಾಡ್ದು ಬೇಡತ ಕೊಡಗ್‌ನವು ಅಡ್ಡಗಾಲ್ ಹಾಕಿದೊ. ಮತ್ತೆ ನನ್ನೊಟ್ಟಿಗೆ ಕೊಡಗ್‌ಲಿ ವೈದ್ಯಕೀಯ ಕಾಲೇಜ್‌ಗೆ ಜಾಗೆ ಗುರುತು ಮಾಡಿಕೆ ಹೇಳ್ದೊ. ಮಡಿಕೇರಿಗೆ ಬರೀ ಎರಡೂವರೆ ಕಿ.ಮೀ. ದೂರದ ಮೇಕೇರಿ ಗ್ರಾಮಲಿ ಸುಮಾರ್ 23 ಎಕರೆ ಖಾಲಿ ಜಾಗನ ಕುರುಂಜಿಯವ್ಕೆ ಮಾಡಿಕೊಡುವಷ್ಟರ್‌ಲಿ ಅದೇ ವರ್ಷ 2002ರ್‌ಲಿ ಕೇಂದ್ರದ ಮೆಡಿಕಲ್ ಕೌನ್ಸಿಲಿಂಗ್‌ನಿಂದ ಸುಳ್ಯಕ್ಕೆ

ಮೆಡಿಕಲ್ ಕಾಲೇಜ್ ಮಂಜೂರಾಗಿ ಬುಡ್ತ್. ಕೊಡಗ್‌ನವ್ರ ವೈದ್ಯಯಕೀಯ ಕಾಲೇಜ್‌ನ ಭಾಗ್ಯ ಕನಸಾಗಿಯೇ ಉಳ್ತ್. ಈಗ ಸರಕಾರಂದ ಮಡಿಕೇರಿನ ಕರ್ನಂಗೇರಿ ಗ್ರಾಮಲಿ ವೈದ್ಯಕೀಯ ಕಾಲೇಜ್ ಸುರುಮಡುವ ಕೆಲ್ಸ ಆಗ್ತಾ ಉಟ್ಟು.

ಶ್ರೀ ಕುರುಂಜಿಯವು ವೈದ್ಯಕೀಯ ಕಾಲೇಜ್ ಸುರುಮಾಡುವ ಹೊತ್ತ್‌ಗೆ ಅಂದ್ 8ಕೋಟಿ ಬೇಕ್‌ತ ಹೇಳ್ದವ್ 2002ರ ಹೊತ್ತ್‌ಗೆ ಸುಮಾರ್ 24 ಕೋಟಿ ಬೇಕಾಗಿರ್ದು.

ಸುಳ್ಯದ ವೈದ್ಯಕೀಯ ಕಾಲೇಜ್‌ನ ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡರ್ ತಮ್ಮ ಅಮೃತ ಹಸ್ತಂದ ಉದ್ಘಾಟಿಸಿದೊ. ಶ್ರೀ ಆದಿ ಚುಂಚನಗಿರಿ ಮಠದ ಮಠಾಧೀಶರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವು ಆರ್ಶೀವಾದ ಮಾಡ್ದೊ. ಸ್ವಾಮೀಜಿ ಅವ್ಕೆ ಗೌಡರ ಮನೆನೇ ಅಂದಿನ ಮಠ ಆಗಿತ್ತ್. ಹೆಚ್.ಡಿ. ದೇವೇಗೌಡರ್ ತಮ್ಮ ಭಾಷಣಲಿ ಶ್ರೀ ಕುರುಂಜಿ ಗೌಡರಿಗೆ "ನೀವು ಹೇಗೆ ಸಾವಿರ ಹಾಸಿಗೆಯ ಆಸ್ಪತ್ರೆ ಮಾಡುವಿರಿತ ಕೇಳ್ದೊ. ಆದರೆ ಇಂದ್ ವೆಂಕಟರಮಣ ಗೌಡರ್ ಸಾವಿರ ಹಾಸಿಗೆನ ಆಸ್ಪತ್ರೆ ಮಾಡ್ತ್‌ಲೆನ?ಶ್ರೀಯುತರ ಸಾಧನೆನ ವರ್ಣಿಸಿಕಾದ್ಲೆ.ಗೌಡರ 75ನೇ ವರ್ಷದ ಹುಟ್ಟು ಹಬ್ಬದ ಪ್ರಯುಕ್ತ ಶ್ರೀ ಎಲ್.ಕೆ. ಅಡ್ವಾನಿಯವು ಸುಳ್ಯದ ಇವರ ಕಾಲೇಜ್ ಆವರಣಕ್ಕೆ ಬಂದ್ ಆಶೀರ್ವದಿಸಿದೊ. ಗ್ರಾಮೀಣ ಪ್ರದೇಶ ಆದ ಸುಳ್ಯದಂತ ಜಾಗೆಲಿ ಇಷ್ಟೊಂದ್ ವಿದ್ಯಾಸಂಸ್ಥೆಗ ಅಭಿವೃದ್ಧಿ ಆದರ ನಾನ್ ಎಲ್ಲಿಯೂ ಕಂಡತ್ಲೆತ ಹೇಳ್ದೊ. ಇದ್ಕೆಲ್ಲ ಕಾರಣ ಒಬ್ಬನೇ ಆದ ಡಾ. ಕುರುಂಜಿ ವೆಂಕಟರಮಣ ಗೌಡರ್‌ತ ಹೇಳಿ ಹೊಗ್‌ಳಿ ಹೋದೊ. ಗ್ರಾಮೀಣ ಪ್ರದೇಶವಾದ ಸುಳ್ಯಲಿ ಇಷ್ಟೊಂದ್ ವಿದ್ಯಾಸಂಸ್ಥೆಗ ತಲೆ ಎತ್ತಿ ನಿತ್ತದರ ಕಂಡ್ 2003ರ್‌ಲಿ ಅಮೇರಿಕಾ ಸರಕಾರ ಗೌಡರ್‌ಗೆ "ಡಾಕ್ಟರೇಟ್" ಪದವಿನ ಹಲವಾರ್ ಸಂಶೋಧನೆಗಳ್ನ ಬೇರೆಯವರ ಮಾರ್ಗದರ್ಶನಲಿ ಮಾಡಿ ಡಾಕ್ಟರೇಟ್

ಪದವಿ ಪಡ್ದದೆ. ಆದರೆ ಗೌಡರ್ ವಿದ್ಯೆ ಇಲ್ಲದೆ, ಬೇರೆಯವುಕೆ ವಿದ್ಯೆಕೊಟ್ಟ್ ಡಾಕ್ಟರೇಟ್ ಪದವಿ ಪಡ್ದೊ. ವಿದ್ಯೆಗಿಂತ ಬುದ್ಧಿನೇ ಮೇಲ್‌ತ ಹೇಳಿಕೆ ಇದೊಂದ್ ಮುಖ್ಯ ಉದಾಹರಣೆ ಗೌಡರ್ ಸ್ಥಾಪಕ ಅಧ್ಯಕ್ಷೆರಾದರೆ , ಅವರ ಸುರೂನ ಮಂಜ ಡಾ.ಕೆ.ವಿ. ಚಿದಾನಂದನವು ಉಪಾಧ್ಯಕ್ಷರಾಗೊಳೊ. ಇವರ ಸಣ್ಣ ಮಂಜ ಡಾ. ಕೆ.ವಿ. ರೇಣುಕಾಪ್ರಸಾದ್ ಪ್ರಧಾನ ಕಾರ್ಯದರ್ಶಿಯಾಗೊಳೊ. ಗೌಡರಿಗೆ 1994ರ್‌ಂದ ರಾಜೀವ್ ಗಾಂಧಿ ನ್ಯಾಷನಲ್ ಯುನಿಟಿ ಅವಾರ್ಡ್‌ಂದ ಸುರು ಆಗಿ 2010ರ ಆದಿ ಚುಂಚನಗಿರಿ ಶ್ರೀ ಆವಾರ್ಡ್ ಕಡೆದಾಗುಟ್ಟು. ಒಟ್ಟು ಪ್ರಶಸ್ತಿಗ 36 ಇಷ್ಟೊಂದ್ ಪ್ರಶಸ್ತಿಗಳ ಸರಮಾಲೆ ನಮ್ಮ ಭಾರತಲಿ ಸಿಕ್ಕಿದರೆ ಸಿಕ್ಕ್‌ತಿತ್ತೋತ ಭಾವಿಸಿಕಾದೆ. ನಾನ್ ಕಂಡಂಗೆ ಇವು ಒಬ್ಬ ದೈವ ಭಕ್ತರ್, ಶಿಸ್ತ್‌ನ ಸಿಪಾಯಿ, ಕಠಿಣ ದುಡಿಮೆ ಪ್ರಾಮಾಣಿಕತೆ ಸಮಯದ ಸದುಪಯೋಗ, ಏಕಾಗ್ರತೆ ಮತ್ತೆ ದುಶ್ಚಟಗಳ್‌ಂದ ದೂರ ಇದ್ದೊ. ಹಿತ ಮಿತ ವ್ಯಯ. ಒಂದಿನ ಇವು ನನ್ನೊಟ್ಟಿಗೆ ದಿನಕ್ಕೆ ರೂ.15 (ಹದಿನೈದು)ಖರ್ಚಿಗೆ ಸಾಕ್‌ತ ಹೇಳಿದ್ದೊ. ಗೌಡರು ನನ್ನನ ಸಭೆಗೆ ಪರಿಚಯ ಮಾಡಿಕೊಡುವ ರೀತಿ ಅದ್ಭುತನೇ ಆಗಿತ್ತ್. ಹೆಂಗೆತ್ತೇಳ್ರೆ "ನಂಗೆದಾರಿ ತೋರ್ಸಿದವು"ತ ಹೇಳ್ತಿದ್ದೊ. ನಾನ್ ಯಾವ ರೀತಿಲಿ ಅವುಕೆ ದಾರಿ ತೋರ್ಸಿಯೊಳೆತ ನಂಗೆಗೊತ್ಲೆ. ನಾನ್ ಬರೀ ನನ್ನ ಹೆಣ್ಣ್‌ನ ತಂಗೆ ಜಾನಕಿಯವರ್‍ನ ಮೊದುವೆ ಆಕೆ ಮಾರ್ಗದರ್ಶನ ಮಾಡೊಳೆ ಅಲ್ಲದೆ ಇನ್ನ್ಯಾವುದೇ ರೀತಿಲಿ. ದಾರಿ ತೋರ್ಸಿದ್ ನಂಗೊತ್ಲೆ. ಅಂತಹ ಮಹಾನುಭಾವಂಗೆ ನಾನೊಬ್ಬ ಸರಕಾರಿ ಅಧ್ಯಾಪಕನಾಗಿ, ನಿವೃತ್ತಿಯಾಗಿ 34ವರ್ಷ ತುಂಬಿತ್. ನಾನ್ ಯಾವ ರೀತಿಲಿ ದಾರಿ ತೋರ್‌ಸೊಳೆತ್ತೇಳ್ದು ಅವುಕೇ ಗೊತ್ತ್. ಹಿಂದೆನ ಕಾಲಲಿ "ಊಟಕಿಲ್ಲದವನಿಗೆ ಉಪಾದ್ರಿ ಚಾಕ್ರಿ"ತ್ತೇಳ್ವ ವಾಡಿಕೆ ಮಾತ್ ನಿಮಿಗೂ ಗೊತ್ತು. ನಾನ್ ಹೆಂಗೆ ದಾರಿ ತೋರ್ಸಿರ್‌ವೆ ?

2008ರ್‌ಲಿ ಕೊಡಗ್‌ನ ಗೌಡ ವಿದ್ಯಾಸಂಘದ

ಶತಮಾನೋತ್ಸವಕ್ಕೆ ಮುಖ್ಯ ನಂಟ್ರಾಗಿ ಬಂದ್ ವಾಪಾಸಾದ ಒಂದೆರ್ಡ್ ದಿನಗಳ್‌ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ತಕಂಬಕೆ ಮೈಸೂರಿಗೆ ಹೋಕೆ ಇಲ್ಲದಂಗಾಗಿ, ಕಡೆಗೆ ಪ್ರಜ್ಞಾ ಹೀನರಾಗುವ ಮುಟ್ಟ ಎತ್ತಿತ್. ಜನ ಮಾತಾಡ್ಸಿಕೆ ನಿಮ್ಮನ ಗೊತ್ತಾದ್ಲೆತೇ ಹೇಳ್ತದ್ದೊ. ಆದರೆ ಶ್ರೀಯುತರ್ ನನ್ನನ ಕಂಡ್ ಕಣ್ಣೀರ್ ಹಾಕಂಡ್ ತಬ್ಬಿಕಂಬತಿದ್ದೊ. ಕಡೆಮುಟ್ಟ ನನ್ನನ ಗುರುತು ಮಾಡ್ತಿದ್ದೊ. ಅವ್ರ ಹೆಣ್ಣ್ ಜಾನಕಿಯವು ಶಕ್ತಿ ಮೀರಿ ಪತಿ ಸೇವೆ ಮಾಡಿ ಉಪಚಾರ ಮಾಡ್ತಿದ್ದೊ. ಕಡೆಗೆ ಶ್ರೀಮತಿ ಜಾನಕಿಯವೇ ಅಸೌಖ್ಯಳಾಗಿ 22–8–2012ರಂದ್ ಸ್ವರ್ಗಸ್ಥರಾದೊ. ಗೌಡರ್ ಹೆಣ್ಣ್‌ನಕಳ್ಕಂಡ ದುಃಖಂದ ದಿನ ದೂಡ್‌ತಿದ್ದೊ. 07–08–2013ರಂದ್ ಗೌಡರೂ ನಿಧನರಾದೊ. "ಮರಳಿ ಬಾ ಮಣ್ಣಿಗೆ"ತ ಹೇಳುವಂಗೆ ಇವು ಇಬ್ಬರೂ ಪುನರ್‌ಜೀವ ಪಡ್ಕಂಡ್ ಸುಳ್ಯಕ್ಕೆ ವಾಪಸ್ ಬರ್‌ಲಿತ ನನ್ನ ಪ್ರಾರ್ಥನೆ.

ಈ ಒಂದ್ ಹೆಣ್ಣ್, ಹೊನ್ನು, ಮಣ್ಣ್‌ತ್ತೇಳುವ ಶೀರ್ಷಿಕೆಯಡಿ ನನ್ನ ಲೇಖನ ಈ ಮೂರ್ ಅಂಶಗಳಿಗೆ ಹೋಲಿಕೆ ಆದುತ ನನ್ನ ಅನಿಸಿಕೆ. ಇದರ್‌ಲಿ ಯಾವುದೇ ರೀತಿಲಿ ಅತಿಶಯೋಕ್ತಿ ಇಲ್ಲೆ. ನಾನ್ ಕಂಡದರ ಕಂಡಂಗೆ ಬರ್ದೊಳೆ. ಕಡೇದಾಗಿ ಡಾ॥ ವೆಂಕಟರಮಣ ಗೌಡರ್ ಮತ್ತೆ ಶ್ರೀಮತಿ ಜಾನಕಿ ದಂಪತಿಗ ಬುಟ್ಟ್ ಹೋದ ಸಂಪತ್ತ್‌ನ ಅವರ ಮಕ್ಕಳಾದ ಡಾ.ಕೆ.ವಿ. ಚಿದಾನಂದ ದಂಪತಿಗ ಮತ್ತೆ ಡಾ. ರೇಣುಕಾ ಪ್ರಸಾದ್‌ದಂಪತಿಗೆ ಅಲ್ಲದೆ, ಅವರ ಪಿಳ್ಳಿಕ ಬೆಳ್ಸಿ ಉಳ್ಸಿಕೆ ದೇವ್ರು ಅವುಕೆ ಶಕ್ತಿ ಕೊಡ್ಲಿ. ಮತ್ತೆ ಕುರುಂಜಿಬಾಗ್ ಸ್ಥಿರ ಸ್ಥಾಯಿಯಾಗಿ ಉಳ್ಕಲಿತ ಬೇಡ್ಕಂಡ್ ನಾನ್ ನಮ್ಮ ಕುಲದೇವ್ರು ಶ್ರೀ ವೆಂಕಟರಮಣ ಮತ್ತೆ ಶ್ರೀ ಕಾವೇರಿ ಮಾತೆಗೆ ನಮಸ್ಕಾರ ಮಾಡಿಕಂಡ್ ಈ ನನ್ನ ಲೇಖನಕ್ಕೆ ಅಸ್ತು.

* * * * *

೪. ಕೊಡಗ್ ಅಂದ್ ಇಂದ್

ಕರ್ನಾಟಕ ರಾಜ್ಯಲಿ ಅತ್ಯಂತ ಸಣ್ಣ ಜಿಲ್ಲೆ ಆಗಿರುವ ಕೊಡಗ್ ಹಿಂದೆನ ಕಾಲಂದೂ ಪ್ರಕೃತಿ ಸೌಂದರ್ಯದ ತವುರು ಆಗುಟ್ಟು. ಬೆಟ್ಟಗುಡ್ಡಗಳ್ಂದ ಕೂಡ್ದ ಈ ಹಸ್ರ್ ಜಾಗೆ ಬಡ್‌ಗಂದ ತೆಂಕಕ್ಕೆ 96ಕಿ.ಮೀ ಮತ್ತೆ ಮೂಡಂದ ಪಡುದಿಕ್ಕಿಗೆ 64 ಕಿ.ಮೀಲಿ ಹರಂಡಿಟ್ಟು. ಕೊಡಗ್‌ನ ಪಡುಘಟ್ಟದ ಬ್ರಹ್ಮಗಿರಿ ಬುಡಲಿ ಕವೇರಿಮುನಿ, ಅಗಸ್ತ್ಯ ಮಹಾಋಷಿ, ಕಣ್ವ ಋಷಿ ಹಿಂಗೆ ಬೇರೆ ಬೇರೆ ಋಷಿ ಮುನಿಗಳ ತಪಸ್ಸ್ ಮಾಡ್ದ ಭೂಮಿ ಇದ್. ಕವೇರ ಮುನಿನ ಮಗ್ಳು ಕಾವೇರಿ ಅಗಸ್ತ್ಯನೊಟ್ಟಿಗೆ ಸಿಟ್ಟಾಗಿ ಬ್ರಹ್ಮಗಿರಿ ಬುಡಂದ ಧುಮುಕಿ ಗುಪ್ತಗಾಮಿನಿ ಆಗಿ, ನೀರಾಗಿ ಹರ್ದ್ ಭಾಗಮಂಡಲತ್ತೇಳುವಲ್ಲಿ ಕನಿಕೆ, ಸುಜ್ಯೋತಿಯರೊಟ್ಟಿಗೆ ಹೊಳೆಯಾಗಿ ಹರ್ದ್, ಬಲಮುರಿತ್ತೇಳುವ ಗ್ರಾಮಕ್ಕೆ ಎತ್ತಕನ ಬಲಮುರಿ ಜನ ನೀರ್‌ಗೆ ಇಳ್ದ್ ಕಾವೇರಿನ ಮುಂದೆ ಹೋಕ್ಕಾಗದ್‌ತ ತಡೆಕನ ತನ್ನ ಬಲ್ದಕಡೆಂದ ತಿರ್‌ಗಿ ನನ್ನನ ಯಾರೂ ತಡೆಕಾಗದ್ ನಾನ್ ಲೋಕ ಕಲ್ಯಾಣಕ್ಕೆ ಹೊರ್ಟೊಳೆತ ಹೇಳಿ ಮುಂದೆ ಹರ್ತ್. ನೀರ್‌ಗೆ ಇಳ್ದ್ ಹೆಣ್ಣ್ ಮಕ್ಕ ಕಾವೇರಿನ ತಡ್ದದ್‌ರ್‌ಂಲೇ ಅವರ ಸೀರೆಂದ್ ನೆರರಿಗೆ ನೀರ್‌ನ ಸೆಳ್ತಕ್ಕೆ ಹಿಂದಕೆ ತಿರ್‌ಗಿತ್.

ಹಂಗಾಗಿ ಕೊಡವ ಹೆಣ್ಮಕ್ಕ ಇಂದ್ ಸನ ತಮ್ಮ ಸೀರೆ ನೆರಿಗೆನ ಹಿಂದೆ ತಿರ್‌ಗಿ ಉಟ್ಟವೆತ ಪುರಾಣ ಹೇಳ್ದೆ. ಕೊಡಗ್‌ಲಿ ಹುಟ್ಟಿದ ಕಾವೇರಿ ಇಂದ್ ವಿಶಾಲ ಕರ್ನಾಟಕದ ಪಾವನ ಗಂಗೆಯಾಗಿ ಸರ್ವ ಜನರ ನೀರಡಿಕೆನ ಹೋಗ್‌ಸಿ ಹಂಗೆ ತಮಿಳ್‌ನಾಡ್‌ನ ಜನಕ್ಕೆ ಸಾಯ ಮಾಡಿ ಬಂಗಾಳ ಕೊಲ್ಲಿನ ಸೇರ್ದೆ. ಇಂದ್ ಭಾರತದ ದಕ್ಷಿಣ ಕಾಶಿತೇ ಹೆಸ್ರಾಗಿರುವ ತಲಕಾವೇರಿ ಮತ್ತೆ ಭಾಗಮಂಡಲ ಒಂದ್ ದೊಡ್ಡ ಯಾತ್ರಾ ಸ್ಥಳ ಆಗುಟ್ಟು, ಅಲ್ಲದೆ, ಪ್ರವಾಸೋದ್ಯಮದ ಸ್ಥಳನೂ ಆಗುಟ್ಟು. ಪ್ರತೀ ವರ್ಷ ಅಕ್ಟೋಬರ್ 17ರ ತುಲಾ ಸಂಕ್ರಮಣ ದಿನದಂದ್ ತುಲಾರಾಶಿಲಿ ಕಾವೇರಿ ಹುಟ್ಟುವಲ್ಲಿ ತೀರ್ಥೋದ್ಭವ ಜ್ಯೋತಿಷಿಗ ಗೊತ್ತು ಸಮಯಲಿ ಉದ್ಭವಿಸಿದೆ.

ಜನ ಕುಸೀಂದ ತೀರ್ಥ ತಕಂಡವೆ. ಹಂಗೆ ಕೊಡಗ್‌ನ ಎಲ್ಲಾ ಮೂಲೆ ಮೂಲೆಗೂ ಜನಕ್ಕೆ ಕಾವೇರಿ ಹಂಚಿವೆ. ಹಿಂದೆ ಸಾರಿಗೆ ಸೌಕರ್ಯ ಭಾರೀ ಕಮ್ಮಿ ಇತ್ತ್. ಹಂಗಾಗಿ ದಾರಿ ಕರೆಲಿ, ಇಸ್ಕೂಲ್‌ಗಳ್‌ಲಿ ಜನ ಉಳ್ಕಂಡ್ ಪ್ರಯಾಣ ಮಾಡ್ತಿದ್ದೊ. ನಾನ್ ಸಣ್ಣಂವ ಆಗಿರಕನ ನನ್ನನ ಅಪ್ಪ ಹೆಗ್‌ಲ್‌ಲಿ ಕೂರ್‌ಸಿಕಂಡ್ ತಲಕಾವೇರಿಗೆಹೋತಿದ್ದೊ. ಹಿಂದೆ ಭಾಗಮಂಡಲಂದ ತಲಕಾವೇರಿಗೆ ನೆಟ್ಟಂಗೆ ದಾರಿ ಸಂಪರ್ಕ ಇತ್ಲೆ. ಆಗ ಭಾಗಮಂಡಲಂದ ಸುಮಾರ್ 3ಮೈಲ್ ದಾಟಿದ ಮೇಲೆ ಒಂದ್ ಇಕ್ಕಟ್ಟ್‌ನ ದಾರಿಗಾಗಿ ಭೀಮನಕಲ್ಲ್‌ತ್ತೇಳುವ ಒಂದ್ ದೊಡ್ಡ ಬಂಡೆ ಹತ್ರ ಕುದ್ದ್ ಮುಂದೆ ತಲಕಾವೇರಿಗೆ ಹೋದು ಮಾಮೂಲಾಗಿತ್ತ್. "ಭೀಮನ ಕಲ್ಲ್"ತ್ತೇಳ್ರೆ ಭೀಮ ತಪಸ್ಸ್ ಮಾಡ್ದ ಜಾಗೆತ ಹೇಳಿವೆ. ಹಿಂದೆ ವಾಟೆದ್ ಕೊಳ್ಪೆಲಿ ತೀರ್ಥನ ತುಂಬಿಕಂಡ್ ಯಾತ್ರಾರ್ಥಿಗ ತಮ್ಮ ಮನೆಗೆ ಹೋತಿದ್ದೊ. ಇಂದ್ ಪ್ಲಾಸ್ಟಿಕ್ ಕುಪ್ಪಿ ಇಲ್ಲರೆ ಬಿಂದಿಗೆಗಳ್‌ಲಿ ತುಂಬುಕಂಡವೆ. ಈಗ ಯಾತ್ರಾರ್ಥಿಗಳಿಗೆ ಸಾಕಷ್ಟ್ ಸೌಕರ್ಯ ಇರ್ದರ್‌ಂದ ಮತ್ತೆ ಉಂಬಕೆ ವ್ಯವಸ್ಥೆ ಇರ್ದರ್‌ಂದ ಹೊರ ರಾಜ್ಯಗಳಾದ ತಮಿಳ್‌ನಾಡ್.

ಮತ್ತೆ ನಮ್ಮ ರಾಜ್ಯದ ಮೂಲೆ ಮೂಲೆಗಳ್‌ಂದ ಜನ ಕಾವೇರಿ ಜಾತ್ರೆಗೆ ಬಂದವೆ.

ಈ ಜಿಲ್ಲೆಲಿ ಹಿಂದೆ ರಾಜರ ಆಡಳಿತ ಇತ್ತ್. ಲಿಂಗರಾಜ, ದೊಡ್ಡ ವೀರ ರಾಜ, ಚಿಕ್ಕವೀರ ರಾಜರೆಲ್ಲ ಈ ಜಿಲ್ಲೆಲಿ ರಾಜ್ಯಾಡಳಿ ಮಾಡ್ಲೊಳೊ. ಅಂದ್ ಜಿಲ್ಲೆನ ಜನರಾಜರ ಸೇವೆನ ಮಾಡ್ತಿದ್ದೊ.ಜನರ ಸೇವೆನ ಮೆಚ್ಚ್‌ಕಂಡ್ ರಾಜರ್ ಕೆಲವುಕೆ ಅವವ್ ವಾಸ ಇದ್ದ ಜಾಗೆದ್ ಸುತ್ತ ಮುತ್ತದ ಪ್ರದೇಶಗಳ್‌ಲಿ ಜಾಗೆಗಳ್ನ ಪುಕ್ಸಟೆಯಾಗಿ ಕೊಟ್ಟೊಳೊ. ಅದ್ ಇಂದೂ ಸನ ಜಮ್ಮ ಜಾಗೀರ್, ಉಂಬಳಿ ಜಾಗೆತೆಲ್ಲಾ ಕರ್ದವೆ. ಅದ್ಕೆ ಕಂದಾಯ ಇಲ್ಲೆ. ವೀರರಾಜ ಅರಸ ಆಳ್ದ ಊರು ವೀರರಾಜ ಪೇಟೆತ ಕರ್ದವೆ. 1934ರ್‌ಂದ 1947ರ ಸಮಯಲಿ ಕೊಡಗ್ ಬ್ರಿಟಿಷರ ಆಳ್ವಿಕೆಗೆ ಒಳಗಾಗಿತ್ತ್. ಅವರ ಆಡಳಿತಲಿ ಕೊಡಗ್‌ನ ವಸ್ತುಗ ಭಾರೀ ಕಮ್ಮಿಲಿ ಸಿಕ್ಕ್‌ತಿತ್ತ್. ರೂಪಾಯಿ ಮೌಲ್ಯ ಹೆಚ್ಚಿತ್ತ್. ಇಂದ್ ರೂಪಾಯಿ ಮೌಲ್ಯ ಅಪಮೌಲ್ಯ ಆಗುಟ್ಟು. ನಾನ್ ಸ್ವಾತಂತ್ರ್ಯ ಪೂರ್ವಲೇ ಅಧ್ಯಾಪಕ ಹುದ್ದೆಗೆ ನೇಮಕ ಆಗಿದ್ದೆ. ನನ್ನ ಸಂಬಳ ತಿಂಗಳಿಗೆ ರೂ.20 ಆಗಿತ್ತ್. ಬ್ರಿಟಿಷರ ಆಡಳಿತಲಿಗಳಿಕೆಗೆ ಏನೂ ಕಮ್ಮಿ ಇತ್ಲೆ. ಹಿಂದೆ ಒಂದ್ ರೂಪಾಯಿಗೆ 18ಸೇರ್ ಅಕ್ಕಿ ಸಿಕ್ಕಿತಿತ್ತ್. ಒಂದ್ ಗಾಡಿ ಬತ್ತದ (15ಬಟ್ಟಿ) ಬೆಲೆ 15 ರೂಪಾಯಿ. 8–10ರೂಪಾಯಿ. ಸ್ವಾತಂತ್ರಕ್ಕಾಗಿ ಅಂದ್ ಕೊಡಗ್‌ನ ಅನೇಕರ್ ಹೋರಾಡಿ ಪ್ರಾಣಕಳ್ಕಂಡೊ. ಅಮರ ಸುಳ್ಯ ಕಾಟಕಾಯಿಂತ ದಂಗೆಲಿ ಹೋರಾಡ್ದ ವೀರ ಯೋಧ ಶ್ರೀ ಗುಡ್ಡೆಮನೆ ಅಪ್ಪಯ್ಯ ಗೌಡ. ಬ್ರಿಟಿಷರ್‌ಗೆ ಸೆರೆ ಸಿಕ್ಕಿ ಮಡಿಕೇರಿ ಕೋಟೆ ಆವರಣಲಿ ನೇಣ್‌ಗಂಬಕ್ಕೆ ಏರ್ಸಿದೊ. ಅಂದ್ ಅಮರ ಸುಳ್ಯಕಾಟ ಕಾಯಿ ದಂಗೆಲಿ ಕೊಡಗ್‌ನವು ಹೋರಾಡಿಕಡ ಕಡಮಕಲ್ಲು ರಸ್ತೆ. ಒಳ್ಳೆದಾಗಿತ್ತ್. ಇಂದ್ ಅದ್ ಅರಣ್ಯ ಇಲಾಖೆದ್ ಸೊತ್ತಾಗಿ, ರಸ್ತೆ ಇಲ್ಲದಾಗುಟು, ಈ ರಸ್ತೆ ಇಂದ್ ಇಲ್ಲದಿದ್ದರೆ ಸುಬ್ರಹ್ಮಣ್ಯ ಮತ್ತೆ ಧರ್ಮಸ್ಥಳಗಳಿಗೆ ಕೊಡಗ್‌ನವು ಹೋಗಿ ಬಾಕೆ ಹೆಚ್ಚ್‌ನ ಅನುಕೂಲ ಆತಿತ್ತ್. 30ಕಿ.ಮೀ ದೂರದ ಈ

ದಾರಿನ ಮುಚ್ಚಿದರ್‌ಂದ ಇದೀಗ 70ಕಿ.ಮೀ ದೂರ ಸುತ್ತಿ ಹೋಗುವ ಸ್ಥಿತಿ ಬಂದುಟು. ಅಂದ್ ಭಾರತದ ಸ್ವಾತಂತ್ರ್ಯಕ್ಕಾಗಿ ಕೊಡಗ್‌ಂದ ಹೋರಾಟ ಮಾಡ್ದವರ್‌ಲಿ ಶ್ರೀಯುತ ಮಂದಿಯಂಡ ಬೆಳ್ಯಪ್ಪ, ಶೀ ಕೊಳ್ಳಿಮಾಡ ಕರುಂಬಯ್ಯ, ಶ್ರೀ ಚೆಪ್ಪುಡಿರ ಯಂ. ಪೂಣಚ್ಚ, ಶ್ರೀ ಕೋರನ ಯಂ. ದೇವಯ್ಯ, ಶ್ರೀ ಬಿದ್ದಂಡ ಕಾರ್ಯಪ್ಪ, ಶ್ರೀ ಪೂಜಾರೀರ ಭಾರತ ಬಿಟ್ಟು ತೊಲಗಿ ಚಳುವಳಿಲಿ ಇಸ್ಕೂಲ್ ಮಕ್ಕ ಸನ ತರಗತಿ ಬಹಿಷ್ಕರಿಸಿ ಜಯ ಘೋಷ ಹಾಕಂಡ್ ಮೆರವಣಿಗೆಲಿ ಹೋದವರ್‌ಲಿ ನಾನೂ ಒಬ್ಬ. ಇಂದ್ ರಾಜಕೀಯದವರೊಟ್ಟಿಗೆ ನಾನೊಬ್ಬ ಸ್ವಾತಂತ್ರ್ಯ ಹೋರಾಟಗಾರತ ಹೇಳ್ರೆ ನೀನ್ ಜೈಲಿಗೆ ಹೊಗೊಳಾತ ಕೇಳಿವೆ. ವಿದ್ಯಾರ್ಥಿಗ ಜೈಲಿಗೆ ಹೋರ್ಕೆ ಅವು ಕಳ್ಳರಲ್ಲ, ಕೊಲೆ ಮಾಡ್ದವಲ್ಲ ಭಾರತ 1947ರ ಆಗಸ್ಟ್ 15ರಂದ್ ಸ್ವಾತಂತ್ರ್ಯ ಆದ ಮೇಲೆ ಕೊಡಗು ರಾಜ್ಯ ಆತ್. ಶ್ರೀ ಸಿ.ಎಂ. ಪೂಣಚ್ಚನವು ಮುಖ್ಯ ಮಂತ್ರಿಗಳಾಗಿಯೂ, ಶ್ರೀ ಕೆ. ಮಲ್ಲಪ್ಪನವು ಗೃಹಮಂತ್ರಿಗಳಾಗಿಯೂ, ಶ್ರೀ ನಿಡ್ಯಮಲೆ ಸೋಮಣ್ಣನವು ಸಂಸದವರಾಗಿಯೂ ಶ್ರೀ ಪಾಂಡನ ಡಿ. ಸುಬ್ಬಯ್ಯನವು ಶಾಸಕರಾಗಿಯೂ ನೇಮಕ ಆದೊ. ಬಿದ್ದಂಡ ಎಸ್. ಕುಶಾಲಪ್ಪನವು ವಿಧಾನ ಸಭಾಧ್ಯಕ್ಷರಾಗಿಯೂ, ಕೋರನ ಯಂ. ದೇವಯ್ಯನವು ಉಪಸಭಾಪತಿಗಳಾಗಿ ಸೇವೆ ಮಾಡ್ಲೊಳೊ. 1956ರ್‌ಲಿ ವಿಶಾಲ ಕರ್ನಾಟಕ ಅಸ್ತಿತ್ವಕೆ ಬಾಕನ ಶ್ರೀ ಎಂ.ಸಿ. ಪೂಣಚ್ಚನವು ಒರಿಸ್ಸಾ (ಒಡಿಸ್ಸಾ)ರಾಜ್ಯ ಪಾಲರಾಗಿದ್ದೊ. ವಿಶಾಲ ಕರ್ನಾಟಕಲಿ ಕೊಡಗ್‌ನವೇ ಆದ ಆರ್. ಗುಂಡುರಾವ್ ಅರಣ್ಯ ಮಂತ್ರಿಗಳಾಗಿ ಮತ್ತೆ ಮುಖ್ಯ ಮಂತ್ರಿಗಳಾಗಿಯೂ ಸೇವೆ ಮಾಡ್ದೊ. ಕೊಡಗ್‌ನ ಇಂದೂ ಸನ ವೀರಭೂಮಿತೇಕರ್ದವೆ. ಅಂದ್ ವೀರಯೋಧರಾಗಿ ಫಿ.ಮಾ.ಕೆ.ಎಂ. ಕಾರ್ಯಪ್ಪ, ಜನರಲ್ ತಿಮ್ಮಯ್ಯ, ಕರ್ನಲ್ ಕೋಟೇರ ಅಪ್ಪಣ್ಣ ಮೊದಲಾದ ವೀರಯೋಧರ್ ರಾಷ್ಟ್ರಕ್ಕಾಗಿ ಪ್ರಾಣಕೊಟ್ಟೊಳೊ. ಈಗ

ಸನ ಬಹಳಷ್ಟ್ ಕೊಡಗ್‌ನ ಯೋದರ್ ರಾಷ್ಟ್ರನ ರಕ್ಷಣೆ ಮಾಡ್ತೊಳೊ. ಜಮ್ಮು ಕಾಶ್ಮೀರದ ಗಡಿಲಿ ಇಂದೂ ವೀರಯೋಧರ್ ಪಾಕಿಸ್ಥಾನದ ಭಯೋತ್ಪಾದಕರ ಗುಂಡಿಗೆ ವೀರಯೋಧರ ಗ್ಯಾನಲಿ ಕೊಡಗ್‌ಲಿ ಫಿ.ಮಾ. ಕೆ.ಎಂ. ಕಾರ್ಯಪ್ಪ ರಸ್ತೆ, ಜನರಲ್ ತಿಮ್ಮಯ್ಯ ರಸ್ತೆ, ಗುಡ್ಡೆಮನೆಅಪ್ಪಯ್ಯ ರಸ್ತೆತ ರಸ್ತೆಗಳಿಗೆ ಹೆಸ್ರ್ ಇಸಿಯೊಳೊ. ಹಾಗೂ ಅವರ ಪ್ರತಿಮೆಗಳ್ನ ದೊಡ್ಡದಾಗಿ ಅನಾವರಣ ಮಾಡ್ಯೊಳೊ. ಕೊಡಗಿನವೇ ಆದ ಅಪ್ಪನೆರವಂಡ ಎಂ. ಬೆಳ್ಯಪ್ಪನವು ಶಾಸಕರಾಗಿಯೂ, ಶ್ರೀ ದಂಬೆಕೋಡಿ ಎ. ಚಿಣ್ಣಪ್ಪನವು, ಶ್ರೀಮತಿ ಸುಮಾವಸಂತ್, ಶ್ರೀ ದಂಬೆಕೋಡಿ ಎಸ್. ಮಾದಪ್ಪ, ಶ್ರೀ ಜೆ.ಕೆ. ಸುಬ್ಬಯ್ಯ ಇವೆಲ್ಲಾ ಶಾಸಕರಾಗಿ ಸೇವೆ ಮಾಡ್ಯೊಳೊ. ಶ್ರೀ ಚೌಡ್ಲು ಕಾಳಪ್ಪನವು ವಿಧಾನ ಪರಿಷತ್‌ನ ಸದಸ್ಯರಾಗಿದ್ದೊ. ಮತ್ತೆ ಶ್ರೀ ಜಿ. ವಿಜಯ ಶಾಸಕರಾಗಿ, ಮಂತ್ರಿಗಳಾಗಿಯೂ, ಶ್ರೀ ಕೊಂಬಾರನ ಬೋಪಯ್ಯನವು ಶಾಸಕರಾಗಿಯೂ ಉಪ ಸಭಾಪತಿಗಳಾಗಿ , ಸಭಾಪತಿಗಳಾಗಿಯೂ ಸೇವೆ ಮಾಡ್ಯೊಳೊ. ಶ್ರೀಮಂಡೇಪಂಡ ಅಪ್ಪಚ್ಚು ರಂಜನ್ ಶಾಸಕರಾಗಿಯೂ, ಮಂತ್ರಿಗಳಾಗಿಯೂ ಸೇವೆ ಮಾಡಿಯೊಳೊ. ಶ್ರೀಮೇರಿಯಂಡ ಸಿ. ನಾಣಯ್ಯನವು ಮಂತ್ರಿಗಳಾಗಿಯೂ, ಮತ್ತೆ ವಿಧಾನಪರಿಷತ್‌ನ ಸದಸ್ಯರಾಗಿ ಸೇವೆ ಸಲ್ಲಿಸಿಯೊಳೊ.

ಈಗ ಕೇಂದ್ರದ ಪಂಚಾಯಿತಿ ರಾಜ್ಯ ವ್ಯವಸ್ಥೆಯಡಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮಪಂಚಾಯಿತಿ, ನಗರಸಭೆ, ಪಟ್ಟಣಪಂಚಾಯಿತಿ ಹಿಂಗೆ ಪಂಚಾಯಿತಿಗಳ ಮೂಲಕ ಅಭಿವೃದ್ಧಿ ಕೆಲ್ಸಗ ಆಗ್ತಾ ಉಟ್ಟು. ಈಗಳೂ ಜಿಲ್ಲಾಧಿಕಾರಿಯೇ ಜಿಲ್ಲೆನ ಮುಖ್ಯಸ್ಥರ್. ಅವರ ಅಧೀನಲಿ ಉಪವಿಭಗಾಧಿಕಾರಿ, ತಹಶೀಲ್ದಾರರ್ ಇದ್ದವೆ. ಹಿಂದೆ ಕೊಡಗ್‌ಲಿ ಕೊಡಗ್‌ನವೇ ಆದ ದಿವಾನ್ ಬಹದ್ದೂರ್ ಕೇಟೋಳಿರ ಚಂಗಪ್ಪನವು ಜಿಲ್ಲಾಧಿಕಾರಿಯಾಗಿ, ರಾವ್ ಬಹದ್ದೂರ್ ಕೋಡೀರ ಟಿ. ಉತ್ತಪ್ಪನವು ಉಪವಿಭಾಗಾಧಿಕಾರಿಯಾಗಿಯೂ ಸೇವೆ

ಮಾಡಿಯೊಳೊ.

ಕಗ್ಗೋಡ್ಲುನ ಎಂ.ಎನ್. ಗುಂಡೂರಾವ್ ಉಪವಿಭಾಗಧಿಕಾರಿ ಆಗಿ ಕೆಲ್ಸ ಮಾಡಿಯೊಳೊ. ಶ್ರೀ ಐಚೆಟ್ಟಿರ ಸಿ.ಸುಬ್ಬಯ್ಯನವು ಕೊಡಗ್‌ನ ಮುಖ್ಯ ಕಾರ್ಯದರ್ಶಿಯಾಗಿದ್ದೊ.

ಕೊಡಗ್‌ನವೇ ಆದ ಶ್ರೀಮತಿ ಚೋನಿರ ಮುತ್ತಪ್ಪನವು ಸುರೂನ ಭಾರತದ ಪ್ರತಿನಿಧಿ (ರಾಯಭಾರಿ)ಅಮೇರಿಕಾಲಿ ಸೇವೆ ಮಾಡ್ದಹೆಣ್ಣ್‌ತ್ತೇಳುವ ಹೆಗ್ಗಳಿಕೆಗೆ ಒಳಗಾದ್ದ್ ಒಂದ್ ವಿಶೇಷನೇ. ಹಿಂದೆ ಗ್ರಾಮಗಳ್‌ಲಿ ಹಿರಿಯ ವಿದ್ಯಾವಂತ ಮುಖಾಂತರವೇ ಅಲ್ಲಿನ ಸಮಸ್ಯೆಗಳಿಗೆ ಪಂಚಾಯ್ತಿ ಮೂಲಕ ತೀರ್ಮಾನಿಸಿ ಸಮಸ್ಯೆಗಳ್ನ ಬಗೆ ಹರ್‌ಸ್ತಿದ್ದೊ. ಕೋರ್ಟ್ ಕಚೇರಿಗಳಿಗೆ ಪುಕಾರ್ ಹೋತಿತ್ತ್‌ಲೆ. ಊರ್ ಪಟೇಲನೇ ಕಂದಾಯ ವಸೂಲಿ ಮಾಡಿ ಇಲಾಖೆಗೆ ಕಟ್ಟ್‌ತಿತ್ತ್. ಈಗ ಭೂಮಾಲೀಕನೇ ಕಚೇರಿಗೆ ಹೋಗಿ ಕಂದಾಯ ಕಟ್ಟೊಕು. ಅಂದ್ ಭೂಮಾಲೀಕಂಗೆ ಪಹಣಿ ಪತ್ರ ಗ್ರಾಮ ಲೆಕ್ಕಾಧಿಕಾರಿಗ ಕೊಡ್ಲೆ ಕೈಲೇ ಬರ್ದ್ ಕೊಡ್ತಿದ್ದೊ. ಇಂದ್ ಗಂಟೆವರೆಗೆ ಸಾಲ್‌ಲಿ ನಿತ್ತ್ ಪೂರ್ತಿ ವಿವರ ಇಲ್ಲದೆ ಕಂಪ್ಯೂಟರ್ ಮೂಲಕ ಕೈಗೆ ಸಿಕ್ಕಿದೆ. ಇಂದ್ ಭೂಮಾಲೀಕ ತನ್ನ ಆಸ್ತಿದ್ ಖಾತೆ ವರ್ಗಾವಣೆಗೆ ಮತ್ತೆ ಕಂದಾಯಕ್ಕೆ ಸೇರ್ಸಿಕೆ ಅಂವ ಪಡುವ ಕಷ್ಟ ದೇವರಿಗೇ ಗೊತ್ತು. ಅಂದ್ ಎಲ್ಲನೂ ಸಲೀಸಾಗಿ ಕೆಲವೇ ದಿನಗಳ್‌ಲಿ ಕೆಲ್ಸ ಆತಿತ್.

ಹಿಂದೆ ಕೊಡಗ್‌ಲಿ ಜಿಲ್ಲಾ ಮುಖ್ಯ ನ್ಯಾಯಾಧೀಶರಾಗಿ ಕೊಡಗ್‌ನ ಪೆರಾಜೆ ನಿವಾಸಿ ಶ್ರೀ ನಿಡ್ಯಮಲೆ ಮುದ್ದಪ್ಪನವು ಸೇವೆ ಮಾಡ್ದ ಗಣ್ಯವ್ಯಕ್ತಿ. ಇವರ ಕಾಲಲಿ ಕೊಲೆಪ್ರಕರಣಗಳ್ಲಿ ಸೇರ್ದ ಇಬ್ಬರು ಅಪರಾಧಿಗಳ್ನ ಗಲ್ಲಿಗೇರ್ಸಿದ್ ಕೊಡಗ್‌ಲಿ ಇಂದಿಗೂ ಅದೇ ಕಡೆ. ಕೊಡಗ್‌ಲಿ ಹಿಂದೆ ವಿದ್ಯಾಕ್ಷೇತ್ರಲಿ ಪಟ್ಟಡ ಸಿ. ಉತ್ತಯ್ಯ, ಬಿದ್ದಂಡ ಎಸ್. ಕುಶಾಲಪ್ಪ, ದೇಯಂಡ ದೇವಯ್ಯ, ಮಾಚಿಮಾಡ ಚಂಗಪ್ಪ, ಶ್ರೀಮತಿ ಕೆದಂಬಾಡಿ ಇಂದಿರಾ ಇವೆಲ್ಲಾ ಶಿಕ್ಷಣಾಧಿಕಾರಿಗಳಾಗಿ ಸೇವೆ

ಮಾಡ್ದವು. ವೈದ್ಯಕೀಯ ಕ್ಷೇತ್ರಲಿ ಮಂಡೇಪಂಡ ಬೋಪಯ್ಯ, ಮೂಡೇರ ಅಪ್ಪಯ್ಯ, ಅಜ್ಜಮಾಡ ಕಾಳಯ್ಯ, ಇವು ಪ್ರಮುಖರ್. ಸಹಕಾರ ಕ್ಷೇತ್ರಲಿ ಪಂದಿಕುತಿರ ಚಂಗಪ್ಪ ಧುರೀಣರಾಗಿದ್ದೊ. ಪೆರಾಜೆ ಗ್ರಾಮದ ಶ್ರೀಯುತ ಮಾವೋಜಿ ಆರ್.ಜನಾರ್ಧನ ನನ್ನ ಸಹಪಠಿ ಮತ್ತೆ ಆಪ್ತ ಸಿನೇತ ಆಗಿದ್ದ ಅವು ಕರ್ನಾಟಕ ಹೈಕೋರ್ಟ್‌ನ ವಕೀಲರಾಗಿದ್ದೊ.ಮತ್ತೆ ಅವು ಅಡ್ವಕೇಟ್ ಜನರಲ್ ಆಗಿ ನಿವೃತ್ತಿ ಆದೊ. ಇವು ಈಗತಾನೆ 2–3 ವರ್ಷಗಳ ಹಿಂದೆ ದೈವಾಧೀನರಾದೊ.

ಹಿಂದೆ ಕೊಡಗ್‌ಲಿ ಸಾರಿಗೆ ವ್ಯವಸ್ಥೆ ತುಂಬಾ ವಿರಳ ಆಗಿತ್ತ್. ಗ್ರಾಮಾಂತರ ಪ್ರದೇಶಗಳ್‌ಲಿ ರಸ್ತೆ ಸಂಪರ್ಕ ಇತ್ತೇ ಇಲ್ಲೆ. ಕಾಲ್ನಡಿಗೆಲೇ ಹೋಕಾಗಿತ್ತ್. ಸಾಮಾನ್‌ಗಳ್ನ ತಲೆ ಮೇಲೆ ಹೊತ್ತ್‌ಕಂಡ್ ನಡೆಕಾಗಿತ್ತ್. ಈಗ ಜನಪ್ರತಿನಿಧಿಗಳ್‌ಂದ ಸಾರಿಗೆ ವ್ಯವಸ್ಥೆ ಶಿಕ್ಷಣ, ವೈದ್ಯಕೀಯ, ರಸ್ತೆ ಕಾಮಗಾರಿ, ಕುಡಿವನೀರ್, ಸೇತುವೆ, ಅಣೆಕಟ್ಟೆ, ಬಡವುಕೆ ವಸತಿ ಸೌಲಭ್ಯ ಲಾಯ್ಕ ಆಗ್ತಾ ಉಟ್ಟು. ಇಂದ್ ಪ್ರವಾಸೋದ್ಯಮ ಕ್ರೀಡಾಭಿವೃದ್ಧಿ, ದೇವಸ್ಥಾನಗಳ ಜೀರ್ಣೋದ್ಧಾರ ಹಿಂಗೆ ಸಾಕಷ್ಟ್ ಅಭಿವೃದ್ಧಿ ಕೆಲ್ಸ ಪ್ರಗತಿಲಿ ಉಟ್ಟು. ಈಗ ಕೊಡಗಿನ ಗ್ರಾಮಾಂತರ ಪ್ರದೇಶಗಳ್‌ಲಿ ಮನೆ ಮನೆಗಳಿಗೆ ಡಾಮರೀಕಣ ಆದ ರಸ್ತೆಗಳ ಒಳೊ. ಹಿಂದೆರ ಸರ್ಕಾರಿ ಇಸ್ಕೂಲ್‌ಗ ಇದ್ದೊ. ಈಗ ಸಾಕಷ್ಟ್ ಖಾಸಗೀ ವಿದ್ಯಾಸಂಸ್ಥೆ ಒಳೊ. ಈಗ ವಿದ್ಯೆ ಒಂದ್ ವ್ಯಾಪಾರೀಕರಣದಂಗೆ ಆಗುಟು. ಈಗ ಕೊಡಗ್‌ಲಿ ಶೇ 90–95ರಷ್ಟ್ ವಿದ್ಯಾವಂತರೇ. ಆದರೆ ಸತ್ಯ, ನ್ಯಾಯ, ಧರ್ಮ, ಪ್ರೀತಿ ವಿಶ್ವಾಸಗಳಿಗೆ ಹಿಂದೆ ಇದ್ದ ಮೌಲ್ಯ ಇಂದಿಲ್ಲೆ. ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ ಈ ಪದಗಳ ಬಳಕೆಗೆ ಅವಕಾಶನೇ ಇತ್ಲೆ. ಹಿಂದೆಲ್ಲ ಒಟ್ಟಾಗಿ ಬಾಳ್ತದ್ದ ಕೂಡುಕುಟುಂಬಗ ಜಾಸ್ತಿ ಇದ್ದೊ. ಚಾಂಪ, ಚಾಮೆವ್ವ, ಅಪ್ಪ, ಅವ್ವ, ಅಪ್ಪನ ಸೋದರರ್, ಸೋದರಿಗ, ಮಕ್ಕ ಎಲ್ಲ ಸೇರಿ ಒಂದ್ ಮನೆಲಿ 30ಕ್ಕಿಂತಲೂ ಹೆಚ್ಚ್ ಜನ ಇರ್ತಿದ್ದೊ. ಹಿರಿಯರ ಮಾತಿಗೆ ಭಾರೀ ಗೌರವ ಇತ್ತ್. ಕೂಡಿಕಂಡ್

ದುಡ್ಡ್, ಕೂಡಿಕಂಡ್ ಊಟ ಮಾಡ್ತಿದ್ದೊ. ಮನೆಯೇ ಮೊದಲ ಪಾಠ ಶಾಲೆ. ಅಜ್ಜಂದ್‌ರ ಕಾಲಂದಲೇ ಹಂಗೆ ಇತ್ತ್. ಪಾರ್ ಮೇಲೆ ಹೊಯಿಗೆ ಹರ್‌ಂಡಿಕಂಡ್ ಮಕ್ಕಳಿಗೆ ಅಕ್ಷರ ಕಲ್‌ಸ್ತಿದ್ದೊ. ಹಿರಿಯರ್ನ ಪ್ರೀತಿಂದ ಕಾಂಬತಿದ್ದೊ. ಮನೆಗಳ್‌ಲಿ ಸಂಧ್ಯಾವಂದನೆ ತಪ್ಪುತಿತ್ತ್‌ಲೆ. ಮಕ್ಕಳಿಗೆ ಅಭ್ಯಾಸ ಮಾಡ್‌ತಿದ್ದೊ. ಮನೆಲೇ ಮಕ್ಕ ಅವರವರ ವಸ್ತುಗಳ್‌ನ ಎಲ್ಲೆಲ್ಲಿ ಜೋಪಾನಾಗಿ ಇಸಿಕಂಬಕುತ್ತೇಳುವ ಕುರ್ತ್ ಎಚ್ಚರ ಕೊಡ್ತಿದ್ದೊ. ಹಿಂದೆ ಕೊಡಗ್‌ಲಿ ಅಂತರ್ಜಾತಿ ಮೊದುವೆನೇ ಇತ್ಲೆ. ಈಗ ಅಂತರ್ಜಾತಿ ಮೊದುವೆ ಜಾಸ್ತಿ ಆಗ್ತಾ ಉಟ್ಟು. ಹಿಂದೆ ಕುಲ ನೋಡಿ ಹೆಣ್ಣ್ ಕೊಡುತ್ತೇಳ್ವಕ್ರಮ ಇತ್ತ್. ಈಗ ಕುಲಗೋತ್ರಗಳಿಗೆ ವಿರಾಮ ಆಗುಟ್ಟು.

ಕೊಡಗ್‌ಲಿ ಅಂದ್ ಬತ್ತ ಬೇಸಾಯಾನೇ ಮೂಲ. ಬೇರೆ ಬೆಳೆಗಳಾಗಿ ಬಾಳೆ, ಕಿತ್ತುಳಿ, ಯಾಲ ಇದರ್ನೆಲ್ಲಾ ವಾಣಿಜ್ಯ ಬೆಳೆ ಬೆಳಿತಿದ್ದೊ. ಆ ಕಾಲಲಿ ಮಳೆ ಜಾಸ್ತಿ ಇದ್ದರ್‌ಂದ ಈಗನಂಗೆ ಕಾಫಿ, ಒಳ್ಳಮೆಣ್ಸ್, ಶುಂಠಿ, ಬೆಳೆಕಾತಿತ್ಲೆ. ಆ ಕಾಲಲಿ ವರ್ಷಕ್ಕೆ ಸರಾಸರಿ 200 ಇಂಚಷ್ಟ್ ಮಳೆ ಆತಿತ್ತ್. ಆಗೆಲ್ಲಾ ಮಳೆಂದಾಗಿ ಹೊಳೆ ತೋಡು ತುಂಬಿ ಹರೆತಿತ್ತ್. ಪೋಷಕರ್ ತಮ್ಮ ಮಕ್ಕಳ್ನ ಇಸ್ಕೂಲ್‌ಗೆ ದಾಖಲು ಮಾಡ್ಕನ 7–8 ವರ್ಷ ಪ್ರಾಯ ಆಕಾಗಿತ್ತ್. ಹಂಗೇ ಮಕ್ಕಳೊಟ್ಟಿಗೆ ಮೇಲೆನ ತರಗತಿನ ದೃಢಕಾಯ ಮಕ್ಕ ಜೊತೆಗಿರಕಾಗಿತ್ತ್. ಅಂದ್ ಇಂದ್‌ನಂಗೆ ಫ್ಯಾಷನ್ ಕೊಡೆಗ ಇತ್ಲೆ. ಬಿದ್‌ರ್ ಇಲ್ಲರೆ ವಾಟೆದ್ ಗೊರ‍್ಗಗಳ್ನ ಮನೆಯವೇ ಮಕ್ಕಳಿಗೆ ಮಾಡಿಕೊಡ್ತಿದ್ದೊ. ಅಂದ್ ಇಸ್ಕೂಲ್ ಗಳ್‌ಲಿ ಪಾಠದೊಟ್ಟಿಗೆ ಕೃಷಿ ಚಟುವಟಿಕೆ ಇತ್ತ್. ಇಸ್ಕೂಲ್‌ಗಳ್‌ಲಿ ಕೃಷಿ ಮಾಡ್ದರ್‌ಂದ ಇಸ್ಕೂಲ್ ಕೃಷಿ ನಿಧಿಗೆ ಆದಾಯ ಸಿಕ್ಕ್‌ತಿತ್ತ್. ಮಕ್ಕಳಿಗೆ ಕೃಷಿ ಮಾಹಿತಿಯೂ ಸಿಕ್ಕ್‌ತಿತ್ತ್.

ಹಿಂದೆಲ್ಲಾ ದನಗಳ್ನ ಜಾಸ್ತಿ ಸಾಂಕ್‌ತಿದ್ದೊ. ಎಲ್ಲಾ ಮನೆಗಳ್ಲು ಹಾಲ್, ಮೊಸ್ರು, ಬೆಣ್ಣೆ, ತುಪ್ಪ, ತಪ್ಪುತ್ತಿತ್ಲೆ. ಸಗಣಿಂದ ಸಾವಯವ

ಗೊಬ್ಬರದ ಬೆಳೆಗೆ ಹಾಕ್‌ತಿದ್ದೊ. ಗ್ರಾಮ ಸೇವಕರ್ ಮನೆಮನೆಗಳಿಗೆ ಗೊಬ್ಬರ ಗುಂಡಿ ತಯಾರಿಕೆ ತಮ್ಮ ಮನೆಲೇ ರಾಟೆ ಇಲ್ಲರೆ ಒನಕೆಂದ ಕುಟ್ಟಿ ಅಕ್ಕಿ ಮಾಡಿ ಊಟ ಮಾಡ್ತಿದ್ದೊ. ತಾವೇ ಕುಟ್ಟಿ ಮಾಡ್ದ ಅಕ್ಕಿಲಿ ಪೌಷ್ಠಿಕಾಂಶ ಜಾಸ್ತಿ ಇರ್ತಿತ್ತ್. ಜನ ಆರೋಗ್ಯವಂತರಾಗಿ ಇರ್ತಿದ್ದೊ.ಅಂದ್ ಕಲಬೆರಕೆ ಆಹಾರ ಪದಾರ್ಥತ್ತೇಳಿಗೊತ್ತಿತ್ಲೆ. ಇಂದ್ ಬೇರೆ ಬೇರೆ ರಾಸಾಯಿನಿಕ ಗೊಬ್ಬರ ಮತ್ತೆ ಕ್ರಿಮಿ ನಾಶಕಗಳ ಬೆಳಗೆಗೆ ಸಿಂಪರಣೆ ಮಾಡ್ದರ್‌ಂದ ಆಹಾರ ಪದಾರ್ಥ ಹಾಳಾದೆ. ಇಂಥದರ ತಿಂಬೊದರ್‌ಂದ ಆರೋಗ್ಯಕ್ಕೆ ಭಾರೀ ಕೆಟ್ಟದ್. ಅಂದ್ ಮನೆಮನೆಗಳ್‌ಲಿ ಸಾಕಷ್ಟ್ ತರಕಾರಿ ಬೆಳ್ಸ್‌ತಿದ್ದೊ. ತರಕಾರಿಗಳ್ನ ಪೇಟೆಂದ ಕ್ರಯ ಕೊಟ್ಟ್ ತಾದೇ ಇತ್ಲೆ. ತಾವು ಬೆಳ್ದರ ತರಕಾರಿ, ಹಣ್ಣ್‌ಗಳ್ನ ಪೇಟೆಗೆ ತಕ್ಕಂಡ್ ಹೋಗಿ ಮಾರಿ ತಮಗೆ ಬೇಕಾದ್ದರ ತಕಂಬತ್ತಿದ್ದೊ. ರೈತರ್ ತಾವು ಬೆಳ್ದ ವಸ್ತುಗಳ್ನ ಎತ್ತ್‌ನ ಗಾಡಿಲಿ ಇಲ್ಲರೆ ಕುದುರೆ ಮೂಲಕ ಮಾರ್ಕೆಟ್‌ಗೆ ತಕಂಡ್ ಹೋತಿದ್ದೊ. ಅಂದೇ ಮಡಿಕೇರಿನ ಸುಂಕದಕಟ್ಟೆಲಿ ತಕ್ಕಂಡ್ ಹೋದ ವಸ್ತುಗೆ ಮೂಟೆ ಒಂದಕ್ಕೆ ಮೂರ್ ಪೈಸ ಸುಂಕಕೊಟ್ಟ್ ಮುಂದೆ ಹೋಕಾಗಿತ್ತ್. ಸುಂಕದವನೊಟ್ಟಿಗೆ ಸುಖ ದುಃಖಗ ಇಲ್ಲೆ. ಮೂಟೆಗೆ "ಮೂರುಕಾಸು ಕೊಟ್ಟು ಮುಂದೆ ಹೋಗುತ್ತೇಳುವ ಮಾತ್ ವಾಡಿಕೆಲಿತ್ತ್. ಅದೇ ಇಂದ್‌ದ್ ಮಡಿಕೇರಿನ ಟೋಲ್ ಗೇಟ್. ಅಂದ್‌ನ ಕಾಲಲಿ ಇಂದ್‌ನಂಗೆ ಯಂತ್ರಗ ಇತ್ಲೆ.

ಹಿಂದೆ ಕೊಡಗ್‌ಲಿ ಪತ್ರಿಕಾ ಮಾಧ್ಯಮ ಇತ್ಲೆ. ಸ್ವಾತಂತ್ರ್ಯದ ಪೂರ್ವಲಿ "ಜನ್ಮ ಭೂಮಿ"ತ್ತೇಳುವ ವಾರ ಪತ್ರಿಕೆ ಇಂದ್‌ನ ಕೊಡಗು ವಿದ್ಯಾಲಯದ ಕಟ್ಟಡಲಿ ಮುದ್ರಣ ಆಗ್‌ತಿತ್ತ್‌ತ ಗ್ಯಾನ ಆದೆ. ಅದರ ಸಂಪಾದಕ ಶ್ರೀ ಬಲ್ಲಚಂಡ ಬೆಳ್ಯಪ್ಪನವು. ಸ್ವಾತಂತ್ರ್ಯದ ಸಿಕ್ಕಿದ ಮೇಲೆ ಶಕ್ತಿ ದಿನ ಪತ್ರಿಕೆ ಶ್ರೀ ಗೋಪಾಲಕೃಷ್ಣ ಅವರ್‌ಂದ ಸುರು ಆತ್. ಇಂದ್ ಶಕ್ತಿ ದಿನ ಪತ್ರಿಕೆ ಕೊಡಗ್‌ನ ಮೂಲೆ ಮೂಲೆಗಳಿಗೂ ಪರ ಊರುಗಳಿಗೂ ಸುದ್ದಿ ಸಮಾಚಾರಗಳ ಮುಟ್ಟುಸುದರ್‌ಲಿ ಹೆಸ್ರಾಗುಟು.

ಸಾಕಷ್ಟ್ ಲೇಖನ ಮತ್ತೆ ಜಾಹೀರಾತ್‌ಗ ಪ್ರಕಟ ಆದೆ. ಹಿಂದೆ ಆಕಾಶವಾಣಿ ಇತ್ಲೆ. ಈ ಕೇಂದ್ರ ಸರಕಾರದ ಸಾಯದ ಮಡಿಕೇರಿ ಆಕಾಶವಾಣಿ ಸ್ಥಾಪನೆ ಆಗಿ ಮನೆ ಮನೆಗೆ ಸುದ್ದಿ ಸಮಾಚಾರಗಳ್ನ ಮುಟ್ಟುಸ್ತಾ ಉಟ್ಟು. ವೀಕ್ಷಕ ವಿವರಣೆನ ಸಹ ಪ್ರಸಾರ ಮಾಡ್ದೆ. ಹಿಂದೆನ ಕಾಲಲಿ ದೂರದರ್ಶನ ಇತ್ಲೆ. ಹಾಡ್‌ಗಳ್ನ ಗ್ರಾಮಫೋನ್ ಮೂಲಕ ಕೇಳ್ತಿದ್ದೊ. ಸಂಧ್ಯರಾಗ, ಉದಯರಾಗಗಳ್ನ ಗ್ರಾಮಾಫೋನ್ ಮೂಲಕ ಕೇಳ್ತಿದ್ದೊ. ಹಿಂದೆ ವರ್ತಮಾನಗಳ್ನ ಕೈಂದ ಬರ್ದ್ ಅಂಚೆ ಮೂಲಕ ತಳ್ಸಕ್ಕಾಗಿತ್ತ್. ಈಗ ಪ್ರತಿಯೊಬ್ಬನ ಕೈಲಿ ಫೋನ್. ಮೂಲಕ ಮಾತಾಡಿ ವಿಚಾರ ವಿನಿಮಯ ಮಾಡಿಕಂಡವೆ. ಹಿಂದೆ ಕೊಡಗ್‌ಲಿ ಕಲ್ಯಾಣ ಮಂಟಪ ಇತ್ಲೆ. ಮೊದುವೆಯೆಲ್ಲ ಅವರವರ ಮನೆಗಳ್‌ಲೇ ನಡೆತಿತ್ತ್. ಈಗ ಸಮಾಜವಾರು ಕಲ್ಯಾಣ ಮಂಟಪಗ ಒಳೊ. ಕೊಡಗು ಐನ್ ಮನೆಗಳಿಗೆ ಹೆಸ್ರ್‌ವಾಸಿ ಐನ್‌ಮನೆತ್ತೇಳ್ರೆ ಒಂದ್ ಕುಟುಂಬದ ಶುಭ ಕಾರ್ಯಗ ತೀರ್ಕಂಡ ಹಿರಿಯವುಕೆ ಎಡೆ ಇಕ್ಕುದು, ಹಾಗೂ ಪದ್ಧತಿ ಪರಂಪರೆಗಳಿಗೆ ಅನುಗುಣ ಆಗಿ ಕುಟುಂಬದ ಸರ್ವಸದಸ್ಯರ್ ಒಂದ್‌ಗೂಡಿ ಮಾಡುವ ಮುಖ್ಯ ಜಾಗೆತ್ತೇಳ್ರೆ ಐನ್‌ಮನೆ. ಇದ್ ಜಾಸ್ತಿ ಆಗಿ ಕೊಡವ ಜನಾಂಗಲೂ ಮತ್ತೆ ಗೌಡ ಜನಾಂಗದವರ್‌ಲಿ ಆಚಾರಲಿರುವ ಮನೆ. ಈ ಐನ್‌ಮನೆಗಳ ಲೆಕ್ಕನ ಕೆಲ ವರ್ಷಗಳ ಹಿಂದೆ ಕೊಡಗ್‌ನವೇ ಆದ ನಡಿಕೇರಿಯಂಡ ಚಿಣ್ಣಪ್ಪ ದಂಪತಿಗ ಕೊಡಗ್‌ನ ಮನೆಮನೆಗಳಿಗೆ ಹೋಗಿ ಚಿತ್ರೀಕರಣ ಮಡಿಯೊಳೊ. ನಮ್ಮ ಮನೆಗೂ ಅವು ಬಂದ್ ಪದ್ಧತಿ ಪರಂಪರೆ ಬಗ್ಗೆ ನನ್ನೊಂದಿಗೆ ಚರ್ಚೆಮಾಡಿಯೊಳೊ. ಗೌಡ ಜನಾಂಗದವು ತಮ್ಮ ಐನ್‌ಮನೆಲಿ ಮೂರ್ ಇಲ್ಲರೆ ಐದ್ ವರ್ಷಗಳಿಗೊಮ್ಮೆ ಕುಲದೇವರರಾದ ಶ್ರೀ ವೆಂಕಟರಮಣ ದೇವರ ಹರಿಸೇವೆ ಉತ್ಸವನ ಮಾಡಿವೆ. ದೇವರ ಮುಡಿಪು (ಭಂಡಾರ) ಐನ್‌ಮನೆಲಿ ಭದ್ರ ಆಗಿ ಇದ್ದದೆ.

ಇಂದ್ ವೈದ್ಯಕೀಯ ಸೌಲಭ್ಯ ಜಾಸ್ತಿ ಆ ತಿದ್ದಂಗೆ ಹೊಸ

ಹೊಸ ಕಾಯಿಲೆಗ ತಲೆ ಎತ್ತ್‌ತ ಒಳೊ. ಹಿಂದೆನ ಮಕ್ಕಳ್‌ಲಿ ದುರಾಭ್ಯಾಸ ಇತ್ಲೆ. ಮಕ್ಕ ತಮ್ಮ ಪರೀಕ್ಷೆಗಳಲಿ ಅನುತ್ತೀರ್ಣ ಆದವ್ ಸಾಯ್ತಿತ್‌ಲೆ. ಬದಲಿಗೆ ಪುನಾ ಪ್ರಯತ್ನ ಪಡ್ತಿದ್ದೊ. ಗುರುಗ ಮಕ್ಕಳಿಗೆ ಧೈರ ತುಂಬ್‌ತಿದ್ದೊ. ಇಂದ್‌ನ ಬಹುತೇಕ ಮಕ್ಕಳ್ಲಿ ಆತ್ಮವಿಶ್ವಾಸನೇ ಕಾಣ್ತಿಲ್ಲೆ. ಹೆಚ್ಚಿನವು ಬೀಡಿ, ಸಿಗರೇಟು, ಗಾಂಜಾ, ಪಾನ್‌ಪರಾಗ ತಿಂಬೊದು ಇಂತ ಕೆಟ್ಟ ಕುಡೆಕನ ಮಕ್ಕದೂರ ಹೋಕಾಗಿತ್ತ್. ಹಿರಿಯರ ಸಭೆಲಿ ಮಕ್ಕಳಿಗೆ ಅವಕಾಶ ಇತ್ಲೆ. ಮಕ್ಕಳೂ ಹಿರಿಯರೊಟ್ಟಿಗೆ ಸಹಕರಿಸಿವೆ. ಇಂದ್ ಪೋಷಕರ್ ಮಕ್ಕಳ್ನ ಜಾಸ್ತಿ ಪ್ರೀತಿಸಿವೆ. ಇಂದ್ ಮಕ್ಕಳಲಿ ಭಯ ಭಕ್ತಿಗ ಇಲ್ಲೆ. ಹಿಂದೆ ಮಕ್ಕ ತಪ್ಪು ಮಾಡಿಕೆ ಪೆಟ್ಟ್ ಬೀಳ್ತಿತ್. ಇಂದ್ ಇಸ್ಕೂಲ್‌ಗಳ್ಲಿ ಸನ ಗುರುಗ ಮಕ್ಕಳ್ನ ಮುಟ್ಟುವಂಗಿಲ್ಲೆ. ಇಂದ್‌ನ ಕೆಲ ರೈತರ್ ತಮ್ಮ ಕೃಷಿಲಾಗಲಿ ವ್ಯಾಪಾರಲ್ಲಾಗಲಿ ನಷ್ಟ್ ಆತ್‌ದಾದರೆ ಪ್ರಾಣಕಳ್ಕಂಡವೆ. ಹಿಂದೆ ಈ ರೀತಿ ಇತ್ಲೆ. ಹಿಂದೆಲ್ಲಾ ಅತಿವೃಷ್ಟಿ ಅನಾವೃಷ್ಟಿಗಳಿಗೆ ಸರಕಾರದ ಪರಿಹಾರ ಇತ್ಲೆ. ಜನರೇ ಇದ್ದವ ಇಲ್ಲದವುಕೆ ಕೊಟ್ಟ್ ಪರಸ್ಪರ ಸಾಯ ಮಾಡ್ತಿದ್ದೊ. ಇಂದ್ ರೈತಂಗೆ ನಷ್ಟ ಆದರೆ ಸರಕಾರಂದ ಪರಿಹಾರ ಘೋಷಣೆ ಆದೆ. ಆದರೆ ಈ ಪರಿಹಾರ ಇದ್ದವಂಗೆ ಸಿಕ್ಕುದಲ್ಲದೆ, ಇಲ್ಲದವಂಗೆ ಸಿಕ್ತಿಲ್ಲೆ. ಇದರ್‌ಂದ ಸರಕಾರದ ಬೊಕ್ಕಸಕ್ಕೆ ನಷ್ಟ ಅಲ್ಲದೆ ಜನಕ್ಕೆ ಪ್ರಯೋಜನ ಇಲ್ಲೆ. ಹಿಂದೆಹೆಣ್ಮಕ್ಕಳ್‌ಲಿ ಒಗ್ಗಟ್ಟ್‌ನ ಕೊರತೆ ಇತ್ತ್. ಆದರೆ ಈಗ ಸ್ತ್ರೀ ಶಕ್ತಿ ಸಂಘಟನೆಗ ಅಸ್ತಿತ್ವಕ್ಕೆ ಬಂದ ಮೇಲೆಒಗ್ಗಟ್ಟ್‌ನೊಟ್ಟಿಗೆ ಆರ್ಥಿಕ ತೊಂದರೆನ ಪರಿಹಾರ ಮಾಡಿಕಂಡ್ ಯಶಸ್ವಿ ಹೆಜ್ಜೆ ಹಾಕ್‌ತ ಒಳೊ. ಸರಕಾರ ಮಾತ್ರ ಅಲ್ಲ, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವೂ ಈ ನಿಟ್ಟ್‌ಲಿ ಗ್ರಾಮಾಭಿವೃದ್ಧಿ ಯೋಜನೆನ ಜಾರಿಗೆ ತಂದ್ ಗ್ರಾಮ ಗ್ರಾಮಗಳ್‌ಲಿ. ಹೆಣ್ಮಕ್ಕ ಸಂಘಟಿತರಾಗಿ ಧನ ಸಾಯಂದ ತಮ್ಮ ಬದ್ಕ್‌ನ ಉತ್ತಮ ಮಾಡ್ಕಂಡೊಳೊ. ಇದ್‌ಂದ ಗಾಂಧೀಜಿಯುವರ ಗ್ರಾಮಾಭಿವೃದ್ಧಿ ಕನ್ಸ್ ನನ್ಸಾದಂಗೆ ಆದೆ.ಅಂದ್‌ನ ಕೊಡಗ್‌ಗೂ ಇಂದ್‌ನ

ಕೊಡಗ್‌ಗೂ ಅಜಗಜಾಂತರ ಉಟ್ಟು. ಆದರೂ ಹಿಂದೆನ ಜೀವನನೇ ಬಹಳ ಲಾಯ್ಕ ಇತ್‌ತೇಳ್ದರ್‌ಲಿ ಎರಡ್ ಮಾತಿಲ್ಲೆ. ಈ ಆಧುನಿಕ ಯುಗಲಿ ಎಲ್ಲ ಫ್ಯಾಷನ್ ಆಗಿ, ಪ್ರತಿಷ್ಠೆ ಆಗಿ ಬದ್ಲಾಗುಟ್ಟು. ಜಗತ್‌ನ ಅಂಗೈಲಿ ನೋಡುವ ತಂತ್ರ ಜ್ಞಾನ ಬಂದುಟ್ಟು.

ಹಿಂದೆ ಕೊಡಗ್‌ಲಿ ನಾಡ್‌ಗ ಇದ್ದೊ. ನಾಲ್ಕು ನಾಡು, ಕಡಿಯತ್ತು ನಾಡು, ಬೆಪ್ಪುನಾಡು, ಹೊರಮಲೆ ನಾಡು, ತಾವು ನಾಡು, ಕಿಗ್ಗಟ್ಟು ನಾಡು, ನೂರೊಕ್ಕಲು ನಾಡು, (ನೂರು ಕುಟುಂಬಗಳಿಂದ ಕಾಡಿದ ನಾಡು) ಹಿಂಗೆ ಹಲವಾರ್ ನಾಡ್‌ಗಳಿಂದ ಕೂಡಿತ್. ಈಗ ಹೊದ್ದೂರು, ಕೋಡಂಬೂರು, ಕಾಂತೂರು ಗ್ರಾಮಗಳ್‌ಂದ ಕೂಡ್ದ ಊರೇ ಮೂರ್ನಾಡು. ಇಂದ್ ತಾಲೂಕು ಮತ್ತೆ ಹೋಬಳಿಗಳಾಗಿ ಕೊಡಗು ಪರಿವರ್ತನೆ ಆಗುಟ್ಟು. ಕೊಡಗ್ ಮಡಿಕೇರಿ, ವೀರಾಜಪೇಟೆತ ಎರಡೇವಿಧಾನಸಭಾಕ್ಷೇತ್ರ ಆಗುಟು. ಮೂರು ತಾಲೂಕುಗಳಾಗಿದ್ದಿದ್ದರೆ ಅಭಿವೃದ್ಧಿ ಕೆಲ್ಸಗಳಿಗೆ ಒಳ್ಳೆದಾತಿತ್‌ತ ನನ್ನ ಭಾವನೆ. ಹಿಂದೆ ಕೊಡಗ್‌ಲಿ ಅಬ್ಬಿ ಜಲಪಾತ,ಮತ್ತೆ ಇರ್ಪು ಜಲಪಾತಗ ಇದ್ದೊ. ಈಗ ಸುಮಾರ್ ಒಳೊ. ಕೊಡಗ್ ಈಗ ಪ್ರವಾಸೋದ್ಯಮ ಕೇಂದ್ರ ಆಗುಟು. ಇದ್ ಬೆಟ್ಟ ಗುಡ್ಡಗಳ್‌ಂದ ಕೂಡ್ದ ಹಸ್ರ್ ತಾಣ. ಶುದ್ಧಗಾಳಿ ಉಟ್ಟು. ತಂಪುಹವೆ, ಮಲೆನಾಡ್ ಪ್ರದೇಶ, ಕಾಫಿ ತೋಟಗಳ ಸೌಂದರ್ಯ ನೋಡ್ರೆ ಕಣ್ಣ್‌ಗೆ ಹಬ್ಬ. ಈ ಜಿಲ್ಲೆನ ರಾಜಧಾನಿತ ಆಗಿರುವ ಮಡಿಕೇರಿ ರಾಜಾಸೀಟ್ ನೋಡಿಕೆ ಕುಸಿ ಆದೆ. ಅಲ್ಲಿನ ಗಾಂಧಿ ಮಂಟಪ, ಪುಟಣಿ ರೈಲ್, ಹೂವುನ ತೋಟ, ದೇವಸ್ಥಾನ ಎಲ್ಲ ನೋಡಿಕೆ ಇನ್ನೊಮ್ಮೆ ನೋಣ್ನೊತ ಆದೆ. ಮಡಿಕೇರಿ ಕೋಟೆ, ಓಂಕಾರೇಶ್ವರ ದೇವಸ್ಥಾನ ನೋಡುವಂತದೇ. ಎಲ್ಲಿತ್ತೇಳ್ರೆ ಅಲ್ಲಿ ಹಸ್ರ್‌ಂದ ಕೂಡ್ದ ಬತ್ತದ ಗದ್ದೆ ಕಾಂಬತಿತ್. ಈಗ ಅಂತ ಗದ್ದೆಗ ಬಹಳಷ್ಟ್ ಕಡಿಮೆ ಆಗುಟ್ಟು.

ಈ ಜಿಲ್ಲೆನ ವಿಶೇಷ ಹಬ್ಬ ಕೈಲ್ ಮೂಹೂರ್ತ. ಪ್ರತೀ

ವರ್ಷದ ಸೆಪ್ಟೆಂಬರ್ 3ರಂದ್ ನಡ್ದದೆ. ಅಂದ್ ರೈತರ್ ತಮ್ಮ ಆಯುಧಗಳಾದ ಕತ್ತಿ, ಕೋವಿ, ನೊಗ, ನೇಗ್ಲ್‌ಗಳ್ನ ಒಂದ್ ಕಡೆ ಜೋಡಿ ಪೂಜೆ ಮಾಡಿವೆ. ಎತ್ತ್‌ಗಳ ಮೈ ತೊಳ್ದ್ ಅವ್ಕೆ ಅಲಂಕಾರ ಮಾಡಿ ಪೂಜಿಸುವೆ. ಇದ್ ರೈತರ್ ತಮ್ಮ ಬೇಸಾಯದ ಕೆಲ್ಸ ಗಳ್ನ ಆಕೀರ್ ಮಾಡಿ ಮಾಡುವ ಹಬ್ಬ. ಹುತ್ರಿ ಹಬ್ಬನೂ ವಿಶೇಷ ಹಬ್ಬ. ಕೇರಳದ ಓಣಂ ಹಬ್ಬಕ್ಕೂ ಇಲ್ಲಿನ ಹುತ್ತರಿ ಹಬ್ಬಕ್ಕೂ ನಿಕಟ ಸಂಬಂಧ ಉಟ್ಟು. ಓಣಂ ಹಬ್ಬದ ದಿನಂದ 90 ದಿನ ಆದ ಕೂಡ್ಲೆ ಕೊಡಗ್‌ಲಿ ಕೃತಿಕ ಇಲ್ಲರೆ ರೋಹಿಣಿ ನಕ್ಷಲಿ ಹುತ್ರಿ ಹಬ್ಬನ ಆಚರಿಸುವೆ. ಈ ವರ್ಷ ಸೆಪ್ಟೆಂಬರ್ 6 ರಂದ್ ಓಣಂ ಆಚರಿಸಿದೊ. ಹಂಗಾಗಿ ಕೊಡಗ್‌ಲಿ ಇದೇ ಡಿಸೆಂಬರ್ 6 ಇಲ್ಲರೆ 7ರಂದ್ ಹುತ್ರಿ ಆಚರಿಸಿವೆ. ಈ ಹಬ್ಬದ ವಿಶೇಷತ್ತೇಳ್ರೆ ಹೊಸ ಅಕ್ಕಿನ ಮನೆಗೆ ಸೇರ್ಸುದು. ಹಂಗೆ ಒಂದ್ ವಾರಮುಟ್ಟ ಬೊಳಕಾಟು, ಕೋಲಾಟ, ಕಪ್ಪೆಯಾಟ, ಪರೆಕಳಿ ಇಂಥ ಆಟಗಳ್ನ ಆಡಿ ಕುಸಿಪಟ್ಟವೆ. ಹಿಂದೆಲ್ಲಾ ಜೋಗಿ ಆಟನೂ ಇತ್ತ್. ತ್ತೇಳ್ರೆ ಯವಕರ್ ವೇಷ ಬದಲಾಯಿಸಿಕಂಡ್ ಮನೆಮನೆಗಳಿಗೆ ಹಾಡಿಕಂಡ್ ಹೋದು. ಈ ಆ ಆಟ ಇಲ್ಲೆ.

ಈ ಜಿಲ್ಲೆನ ಯುವಕರ ಕ್ರೀಡೆಲಿ ಹೆಸ್ರ್ ಮಾಡಿಯೊಳಗೆ ಹಿಂದೆಂದೇ ಇಲ್ಲಿ ಕ್ರೀಡಾ ಚಟುವಟಿಕೆ ಇತ್ತ್ ಇತ್ತೀಚೆಗೆ ಕೆಸ್ರ್ ಗದ್ದೆಗಳ್‌ಲಿ ಕ್ರೀಡೆ ನಡ್ದದೆ. ಈಗೀಗ ಕುಟುಂಬ ಕುಟುಂಬಗಳ ನಡುಲಿ ಕ್ರೀಡಾ ಹಬ್ಬ ನಡಿತಾ ಉಟ್ಟು ಇಲ್ಲಿನ ಕ್ರೀಡಾ ಕೆಲ್ಸಕ್ಕೆ ಸರ್ಕಾರಂದ ಧನಸಾಯ ಸಿಕ್ಕಿದೆ. ಕ್ರೀಡೆಂದ ದೈಹಿಕವಾಗಿಯೂ, ಮಾನಸಿಕ ಆಗಿಯೂ ಉತ್ತೇಜನ ಸಿಕ್ಕಿದೆ. ಒಗ್ಗಟ್ಟ್‌ನ ತೋರ್ಸಿದಂಗಾದೆ. ನಮ್ಮ ಜಿಲ್ಲೆನ 5–6 ಕ್ರೀಡಾ ಪಟುಗ ಅಂತರಾಷ್ಟ್ರ ಮಟ್ಟದ ಒಲಂಪಿಕ್ಸ್‌ಲಿ ಚಿನ್ನದ ಪದಕ ಪಡ್ಕಂಡ್ ಕೊಡಗಿಗೆ ಕೀರ್ತೀ ತಂದೊಳೊ.

ಹೆಣ್ಮಕ್ಕಳೂ ಪದಕಗಳ ತಕ್ಕಂಡೊಳೊ. ಯುವಕ ಯುವತಿಗ ಚಲನ ಚಿತ್ರಗಳೂ ಕಾಣ್‌ಸ್ತಾ ಒಳೊ. ಕೊಡಗ್‌ನವರ ಆಯುಧಗಳ್‌ಲಿ

ಕೋವಿ, ಕತ್ತಿ, ಒಡಿಕತ್ತಿ, ಮುಖ್ಯ ಆಗುಟ್ಟು.ಇದ್ ಜಮ್ಮ ಹಿಡುವಳಿ ಕಾರರ ಅವಿಭಾಜ್ಯ ಅಂಗ.ಕೋವಿ ಮತ್ತೆ ಕತ್ತಿ ಗುರುತ್‌ನ ಕೊಡಗ್‌ನ ಜನ ವಾಹನಗಳ್‌ಲಿ ಹಾಕಂಬದರ ಕಾಣಕ್.

ಹಿಂದೆ ಕೊಡಗ್‌ಲಿ ಪ್ರಾಥಮಿಕ ಶಾಲಾ ಅಧ್ಯಾಪಕರ ತರಬೇತಿ ಕೇಂದ್ರ ಇತ್ತ್. ಈಗ ಪ್ರೌಢ ಶಾಲಾ ಶಿಕ್ಷಕರ, ಅರಣ್ಯ ಇಲಾಖೆನ,ಸೈನಿಕ ಶಾಲೆನ ತರಬೇತಿ ಕೇಂದ್ರಗ ಅಲ್ಲದೆ ತಾಂತ್ರಿಕ ಶಾಲೆಗ, ನವೋದಯ ಶಾಲೆಗ,ಕ್ರೀಡಾ ಶಾಲೆಗ ಎಲ್ಲ ಕಂಡ್ ಬಂದದೆ. ಸರಕಾರಿ ಮೆಡಿಕಲ್ ಕಾಲೇಜ್‌ನ ಕೆಲಸ ಆಗುತ್ತುಳು. ಕೊಡಗ್‌ನ ವೈದ್ಯಕೀಯ ಕಾಲೇಜ್‌ನ ಸ್ಥಾಪನೆ ಮಾಡಿಕೆ ಸುಳ್ಯದ ಶ್ರೀ ಕುರುಂಜಿ ವೆಂಕಟರಮಣ ಗೌಡರ್ ಜಾಗೆ ನೋಡುವಷ್ಟರಲ್ಲಿ ಕೊಡಗ್‌ನವು ನಾವೇ ಇಲ್ಲಿ ವೈದ್ಯಕೀಯ ಕಾಲೇಜ್ ಮಾಡಿವೆತ ಹೇಳಿ ಗೌಡರಿಗೆ ಅಡ್ಡಗಾಲ್ ಹಾಕಿದ್ದರ್‌ಂದ ಗೌಡರ್ ಅದರ ಗ್ಯಾನನ ಕೈಬುಟ್ಟೊ. ಅವ್ಕೆ ಅವಕಾಶ ಕೊಟ್ಟಿದ್ದರೆ ಅದ್ ಇಂದಿಗೂ ಕನ್ಸ್ ಕನ್ಸಾಗಿಯೇ ಉಳ್ದುಟು.

ಈಗ ಕೊಡಗ್‌ಲಿ ಭಾಷಾವಾರು ಅಕಾಡೆಮಿಗ ತಲೆ ಎತ್ತಿಯೊಳೊ. ಕೊಡವ ಮತ್ತೆ ಅರೆಭಾಷೆ ಅಕಾಡೆಮಿಗ ಇಂದ್ ಕಾರ್ಯ ನಿರ್ವಹಿಸುತ್ತಾ ಒಳೊ. ಕೊಡವ ಮತ್ತೆ ಅರೆಭಾಷೆಲಿ ಸಾಹಿತ್ಯ, ಸಂಗೀತ, ಕಾದಂಬರಿಗಳ್ನ ಬರ್ದ್ ಭಾಷೆ ಮತ್ತೆ ಸಂಸ್ಕೃತಿಗಳ್ನ ಪ್ರಚಾರ ಮಾಡಿಕೆ ಅಕಾಡೆಮಿಗ ಉತ್ತೇಜನ ಕೊಡ್ತಾ ಒಳೊ. ಕೊಡವ ಅಕಾಡೆಮಿಗೆ ಈಗ ಶ್ರೀ ಬಿದ್ದಟಂಡ ತಮ್ಮಯ್ಯನವು, ಅರೆಭಾಷೆ ಅಕಾಡೆಮಿಗೆ ಶ್ರೀ ಕೊಲ್ಯದ ಗಿರೀಶನವು ಅಧ್ಯಕ್ಷರಾಗೊಳೊ, ಸದಸ್ಯರ್‌ಗಳ ಆಯ್ಕೆ ಆಗುಟು. ಸರಕಾರಂದ ಅಕಾಡೆಮಿಗಳಿಗೆ ಅನುದಾನ ಸಿಕ್ಕುಟು. ಈ ಅನುದಾನಂದ ಅಕಾಡೆಮಿಗ ಕಾರ್ಯನಿರ್ವಹಿಸ್ತಾ ಒಳೊ. ಒಂದೆರ್ಡ್ ವರ್ಷಗಳ ಹಿಂದೆನೇ ಅಕಾಡೆಮಿಗ ರಚನೆ ಆಗಿದ್ದೊ. ಸುಮಾರ್ 1/2 ವರ್ಷ ಅಸ್ತಿತ್ವಲಿದ್ದ್ ಮತ್ತೆ ಕಾರಣಾಂತರಗಳ್‌ಂದ ಸ್ಥಗಿತ ಆಗಿತ್ತ್. ಈ ಅಕಾಡೆಮಿಗ ಡಿ.ವಿ. ಸದಾನಂದ ಗೌಡರ್ ಮತ್ತೆ ಸಭಾಪತಿಗಳಾದ

ಶ್ರೀ ಕೆ.ಜಿ. ಬೋಪಯ್ಯನವು ಕಾರಣಕರ್ತರ್.

ಈಗ ಭಾರತದ ಪ್ರಧಾನಿ ನರೇಂದ್ರ ಮೋದಿಯವರ ಸಚಿವ ಸಂಪುಟಲಿ ಕೊಡಗ್‌ನ ಅಳಿಯ ಶ್ರೀ ಸದಾನಂದಗೌಡರ್ 4ನೇ ಸ್ಥಾನಲಿ ಬಡ್ತಿ ಹೊಂದಿ ರೈಲ್ವೆ ಮಂತ್ರಿಗಳಾಗಿ ಕಾರ್ಯನಿರ್ವಹಿಸಿಕೆ ಕೊಡಗ್‌ನ ಹೆಣ್ಣ್ ಮಣ್ಣ್‌ನ ಗುಣತ ಹೇಳಿರೂ ತಪ್ಪಾಕಿಲೆ. ಕೊಡಗಿಗೆ ರೈಲ್ ವ್ಯವಸ್ಥೆ ಆಕೆ ಕೊಡಗ್‌ನ ಕುಲದೇವತೆ ಕಾವೇರಿ ಮಾತೆನ ಕೃಪೆ ಸದಾನಂದಗೌಡರ್ ಸ್ಫೂರ್ತಿ ಕೊಡಲಿತ ನಾವೆಲ್ಲ ಬೇಡಿಕಂಬನೊ. ಕೃಷಿನೇ ರೈತನ ಬೆನ್ನೆಲುಬುತ್ತೇಳ್ದು ಇನ್ನ್ ಮುಂದೆ ಪುಸ್ತಕಲೇ ಇದ್ದದೆಯೋ ಅಥವಾ ಪ್ರಾಯೋಗಿಕ ಆಗಿ ನಡ್ದದೆಯೋ ಕಾದ್ ನೋಡಿಕಾದೆ. ಇಂದ್ ಕೊಡಗ್ ಮಾತ್ರ ಅಲ್ಲ ಇನ್ನಿತರ ಪ್ರದೇಶಗಳಲ್ಲಿನೂ ಭತ್ತದ ಬೇಸಾಯ ಕಮ್ಮಿ ಆಗ್ತಾ ಉಟ್ಟು. ಕೃಷಿ ಭೂಮಿ ಹಿಂಗೆ ಪಾಳ್ ಬಿದ್ದರೆ ಭವಿಷ್ಯಲಿ ವಿನೋಭಾವೆಯವರೆ ಭೂದಾನ ತರದ ಚಳುವಳಿ ಆದರೂ ಆದು. ಕೊಡಗ್‌ನಾದ್ಯಂತ ಯುವಕರ್ ಪರ ಊರ್‌ಗಳಿಗೆ ಉದ್ಯೋಗನ ಹುಡ್ಕಿಕಂಡ್ ಹೋದಕ್ಕಿಂತ ತಮ್ಮ ಊರ್‌ಗಳ್‌ಲಿ ಕೃಷಿ ಒಂದ್ ಕಲೆ. ಆದಾಯನೂ ಉಟ್ಟು. ಒಳ್ಳ ಆಹಾರ ಸಿಕ್ಕುದರ್‌ಂದ ಆರೋಗ್ಯವಂತರಾಗಿ ಬದ್ಕಕ್‌ತ ನನ್ನ ಅನಿಸಿಕೆ. ಪರರ ಸಂಗಂದ ದೂರಾಗಿ ಸ್ವಾವಲಂಬಿ ಆಗಿ ಸಮಯನ ಸದುಪಯೋಗ ಮಾಡಿಕಂಡ್ ಪ್ರೀತಿ ವಿಶ್ವಾಸಂದ ಬಾಳಿಕೆ ಇದೊಂದ್ ದಾರಿದೀಪ.

ಪ್ರಧಾನಿ ನರೇಂದ್ರ ಮೋದಿಯವರ ಸ್ವಚ್ಚ ಭಾರತದ ಕನ್ಸ್ ನನ್ಸಾಕೊರೆ ಡೆಲ್ಲಿಂದ ಹಳ್ಳಿ ಮುಟ್ಟ ಶುಚಿ ಆಕು. ಬರೀ ಪೇಟೆ ಪಟ್ಟಣಗಳ ಶುಚಿ ಮಾತ್ರ ಅಲ್ಲ ಹಳ್ಳಿ ಪರಿಸರನೂ ಶುಚಿ ಮಾಡೊಕು. ಇಂದ್ ಅಧಿಕಾರಿಗ ಹೆದ್ದಾರಿಗಳ್‌ಲಿ ಓಡಾಡಿವೆ. ಗ್ರಾಮಾಂತರ ಪ್ರದೇಶಗಳ ರಸ್ತೆಗಳ್‌ಲಿ ರೈತರೇ ಓಡಾಡಿವೆ. ಗ್ರಾಮಾಂತರ ಪ್ರದೇಶಗಳ ರಸ್ತೆಗ ಇಂದ್ ಬಹಳಷ್ಟ್ ಸುಧಾರಿಸುಟ್ಟು. ಆದರೆ ರಸ್ತೆ ಕರೆಲಿರುವ

ಕಳೆಗಿಡಗ ಕುರುಚಲ ಗಿಡಗ, ಚಿತ್ರಂಗಿ ಮುಳ್ಳು. ಬೆಳ್ಕಂಡುಟ್ಟು. ಇದೆಲ್ಲಾ ತೆಗೆದಿದ್ದರೆ ಸ್ವಚ್ಛಹಳ್ಳಿತ ಆದುಲೆ ಸರಕಾರ ಸ್ವಚ್ಛ ಭಾರತದ ಅಡಿಲಿ ಗ್ರಾಮ ಪಂಚಾಯಿತಿಗಳಿಗೆ ಕೊಡುವ 20 ಲಕ್ಷಹಣಲಿ ಸುರೂಗೆ ಗ್ರಾಮ ಪಂಚಾಯಿತಿಗ ಗ್ರಾಮಗಳ ರಸ್ತೆ ಕರೆನ ಶುದ್ಧ ಮಾಡೊಕು. ಹಿಂದೆ ಪಿಡಬ್ಲೂಡಿ (ಲೋಕೋಪಯೋಗಿ ಇಲಾಖೆ) ರಸ್ತೆ ಕರೆಗಳ ಸ್ವಚ್ಛ ಮಾಡ್‌ತಿತ್ತ್. ಅದ್ಕೆ ಒಂದ್ ತಂಡನೇ ಇರ್ತಿತ್. ಇಂದ್ ಅದೆಲ್ಲಾ ಮಾಯ ಆಗುಟುಹಿಂದೆ ಬತ್ತ ಬೆಳೆಕನ ಆ ಕೃಷಿ ಭೂಮಿ ಸ್ವಚ್ಛ ಆಗಿರ್‌ತಿತ್ತ್. ಈಗ ಅಂತಾ ಭೂಮಿ ಪಾಳ್ ಬಿದ್ದ್ ತೋಡು, ತೋಡು ಕರೆ, ಪುಣಿ ಎಲ್ಲ ಹಾಳಾಗುಟು. ಹಂಗಾಗಿ ರೈತರ್ ಕೃಷಿ ಬಗ್ಗೆ ನಿಗ ಕೊಟ್ಟರೆ ಸ್ವಚ್ಛ ಭಾರತ ಆದರ್‌ಲಿ ಸಂಶಯ ಇಲ್ಲೆ. ಸರಕಾರ ಸಂಘ ಸಂಸ್ಥೆಗ, ಜನ ಎಲ್ಲ ಒಟ್ಟಾದರೆ ಎಲ್ಲನೂ ಸ್ವಚ್ಛ ಆದೆ.

ಹಿಂದೆ ಶಾಲಾ ಆವರಣನ ಸ್ವಚ್ಛಮಾಡಿಕೆ ಅರ್ಧ ಗಂಟೆ ಸಮಯ ಅದ್ಕಾಗಿ ಅಲಾಯಿದ ಇರ್ತಿತ್. ಬೆಳಿಗ್ಗೆ 9ರ್‌ಂದ 9–30 ಗಂಟೆ ಒಳಗೆ ಸಫಾಯಿ ಕೆಲ್ಸನ ಮಕ್ಕ ಮಡ್ತಿದ್ದೊ. ಒಟ್ಟಿಗೆ ಶಿಕ್ಷಕರ್ ಇರ್ತಿದ್ದೊ. ಇಂದ್ ವಿದ್ಯಾರ್ಥಿಗಳ್‌ಂದ ಕೆಲ್ಸ ಮಾಡ್ಸಿರೆ ಪೋಷಕರ್‌ಂದ ಪುಕಾರ್‌ಬಂದದೆ. ಹಾಗಾಗಿ ಇಂದ್ ಈ ಕೆಲ್ಸ ಶಾಲಾಭಿವೃದ್ಧಿ ಸಮಿತಿಯವರ ಕೆಲ್ಸತ ಭಾವಿಸಿಕಂಬಕು ಅದ್ ಹಂಗಿರ್‌ಲಿ ಎಲ್ಲವೂ ಪರಸ್ಪರ ಕೂಡಿಕಂಡ್ ಕೆಲ್ಸ ಮಾಡಿ ದೇಶಾಭಿವೃದ್ಧಿ ಮಾಡನೊ.

ಶ್ರೀ ಕಾವೇರಿ ಮಾತೆ ಕೊಡಗ್‌ನ ಇಗ್ಗುತ್ತಪ್ಪ ದೇವರ ಮತ್ತೆ ಶ್ರೀ ವೆಂಕಟರಮಣ ದೇವರ ಕೃಪೆಂದ ನಮ್ಮ ಸುಂದರ ಕೊಡಗ್ ಯಾವುದೇ ಒಂದ್ ಪಂಗಡದ ಸೊತ್ತಾಗದೆ ಜಾತಿ, ಮತಭೇದ ಇಲ್ಲದೆ, ಅನ್ಯೋನ್ಯ ಪ್ರೀತಿ ವಿಶ್ವಾಸಂದ ಕೊಡಗ್‌ನವೆಲ್ಲ ಒಂದಾಗಿ ಬಾಳಿ ಬದ್ಕನೊತ ಆಶಿಸಿಕಂಡ್ ಈ ನನ್ನ ಬೆಳ್ಳಿಮುಷ್ಟಿ ಪುಸ್ತಕಕೆ ವಿರಾಮ ಹೇಳಿನೆ.

* * * * *



ಕಟ್ರತನ ಬೆಳ್ಯಪ್ಪ

ಹಿರಿಯರಾದ ಕಟ್ರತನ ಕೆ. ಬೆಳ್ಯಪ್ಪನವು ಅವರ ತೊಂಬತ್ತೊಂದನೆಯ ವಯಸ್ಸಿಲಿ "ಬೆಳ್ಳಮುಷ್ಟಿ"ಂತೇಳ್ವ ಪುಸ್ತಕನ ಅರೆಭಾಷೆಲಿ ಅವರ ಊರಾದ ಬಲಮುರಿ ಗ್ರಾಮದ ಇತಿಹಾಸ, ಅವರ ಜೀವನ ಚರಿತ್ರೆ, ಕೊಡಗು ಅಂದೂ ಇಂದು ಮತ್ತೆ ಹೆಣ್ಣು ಹೊನ್ನು ಮುಣ್ಣುಂತೇಳ್ವ ನಾಲ್ಕು ವಿಷಯಗಳ ಬಗ್ಗೆ ಬರ್ದ್ ಅವರ ಅನುಭವಗಳನ್ನ ಹಂಚಿಕಂಡದ್ದ್ ತುಂಬಾ ಮೆಚ್ಚುವಂತದ್ದ್. ಶ್ರೀಯುತರ್ ನನ್ನ ನೆರೆಮನೆವು. ಅಂದ್‌ನ ಕಾಲದ ಮೆಟ್ರಿಕ್ಯೂಲೇಶನ್ ಓದಿ ಪಾಸ್ ಮಾಡಿಕಂಡ್ ಸ್ವಾತಂತ್ರ್ಯಕ್ಕೆ ಪೂರ್ವ ಉದ್ಯೋಗಕ್ಕೆ ಕಾಲಿಟ್ಟವು. ತಾವು ಬೇರೆ ಬೇರೆ ಶಾಲೆಲಿ ಉಪಾಧ್ಯಾಯರಾಗಿ ಸುಮಾರ್ 28ವರ್ಷಗಳ ಕಾಲ ಸೇವೆ ಸಲ್ಲಿಸಿ ಅವರ 55ನೇ ವರ್ಷ ಪ್ರಾಯಕ್ಕೆ ನಿವೃತ್ತಿ ಹೊಂದಿದೊ.

ಶ್ರೀ ಬೆಳ್ಯಪ್ಪನವು ಒಬ್ಬ ಕ್ರಿಯಾಶೀಲ ವ್ಯಕ್ತಿ. ಸಮಯವನ್ನ ಸದುಪಯೋಗ ಪಡಿಸಿಕಂಬದಲ್ಲಿ ಎತ್ತಿದ ಕೈ. ಎಲ್ಲಾ ಉದ್ಯೋಗಗಳಿಂದ ನಿವೃತ್ತಿ ಹೊಂದಿದರೂ, ಅವು ಕೃಷಿ ಕಾರ್ಯಂದ ನಿವೃತ್ತಿ ಹೊಂದಿತ್ಲೆ. ಬಿಡುವಿನ ಸಮಯಲಿ ಪತ್ರಿಕೆಗಳಿಗೆ ಲೇಖನ ಬರೆಯುದು, ಆಕಾಶವಾಣಿಲಿ ಅರೆಭಾಷೆಲಿ ಹಂಗೇನೆ ಕನ್ನಡಲಿ ಸಂವಾದ ಕಾರ್ಯಕ್ರಮಗಳಲಿ ಭಾಗವಹಿಸುದು ಇವರ ಈಗಿನ ಹವ್ಯಾಸ. ಪುಸ್ತಕ ಓದುದು ದೈನಂದಿನ ಕಾರ್ಯಕ್ರಮ. ಕಿರಿಯರಿಗೆ ಇವರ ಮಾರ್ಗದರ್ಶನ ಅತ್ಯವಶ್ಯಕ. ಇವು ಅರೆಭಾಷೆಲಿ ನಮ್ಮ ಕೇರಿನ ಮೂರು ಕುಟುಂಬಗಳ ಸೌಹಾರ್ದತೆಂತೇಳುವ ಪುಸ್ತಕ ಬರೆದೊಳೊ.

ಸಂಘ ಸಂಸ್ಥೆಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ ಇವರ ಉದಾರ ಕೊಡುಗೆಗ ಅಪಾರವಾದದ್. ಶ್ರೀಯುತರ್ ಒಬ್ಬ ದಾನಶೂರರ್‌ಂತ ಹೇಳಿದರೂ ತೊಪ್ಪಾದುಲೆ. ಇವರ 'ಬೆಳ್ಳಮುಷ್ಟಿ' ಪುಸ್ತಕನ ಎಲ್ಲವೂ ಓದಿ ಹೆಮ್ಮೆ ಪಡಲೀಂತ ಹಾರೈಸಿ ಅವರ್ನ ಅಭಿನಂದಿಸಿನೆ.

ಕೊಟ್ಟಕೇರಿಯನ ಡಿ. ದಯಾನಂದ,
ವಕೀಲರು, ಮಡಿಕೇರಿ.